ಸಂಪುಟ: 05 ಸಂಚಿಕೆ: 16 ಪುಟಗಳು: 08 ಭಾನುವಾರ 30 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ನಾಡಿನ ಸಮಸ್ತ ಜನತೆಗೆ ಹಾಗೂ ಪತ್ರಿಕಾ ಓದುಗರು, ವರದಿಗಾರರು, ಜಾಹೀರಾತುದಾರರಿಗೆ
ಪತ್ರಿಕಾ ಬಳಗದಿಂದ
**ಯುಗಾದಿ ಹಬ್ಬದ**
**ಹಾರ್ದಿಕ ಶುಭಾಶಯಗಳು**

ಸೂಚನೆ: ಹಬ್ಬದ ನಿಮಿತ್ತ ಭಾನುವಾರ ಕಚೇರಿಗೆ ಬಿಡುವು ಇರುವ ಕಾರಣದಿಂದ ಸೋಮವಾರ ಪತ್ರಿಕೆ ಮುದ್ರಣವಾಗುವುದಿಲ್ಲ.
-ಸಂಪಾದಕರು, ಉದಯವಾಹಿನಿ

# ಎತ್ತು ಏರಿಗೆ ಕೋಣ ನೀರಿಗೆ ಬಿಜೆಪಿ ಬೀದಿಗೆ!





**ಯತ್ನಾಳ್ ಉಚ್ಚಾಟನೆ ಖಂಡಿಸಿ ಬೃಹತ್ ಪ್ರತಿಭಟನೆ**

**ಯತ್ನಾಳ್ ಉಚ್ಚಾಟನೆ ಹಿಂಪಡೆಯದಿದ್ದರೆ ಜನಾಂದೋಲನ**

**ಯತ್ನಾಳ್‌ಗೆ ವಿಜಯೇಂದ್ರ ತಿರುಗೇಟು**

## ಏ.10ರೊಳಗೆ ಆದೇಶ ಹಿಂಪಡೆಯಿರಿ

• ಉದಯವಾಹಿನಿ, ಬೆಂಗಳೂರು

ಭ್ರಷ್ಟಾಚಾರ, ಕುಟುಂಬ ರಾಜಕಾರಣ ವಿರೊಧಿಸಿದಕ್ಕೆ ಪ್ರಖರ ಹಿಂದುತ್ವವಾದಿ ನಾಯಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಬಿಜೆಪಿ ಪಕ್ಷದಿಂದ ಉಚ್ಛಾಟಿಸಿದ ಅನ್ಯಾಯಕ್ಕೆ ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ನಗರದಲ್ಲಿ ಶುಕ್ರವಾರ ತಮ್ಮ ಶಕ್ತಿ ಪ್ರದರ್ಶನದ ಮೂಲಕ ಎಚ್ಚರಿಕೆಯ ಸಂದೇಶ ರವಾನಿಸಿದರು. ನಗರದ ಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ಜಮಾಯಿಸಿದ ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ಸಭೆ ನಡೆಸಿ, ನಂತರ ಯಡಿಯೂರಪ್ಪ ಮತ್ತು ವಿಜಯೇಂದ್ರನ ಹೆಣದ ಪ್ರತಿಕೃತಿ ಹೊತ್ತಿಕೊಂಡು ಮೆರವಣಿಗೆ ಮೂಲಕ ಗಾಂಧಿ ಚೌಕ್ ಗೆ ತೆರಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ ಬಳಿಕ, ಅಪ್ಪ ಮಕ್ಕಳ ಪ್ರತಿಕೃತ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯುದ್ದಕ್ಕೂ ಅಪ್ಪ ಕಳ್ಳ, ಮಗ ಸುಳ್ಳ, ಯಡಿಯೂರಪ್ಪ, ವಿಜಯೇಂದ್ರನಿಗೆ ಧಿಕ್ಕಾರ ಘೋಷಣೆಗಳು ಮೊಳಗಿದವು. ಪ್ರತಿಭಟನೆಯಲ್ಲಿ ಎಲ್ಲಿ ನೋಡಿದರಲ್ಲಿ ಕೇಸರಿಮಯವಾಗಿತ್ತು. ಭಾಗವಹಿಸಿದ್ದ ಪ್ರತಿಯೊಬ್ಬರ ತಲೆಗೆ ಕೇಸರಿ ಟೊಪ್ಪಿಗೆ, ಕೊರಳಿಗೆ ಕೇಸರಿ ಶಾಲು ಹಾಕಿರುವುದು ಗಮನ ಸೆಳೆಯಿತು.


ನಂತರ ಮಾತನಾಡಿದ ಸ್ವಾಮಿ ವಿವೇಕಾನಂದ ಸೇನೆ ಅಧ್ಯಕ್ಷ ರಾಘವ್ ಅಣ್ಣಿಗೇರಿ, ಬಸನಗೌಡರ ಆಸ್ತಿಯೇ ಹಿಂದುತ್ವ. ಅವರ ಶಕ್ತಿಯೇ ಸಮಸ್ತ ಹಿಂದೂಗಳು. ಪಕ್ಷ ಏನಾದರಾಗಲಿ ಕುಟುಂಬದ ಹಿತವೇ ಮುಖ್ಯ ಎನ್ನುವ ಅಪ್ಪ ಮಕ್ಕಳ ಕುತಂತ್ರ, ಕುಮ್ಮಕ್ಕಿನಿಂದ ಕೇವಲ ಬಸನಗೌಡ ಪಾಟೀಲ ಯತ್ನಾಳ್ ರನ್ನು ಹೊರಗೆ ಹಾಕಿಲ್ಲ. ಬದಲಾಗಿ ಇಡೀ ಹಿಂದುತ್ವವನ್ನೇ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ಪ್ರಖರ ಹಿಂದುತ್ವ ನಾಯಕರನ್ನು ಗುರಿಯನ್ನಾಗಿಸಿ ಒಬ್ಬೊಬ್ಬರನ್ನು ಮುಗಿಸುತ್ತಿರುವ

**ಯತ್ನಾಳ್ ಉಚ್ಚಾಟನೆ ಹಿಂಪಡೆಯಿರಿ**

**ಬಂಡಾಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷದಿಂದ ಹೊರಗಿಟ್ಟದ್ದನ್ನು ಮರುಪರಿಶೀಲಿಸುವಂತೆ ಬಿಜೆಪಿ ಭಿನ್ನಮತೀಯ ನಾಯಕರು ಸಭೆ ಸೇರಿ ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ಪಕ್ಷದಿಂದ ದೂರವಾಗುವ ಯಾವುದೇ ಯೋಜನೆ ಇಲ್ಲ. ತಮ್ಮ ಕಡೆಯಿಂದ ಯಾವುದೇ ತಪ್ಪುಗಳನ್ನು ಸರಿಪಡಿಸಲು ಸಿದ್ಧರಿದ್ದೇವೆ. ಆದರೆ ರಾಜ್ಯ ಘಟಕದ ಅಧ್ಯಕ್ಷ ಬಿ ವೈ ವಿಜಯೇಂದ್ರ ಅವರನ್ನು ಬದಲಾಯಿಸುವುದು ಸೇರಿದಂತೆ ಕರ್ನಾಟಕ ಬಿಜೆಪಿಯಲ್ಲಿ ಬದಲಾವಣೆಗಳಿಗಾಗಿ ಹೋರಾಡುವುದನ್ನು ಮುಂದುವರಿಸುತ್ತೇವೆ ಎಂದು ಹೇಳಿದರು. ಮಾಜಿ ಕೇಂದ್ರ ಸಚಿವ ಜಿ ಎಂ ಸಿದ್ದೇಶ್ವರ ಅವರ ಬೆಂಗಳೂರಿನ ನಿವಾಸದಲ್ಲಿ ಯತ್ನಾಳ್ ಜೊತೆಗೆ, ಶಾಸಕರಾದ ರಮೇಶ್ ಜಾರಕಿಹೊಳಿ ಮತ್ತು ಬಿ ಪಿ ಹರೀಶ್, ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.**

ಕುಟುಂಬವನ್ನು ನಂಬಿ ತೆಗೆದುಕೊಂಡಿರುವ ತಪ್ಪು ನಿರ್ಣಯವನ್ನು ಮತ್ತೊಮ್ಮೆ ಪರಿಶೀಲಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಸಮಸ್ತ ನಾಡಿನ ಹಿಂದೂಗಳೇ ತಕ್ಕ ಪಾಠ ಕಲಿಸುತ್ತಾರೆ ಎಚ್ಚರ ಇರಲಿ. ಹಿಂದುತ್ವದ ನಾಯಕ ಯಾರು ಅಂತ ಕೇಳಿದರೆ ಮೊದಲಿಗೆ ಬರುವ ಹೆಸರೇ ಬಸನಗೌಡ ಪಾಟೀಲ ಯತ್ನಾಳ್‌ರದ್ದು. ರಾಜ್ಯದಲ್ಲಿ ಎಲ್ಲೇ ಹಿಂದು ಕಾರ್ಯಕರ್ತರ ಕೊಲೆಯಾದರೆ, ಅವರ ಮೇಲೆ ದೌರ್ಜನ್ಯ ನಡೆದರೆ ಮೊದಲು ಅವರನ್ನು ಭೇಟಿ ಆಗಿ ಸಾಂತ್ವನದ ಜೊತೆಗೆ ಪರಿಹಾರ ನೀಡುವರು ಬಸನಗೌಡರು.ರೈತರ ಆಸ್ತಿಗಳನ್ನು ಕಬಳಿಸುವ ಹುನ್ನಾರ ತಡೆಯಲು ಮೊದಲು ಪ್ರಧಾನಮಂತ್ರಿಗಳಿಗೆ ಪತ್ರ ಬರೆದವರೇ ಬಸನಗೌಡರು. ಗಟ್ಟಿಯಾಗಿ ನಿಂತು ದಿಟ್ಟತನದಿಂದ ಹೋರಾಟ ಮಾಡಿ ಕಬಳಿಸಲು ಯತ್ನಿಸಿರುವ ಆಸ್ತಿ ಮರಳಿ ಜನರಿಗೆ ಸಿಗುವಂತೆ ಮಾಡಿದ ನಾಯಕರು ನಮ್ಮ ಬಸನಗೌಡರು. ಫಕೀರ ಬಸ್ತಿ ಆಗಿದ್ದ ವಿಜಯಪುರ ಹಿಂದುತ್ವ, ಶಾಂತಿಯ ಬೀಡು ಮಾಡಿದ್ದಾರೆ ಎಂದರು.

ದಯಾಸಾಗರ ಪಾಟೀಲ ಮಾತನಾಡಿ, ಬಿಜೆಪಿ ನಮ್ಮ ನಾಯಕರನ್ನು ಉಚ್ಚಾಟಿಸಿದ್ದು ದುರದೃಷ್ಟಕರ. ಅವರ ಶಕ್ತಿ ಏನೆಂಬುದನ್ನು ಹೈಕಮಾಂಡ್ ಮನಗಾಣಬೇಕು. ಅದನ್ನು ನಾವೆಲ್ಲರೂ ತೋರಿಸಬೇಕು. ಹಿಂದೂ ಸರ್ಕಾರ ತರುವ ಆಶಯವಿದೆ. ಯಾರೋ ಒಂದು ಕುಟುಂಬದ ಸ್ವಾರ್ಥಕ್ಕಾಗಿ ಪಕ್ಷ ಬಲಿ ಕೊಡುವುದು ಒಳ್ಳೆಯದಲ್ಲ. ಹಿಂದುತ್ವ ನಾಯಕರನ್ನು ಸಹ ಮೂಲೆಗುಂಪು ಮಾಡಲಾಗುತ್ತದೆ. ಹಿಂದೂ ಹುಲಿ ಶಾಸಕರು ಇದಾರಂತ ವಿಜಯಪುರ ಶಾಂತವಾಗಿದೆ. ದೇಶದಲ್ಲೂ ಇದೇ ರೀತಿ ಶಾಂತ ನಾಡಬೇಕಾದರೆ ಬಸನಗೌಡರು ಸಿಎಂ ಆಗಬೇಕು. ಹೈಕಮಾಂಡ್ ತಮ್ಮ ನಿರ್ಧಾರ ಹಿಂಪಡೆಯಬೇಕೆಂದು ಆಗ್ರಹಿಸಿದರು.




ಅಧಿವೇಶನ ಮುಗಿಯುವ ಕೊನೆಯ ದಿನ ಗೌರವಾನ್ವಿತ ಸ್ಪೀಕರ್ ಬಿಜೆಪಿಯ 18 ಶಾಸಕರನ್ನು 6 ತಿಂಗಳ ಕಾಲ ಅಮಾನತು ಮಾಡಿದ್ದಾರೆ. ಸ್ಪೀಕರ್ ಅವರ ಸರ್ವಾಧಿಕಾರಿ ಧೋರಣೆ ಸರಿಯಲ್ಲ. ಏ.2ರಂದು ಬೆಳಿಗ್ಗೆ ವಿಧಾನಸೌಧ ಮುಂಭಾಗದ ಕೆಂಗಲ್ ಹನುಮಂತಯ್ಯ ಪ್ರತಿಮೆಯ ಮುಂದೆ ನಮ್ಮೆಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು ಪ್ರತಿಭಟನೆ ಮಾಡುತ್ತೇವೆ. ಸ್ಪೀಕರ್ ಅವರಿಗೆ ಮನವಿ ಸಲ್ಲಿಸುತ್ತೇವೆ ಎಂದು ವಿಜಯೇಂದ್ರ ತಿಳಿಸಿದರು. ಸ್ಪೀಕರ್ ತೀರ್ಮಾನವು ಮತದಾರರಿಗೆ ಮಾಡಿದ ಅವಮಾನವಾಗಿದೆ. 18 ಶಾಸಕರ ಅಮಾನತನ್ನು ಹಿಂದಕ್ಕೆ ಪಡೆಯುವವರೆಗೆ ಬಿಜೆಪಿಯ ಶಾಸಕರು, ವಿಧಾನಪರಿಷತ್ ಸದಸ್ಯರು ಕಮಿಟಿ ಮೀಟಿಂಗ್‌ಗಳಿಗೆ ಹಾಜರಾಗುವುದಿಲ್ಲ ಎಂದು ನಿರ್ಧರಿಸಲಾಗಿದೆ ಎಂದು ವಿವರಿಸಿದರು. ಏಪ್ರಿಲ್ 4ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, 5ರಂದು ಎಲ್ಲಾ ಮಂಡಲಗಳಲ್ಲಿಯೂ ಸಹ ಬಿಜೆಪಿಯಿಂದ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ಮಾಡಲಿದ್ದೇವೆ ಎಂದರು.

**ಕೆಂಗಲ್ ಹನುಮಂತಯ್ಯ ಪ್ರತಿಮೆಯ ಎದುರು ಪ್ರತಿಭಟನೆ**

### ಹಿಂದೂಗಳಿಗೆ ಮಾಡಿದ ಅವಮಾನ

ಹಿಂದೂ ವಿರೋಧಿ ಕಾಂಗ್ರೇಸ್ ಸರ್ಕಾರವು ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ.4ರ ಮೀಸಲಾತಿ ನೀಡಿದ್ದು, ಇದು ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆಯಂತಿದೆ. ಹಿಂದೂಗಳಿಗೆ ಮಾಡಿದ ಈ ಅವಮಾನದ ವಿರುದ್ಧ ಜನಜಾಗೃತಿ ಮೂಡಿಸುತ್ತೇವೆ. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಿಗೆ ಪ್ರವಾಸ ಮಾಡುತ್ತೇವೆ ಎಂದು ಹೇಳಿದರು.

### ಪಂಚಮಸಾಲಿ ಸ್ವಾಮೀಜಿ ಎಚ್ಚರಿಕೆ



ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಬಿಜೆಪಿಯಿಂದ ಉಚ್ಚಾಟನೆ ಆದೇಶವನ್ನು ಏಪ್ರಿಲ್ 10 ರೊಳಗಾಗಿ ಹಿಂಪಡೆಯದಿದ್ದರೆ ಜನಾಂದೋಲನ ನಡೆಸುವುದಾಗಿ ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಪಂಚಮಸಾಲಿ ಸಮಾಜದ ಶಾಸಕರಾದ ಯತ್ನಾಳ್‌ರಿಗೆ ಅನ್ಯಾಯವಾಗಿರುವುದರ ವಿರುದ್ಧ ನಾನು ಧ್ವನಿ ಎತ್ತಿದ್ದೇನೆ. ಆದರೆ, ಕೆಲವರು ನಮ್ಮ ಸಮಾಜದ ವಿಷಯದಲ್ಲಿ ಮೂಗು ತೂರಿಸುತ್ತಿರುವುದು ಖಂಡನೀಯ ಎಂದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಅನ್ಯಾಯವಾದರೂ ನಾನು ಅವರ ಪರವಾಗಿ ನಿಲ್ಲುವೆ. ನಾನೊಬ್ಬನೇ ಅಲ್ಲ, ಎಲ್ಲಾ ಸಮಾಜದ ಶ್ರೀಗಳು ಸಹ ತಮ್ಮ ಸಮಾಜಕ್ಕೆ ಅನ್ಯಾಯವಾದಾಗ ಪ್ರತಿಭಟನೆ ಮಾಡಿರುವ ಉದಾಹರಣೆ ಇದೆ ಎಂದು ಹೇಳಿದರು. ಪಂಚಮಸಾಲಿ ಸಮಾಜದ ಮೀಸಲಾತಿ ಹೋರಾಟ, ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಕಳಕಳಿ ಹೊಂದಿರುವ ಜನಪರ ನಾಯಕ ಯತ್ನಾಳ್ ಅವರ ಬೆನ್ನಿಗೆ ನಿಂತಿದ್ದೇನೆ, ಉಚ್ಚಾಟನೆ ಮಾಡಿರುವುದನ್ನು ಖಂಡಿಸಿದ್ದೇನೆ ಎಂದರು.

## ಕಾಂಗ್ರೆಸ್‌ನಲ್ಲಿ ಏನೇ ಆದರೂ ಹೈಕಮಾಂಡ್ ತೀರ್ಮಾನ ಅಂತಿಮ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್‌ನಲ್ಲಿ ಏನೇ ತೀರ್ಮಾನ ಆಗಬೇಕಾದರೂ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಸಮಾಜ ಕಲ್ಯಾಣ ಸಚಿವ ಹೆಚ್ .ಸಿ.ಮಹದೇವಪ್ಪ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸಚಿವ ಸತೀಶ್ ಜಾರಕಿಹೊಳಿ ಭೇಟಿ ಬಳಿಕ ಮಾತನಾಡಿದ ಅವರು ಸತೀಶ್ ಜಾರಕಿಹೊಳಿ ಹಾಗೂ ನಮ್ಮ ಸಂಬಂಧ ಮೂವತ್ತು ವರ್ಷಕ್ಕಿಂತ ಹೆಚ್ಚಿನದು. ಸತೀಶ್ ಜಾರಕಿಹೊಳಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಟನಲ್ ಬಗ್ಗೆ ಎಲ್ಲಾ ಚರ್ಚೆ ಮಾಡಿದರು. ದೆಹಲಿಗೆ ಹೋದಾಗ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡುವುದು ಎಲ್ಲಾ ಸಹಜ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಪವರ್ ಶೇರಿಂಗ್ ಏನೇ ಅಂದರು ಹೈಕಮಾಂಡ್ ಏನು ಅಭಿಪ್ರಾಯ ಹೇಳುತ್ತೋ ಅದೇ ಅಂತಿಮ. ನಮ್ಮಲ್ಲಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು. ರಾಜೇಂದ್ರ ಅವರು ಕಂಪ್ಲೆಂಟ್ ಕೊಟ್ಟಿದ್ದಾರೆ. ಪ್ರಭಾವಿ ಯಾರೂ ಎಂದು ನಾನು ಹೇಗೆ ಹೇಳೋಕಾಗುತ್ತದೆ. ತನಿಖೆ ಆಗಲಿ, ಸತ್ಯಾಸತ್ಯತೆ ಗೊತ್ತಾಗುತ್ತದೆ. ಸಂಪುಟ ಪುನರ್ ರಚನೆ ಹೈಕಮಾಂಡ್‌ಗೆ ಬಿಟ್ಟಿದ್ದು. ಶುಕ್ರವಾರ ಸಿಎಂ ಭೇಟಿ ಮಾಡಿದ್ದೆ. ದಲಿತ ಸಮಾವೇಶದ ಬಗ್ಗೆ ಚರ್ಚೆ ಆಗಿಲ್ಲ, ಅಂಬೇಡ್ಕರ್ ಜಯಂತಿ ಆಚರಣೆ ಬಗ್ಗೆ ಮಾತನಾಡಿದೆ ಅಷ್ಟೇ ಎಂದು ತಿಳಿಸಿದರು.

## ಉಚಿತ ಯೋಜನೆಗಳು ಅಪಾಯಕಾರಿ, ಯಾವುದನ್ನೂ ಫ್ರೀ ಕೊಡಬಾರದು

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಕಾಂಗ್ರೇಸ್ ಸರ್ಕಾರದ ಉಚಿತ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರತಿಪಕ್ಷಗಳಿಂದ ಆಗಾಗ ಆಕ್ಷೇಪ ವ್ಯಕ್ತವಾಗುತ್ತಲೇ ಇದೆ. ಇದೀಗ ಕಾಂಗ್ರೇಸ್ ಶಾಸಕ, ಕರ್ನಾಟಕ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೂ ಆಗಿರುವ ಆರ್‌ವಿ ದೇಶಪಾಂಡೆ ಕೂಡ ಉಚಿತ ಯೋಜನೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಉಚಿತ ಕೊಡುಗೆ ಎಂಬುದು ಅಪಾಯಕಾರಿ ಎಂದು ಅವರು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಅಂಬೇವಾಡಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಹೇಳಿಕೆ ನೀಡಿದ್ದಾರೆ. ಉಚಿತ ಗ್ಯಾರಂಟಿಗಳ ಬಗ್ಗೆ ಆರ್‌ವಿ ದೇಶಪಾಂಡೆ ಹೇಳಿದ್ದೇನು ಉಚಿತ ಕೊಡುಗೆ ಎಂಬುದು ಅಪಾಯಕಾರಿ ಪದ. ಜನರಿಗೆ ಏನನ್ನೂ ಉಚಿತವಾಗಿ ನೀಡಬಾರದು ಮತ್ತು ಪ್ರತಿಯೊಂದು ಸೇವೆಗೂ ಶುಲ್ಕ ನಿಗದಿಪಡಿಸಬೇಕು ಎಂದು ಆರ್‌ವಿ ದೇಶಪಾಂಡೆ ಅಭಿಪ್ರಾಯಪಟ್ಟಿದ್ದಾರೆ. ಶಕ್ತಿ ಯೋಜನೆಯಡಿ ಮಹಿಳೆಯರು ಉಚಿತ ಬಸ್ ಪ್ರಯಾಣವನ್ನು ಆನಂದಿಸುತ್ತಿದ್ದಾರೆ. ಈ ಯೋಜನೆಯನ್ನು ಪುರುಷರಿಗೂ ವಿಸ್ತರಿಸಬೇಕೆಂಬ ಬೇಡಿಕೆ ಇತ್ತು. ಎಲ್ಲವನ್ನೂ ಉಚಿತವಾಗಿ ನೀಡಿದರೆ ನಾವು ಸಾರಿಗೆ ಸಂಸ್ಥೆಗಳನ್ನು ನಡೆಸುವುದು ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ.

## ಸಿದ್ದಗಂಗಾ ಮಠದ ಕಾರ್ಯಕ್ರಮದಲ್ಲಿ ರಾಜನಾಥ್ ಸಿಂಗ್ ಜೊತೆ ಡಿಕೆಶಿ

• ಉದಯವಾಹಿನಿ, ತುಮಕೂರು



**118ನೇ ಜನ್ಮ ದಿನಾಚರಣೆ**

ಏಪ್ರಿಲ್ 1 ರಂದು ಸಿದ್ದಗಂಗಾ ಮಠದಲ್ಲಿ ನಡೆಯಲಿರುವ ಶ್ರೀ ಶಿವಕುಮಾರ ಸ್ವಾಮೀಜಿಯವರ 118ನೇ ಜನ್ಮ ದಿನಾಚರಣೆಯಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವ ಕುಮಾರ್ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ವೇದಿಕೆ ಹಂಚಿಕೊಳ್ಳಲಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ರಾಜನಾಥ್ ಸಿಂಗ್ ಅವರು ಸಮಾರಂಭವನ್ನು ಉದ್ಘಾಟಿಸಲಿದ್ದಾರೆ, ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ ಸೋಮಣ್ಣ, ಗೃಹ ಸಚಿವ ಡಾ ಜಿ ಪರಮೇಶ್ವರ ಮತ್ತು ಸಹಕಾರ ಸಚಿವ ಕೆ ಎನ್ ರಾಜಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇತ್ತೀಚೆಗೆ ಸದ್ಗುರು ಜಗ್ಗಿ ವಾಸುದೇವ್ ಅವರ ಆಹ್ವಾನದ ಮೇರೆಗೆ ಕೊಯಮತ್ತೂರಿನಲ್ಲಿ ನಡೆದ ಮಹಾಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ಶಿವಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದು ರಾಜಕೀಯ ವಲಯದಲ್ಲಿ ಕೋಲಾಹಲಕ್ಕೆ ಕಾರಣವಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಣಕಾಲಿನ ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳದ ಕಾರಣ, ಡಿಸಿಎಂ ಅವರಿಗೆ ಅವಕಾಶ ಸಿಕ್ಕಿದೆ. ವಾಸ್ತವವಾಗಿ, ಏಪ್ರಿಲ್ 4 ರಂದು ನಿಗದಿಯಾಗಿದ್ದ ಶ್ರೀಗಳ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಬರಲು ಸಿದ್ಧರಾಗಿದ್ದರು. ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಲಾಗಿತ್ತು. ಆದರೆ ಮುರ್ಮು ಅವರ ಭಾಗವಹಿಸುವಿಕೆ ದೃಢೀಕರಿಸದ ಕಾರಣ, ಆಯೋಜಕರು ಕಾರ್ಯಕ್ರಮವನ್ನು ಏಪ್ರಿಲ್ 1 ಕ್ಕೆ ಮುಂದೂಡಿದರು ಎಂದು ಮೂಲಗಳು ತಿಳಿಸಿವೆ.

## ಸಿಕೆಎಸ್‌ಎಲ್‌ಟಿಎ ಕ್ರೀಡಾಂಗಣ ಎಸ್.ಎಂ.ಕೃಷ್ಣರ ಪರಿಶ್ರಮದ ಫಲ

• ಉದಯವಾಹಿನಿ, ಬೆಂಗಳೂರು



**ಅತ್ಯಾಧುನಿಕ ಟೆನಿಸ್ ಸಂಕೀರ್ಣ**

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಟೆನಿಸ್ ಕ್ರೀಡೆಯನ್ನು ತುಂಬಾ ಪ್ರೀತಿಸುತ್ತಿದ್ದರು. ಈ ಕ್ರೀಡಾಂಗಣ ಅವರ ಕಠಿಣ ಪರಿಶ್ರಮದ ಫಲ ಎಂದು ಕೆಎಸ್‌ಎಲ್‌ಟಿಎ ಅಧ್ಯಕ್ಷ ಮತ್ತು ವಿರೋಧ ಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ. ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಟೆನಿಸ್ ಕ್ರೀಡಾಂಗಣದ ಮರುನಾಮಕರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಎಲ್‌ಟಿಎ ವತಿಯಿಂದ ನಿರ್ವಹಿಸಲಾಗುತ್ತಿರುವ ಈ ಕ್ರೀಡಾಂಗಣಕ್ಕೆ ಎಸ್.ಎಂ.ಕೃಷ್ಣ ಹೆಸರು ಇಟ್ಟಿರುವುದರಿಂದ ಸಂತೋಷವಾಗುತ್ತಿದೆ ಎಂದರು. ಅತ್ಯಾಧುನಿಕ ಟೆನಿಸ್ ಸಂಕೀರ್ಣವನ್ನು ನಿರ್ಮಿಸಲು ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಏಳು ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ ಎಂದು ಆರ್. ಅಶೋಕ್‌ಹೇಳಿದರು. ದಿವಂಗತ ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ ಮಾತನಾಡಿ, ನಗರದ ಶ್ರೀಮಂತ ಸಮುದಾಯ ಮತ್ತು ಐಟಿ ವಲಯವು ಟೆನಿಸ್ ಕೋರ್ಟ್‌ನಲ್ಲಿ ಹೂಡಿಕೆ ಮಾಡಬೇಕು. ಇದರಿಂದ ಯುವ ಮತ್ತು ಮಹತ್ವಾಕಾಂಕ್ಷಿ ಟೆನಿಸ್ ತಾರೆಗಳಿಗೆ ಸಹಾಯ ಮಾಡಿದಂತಾಗುತ್ತದೆ ಎಂದರು. ಎಸ್.ಎಂ. ಕೃಷ್ಣ ಅವರಿಗೆ ಕ್ರೀಡೆಯ ಮೇಲೆ ಅಪಾರ ಪ್ರೀತಿ ಇತ್ತು. ಅವರಿಗೆ ಕ್ರೀಡೆ ಆಡುವುದು ಬಹಳ ಮುಖ್ಯ ಏಕೆಂದರೆ ಅದು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಈ ಗೌರವಕ್ಕಾಗಿ ನಾನು ಮತ್ತು ನನ್ನ ಕುಟುಂಬವು ಕೆಎಸ್‌ಎಲ್‌ಟಿಎಗೆ ಬಹಳ ಕೃತಜ್ಞರಾಗಿದ್ದೇನೆ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಕರ್ನಾಟಕದ 13 ಯುವ ಮತ್ತು ಉದಯೋನ್ಮುಖ ಟೆನಿಸ್ ಆಟಗಾರರಿಗೆ 12 ಲಕ್ಷರೂ. ಮೌಲ್ಯದ ಎಸ್.ಎಂ.ಕೃಷ್ಣ ಸ್ಮಾರಕ ವಿದ್ಯಾರ್ಥಿವೇತನವನ್ನು ನೀಡಲಾಯಿತು. ಎ.1ರಿಂದ 6ರ ವರೆಗೆ ಕ್ರೀಡಾಕೂಟ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

## 10 ಕೋಟಿ ರೂ. ವೆಚ್ಚದಲ್ಲಿ 3 ಹೈಟೆಕ್ ನರ್ಸರಿಗಳ ಸ್ಥಾಪನೆ

**| ಹಸಿರು ಹೊದಿಕೆಯನ್ನು ಹೆಚ್ಚಿಸುವತ್ತ ಹೆಚ್ಚಿನ ಒತ್ತು | 14 ಕೆರೆಗಳ ಪುನರುಜ್ಜೀವನ ಮತ್ತು ಅಭಿವೃದ್ಧಿಗಾಗಿ ರೂ.49 ಕೋಟಿ ಅನುದಾನ**

• ಉದಯವಾಹಿನಿ, ಬೆಂಗಳೂರು

ಇಂದು ಬಿಬಿಎಂಪಿ 2025 – 26 ನೇ ಸಾಲಿನ ಬಜೆಟ್‌ನ್ನು ಮಂಡನೆ ಮಾಡಲಾಯಿತು. ಅಧಿಕಾರಿಗಳೇ ಬಜೆಟ್ ಮಂಡನೆ ಮಾಡಿದ್ದು ವಿಶೇಷ. ಬೆಂಗಳೂರಿನ ಹಸಿರು ಹೊದಿಕೆಯನ್ನು ಹೆಚ್ಚಿಸುವತ್ತ ಹೆಚ್ಚಿನ ಒತ್ತು ನೀಡಲಾಗಿದೆ. ರಸ್ತೆಗಳ ಇಕ್ಕೆಲದಲ್ಲಿ, ಸರ್ಕಾರಿ ತೆರೆದ ಭೂಮಿ, ಕೆರೆಗಳು ಮತ್ತು ಉದ್ಯಾನವನಗಳಲ್ಲಿ ಸಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೆಡುವ ಬಗ್ಗೆ ವಿಶೇಷ ಒತ್ತು ನೀಡಲಾಗಿದೆ.

ಪಾಲಿಕೆಯ ಅರಣ್ಯ ವಿಭಾಗದ ಅವೆನ್ಯೂ ಪ್ಲಾಂಟೇಶನ್ ಉಪಕ್ರಮವು ಬೆಂಗಳೂರಿನ ಹಸಿರು ಹೊದಿಕೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸುತ್ತಿದೆ. ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು, ಕಾರ್ಪೊರೇಟ್ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಬೆಂಬಲದೊಂದಿಗೆ, 2024-25 ನೇ ಸಾಲಿನಲ್ಲಿ ನಗರದಾದ್ಯಂತ 1,13,000 ಸಸಿಗಳನ್ನು ನೆಡಲಾಗಿದೆ. ಪ್ರಮುಖ ರಸ್ತೆಗಳ ಇಕ್ಕೆಲದಲ್ಲಿ, ಸರ್ಕಾರಿ ತೆರೆದ ಭೂಮಿ, ಕೆರೆಗಳು ಮತ್ತು ಉದ್ಯಾನವನಗಳಲ್ಲಿ ಸಸಿಗಳನ್ನು ನೆಡುವ ಮೂಲಕ ವೈಜ್ಞಾನಿಕ ನೆಡುತೋಪುಗಳನ್ನು ಬೆಳೆಸಲಾಗಿದೆ. ಮಾಡಲಾಗಿದೆ. ಹಸಿರು ರಕ್ಷಕ ವೆಬ್‌ಸೈಟ್‌ನಲ್ಲಿ ಸದರಿ ಸ್ಥಳಗಳನ್ನು ಜಿಯೋ-ಟ್ಯಾಗ್ ಮಾಡಲಾಗಿದೆ. . ಪಾಲಿಕೆಯ ಅರಣ್ಯ ವಿಭಾಗವು ಮರಗಳ ವ್ಯವಸ್ಥಿತ ನಿರ್ವಹಣೆಗಾಗಿ 30 ತಂಡಗಳನ್ನು ನೇಮಿಸಿದ್ದು, ಈ ಮೂಲಕ ಮರಗಳನ್ನು ನಿರ್ವಹಿಸುತ್ತಿದೆ. ಇದು ಮರ ಬೀಳುವಿಕೆ ಮತ್ತು ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುತ್ತದೆ. ಹೆಚ್ಚುವರಿಯಾಗಿ, ಸಕಾಲ ಮತ್ತು ಸಹಾಯ ತಂತ್ರಾಂಶಗಳ ಮೂಲಕ 10,000 ಕ್ಕೂ ಹೆಚ್ಚು ಅರ್ಜಿಗಳನ್ನು ವಿಲೇವಾರಿಗೊಳಿಸಲಾಗಿದೆ. ಮಳೆಗಾಲದಲ್ಲಿ ಎಲ್ಲಾ ಪ್ರದೇಶಗಳನ್ನು ಏಕಕಾಲದಲ್ಲಿ ನಿರ್ವಹಿಸಲು ಹೆಚ್ಚುವರಿ ಕ್ಷಿಪ್ರ ಪ್ರತಿಕ್ರಿಯೆ ತಂಡಗಳನ್ನು ನಿಯೋಜಿಸಲಾಗಿದೆ.

15 ನೇ ಹಣಕಾಸು ಆಯೋಗ ಮತ್ತು ಪಾಲಿಕೆಯ ಅನುದಾನದ ಅಡಿಯಲ್ಲಿ ರೂ.10 ಕೋಟಿ ವೆಚ್ಚದಲ್ಲಿ ಮೂರು ಹೈಟೆಕ್ ನರ್ಸರಿಗಳನ್ನು ಸ್ಥಾಪಿಸಲಾಗುತ್ತಿದೆ. ಈ ನರ್ಸರಿಗಳಲ್ಲಿ ಸಸಿಗಳ ನಾಟಿ ಮತ್ತು ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸಲಾಗುವುದು.

ಮಾನ್ಯ ಉಚ್ಚ ನ್ಯಾಯಲಯದ ನಿರ್ದೇಶನದಂತೆ ಅಭಿವೃದ್ಧಿಪಡಿಸಿದ ಅಪ್ಲಿಕೇಶನ್ ಬಳಸಿ ಮರಗಳ ಗಣತಿಯನ್ನು ನಡೆಸಲಾಗುತ್ತಿದೆ.

ಇಲ್ಲಿಯವರೆಗೆ 4,69,846 ಮರಗಳನ್ನು ಎಣಿಸಿ, ಜಾತಿವಾರು ವರ್ಗೀಕರಿಸಲಾಗಿದೆ.



**ಬಿಬಿಎಂಪಿ ಬಜೆಟ್ 2025-26**

ಬೆಂಗಳೂರಿನ ಕೆರೆಗಳು ಪ್ರಮುಖ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮೌಲ್ಯವನ್ನು ಹೊಂದಿದ್ದು, ನಗರದ ವಾಸಯೋಗ್ಯತೆಯನ್ನು ಹೆಚ್ಚಿಸುತ್ತವೆ. ಪಾಲಿಕೆ ವ್ಯಾಪ್ತಿಯ ಒಟ್ಟು ಕೆರೆಗಳಲ್ಲಿ 136 ಕೆರೆಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. 35 ಕ್ಕೂ ಹೆಚ್ಚು ಕೆರೆಗಳಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ. ಎಲ್ಲಾ ಕೆರೆಗಳ ನಿರ್ವಹಣೆಗಾಗಿ ಸುಮಾರು ರೂ.40 ಕೋಟಿಗಳನ್ನು ಖರ್ಚು ಮಾಡಲಾಗುತ್ತಿದೆ.

### ಕೆರೆಗಳ ಅಭಿವೃದ್ಧಿಗೆ ಆದ್ಯತೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತನ್ನ ವ್ಯಾಪ್ತಿಯಲ್ಲಿ ಒಟ್ಟು 183 ಜೀವಂತ ಕೆರೆಗಳನ್ನು ಹೊಂದಿದೆ. ಈ ಕೆರೆಗಳನ್ನು ಅಭಿವೃದ್ಧಿಪಡಿಸುವುದು, ಪುನರುಜ್ಜೀವಗೊಳಿಸುವುದು ಮತ್ತು ನಿರ್ವಹಿಸುವುದು ಪಾಲಿಕೆಯ ಜವಾಬ್ದಾರಿಯಾಗಿದೆ. ಕೆರೆಗಳು ಅಂತರ್ಜಲ ಮರುಪೂರಣ, ಪ್ರವಾಹ ನಿಯಂತ್ರಣ, ವೈವಿಧ್ಯಮಯ ಪರಿಸರ ವ್ಯವಸ್ಥೆಯನ್ನು ರಕ್ಷಿಸುವುದು ಮತ್ತು ನಗರದ ಸೂಕ್ಷ್ಮ ಹವಾಮಾನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತವೆ.

ಕೆರೆಗಳ ದಿನನಿತ್ಯದ ನಿರ್ವಹಣೆಯ ಉತ್ತಮ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಗಾಗಿ, ಕೆರೆ ಮಿತ್ರ ಮೊಬೈಲ್ ಮತ್ತು ವೆಬ್ ಅಪ್ಲಿಕೇಶನ್ ಬಳಕೆಯಲ್ಲಿದೆ. ಕೆರೆಗಳ ನಿರ್ವಹಣೆಯಲ್ಲಿ ಟೆಂಡರ್‌ಗಳ ಮೂಲಕ ಗುರುತಿಸಲಾದ ಏಜೆನ್ಸಿಗಳನ್ನು ಮೇಲ್ವಿಚಾರಣೆ ಮಾಡಲು ಪಾಲಿಕೆಯ ಅಧಿಕಾರಿಗಳು ಈ ಮೊಬೈಲ್ ಅಪ್ಲಿಕೇಶನ್ ಅನ್ನು ಬಳಸಬಹುದಾಗಿದೆ.

ನಾಗರಿಕರು ತಮ್ಮ ಪರಿಶೀಲನಾ ವರದಿಗಳನ್ನು ಕೆರೆಗಳ ನಿರ್ವಹಣಾ ಅಭಿಯಂತರರುಗಳಿಗೆ ಸಲ್ಲಿಸಲು ಸ್ವಯಂಸೇವಕರಾಗಿ ಕೆರೆಮಿತ್ರ ಅಡಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಈ ಪರಿಶೀಲನಾ ವರದಿಗಳು ಸಾರ್ವಜನಿಕ ವೀಕ್ಷಣೆಗೆ ಲಭ್ಯವಿರುತ್ತದೆ. ಸಹಾಯ ಅಪ್ಲಿಕೇಶನ್‌ನಲ್ಲಿ ನಾಗರಿಕರು ಸಲ್ಲಿಸಿದ ದೂರುಗಳನ್ನು ಕೂಡ ಈ ಮೊಬೈಲ್ ಅಪ್ಲಿಕೇಶನ್ ಪರಿಗಣಿಸುತ್ತದೆ. ಪಾಲಿಕೆಯ ಕೆರೆಗಳಿಗೆ ಭದ್ರತೆ ಒದಗಿಸಲು 530 ಗೃಹರಕ್ಷಕರನ್ನು ನಿಯೋಜಿಸಲಾಗಿದೆ. ಪಾಲಿಕೆಯ ಕೆರೆಗಳ ವಿಭಾಗವು ಕೆರೆಗಳು ಮತ್ತು ಅವುಗಳ ಆವರಣಗಳನ್ನು ರಕ್ಷಿಸುವ ಬೃಹತ್ ಕಾರ್ಯವನ್ನು ಕೈಗೆತ್ತಿಕೊಂಡಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,120/Gram24ct ₹8,360/Gram22ct | ಬೆಳ್ಳಿ: ₹104.00/Gram

## ಕಾಂಗ್ರೆಸ್ ಎಟಿಎಂನಂತೆ ಬಳಸುತ್ತಿದೆ : ಜೆಡಿಎಸ್ ಆರೋಪ

• ಉದಯವಾಹಿನಿ, ಬೆಂಗಳೂರು

ಸಂಪದ್ಭರಿತವಾಗಿರುವ ಕರ್ನಾಟಕವನ್ನು ದಶಕಗಳ ಕಾಲ ಕಾಂಗ್ರೆಸ್ ಆಳ್ವಿಕೆ ಮಾಡಿ ಕೊಳ್ಳೆ ಹೊಡೆದಿದೆ. ಈಗಲೂ ಎಟಿಎಂನಂತೆ ಬಳಸಿಕೊಳ್ಳುತ್ತಿದೆ ಎಂದು ಜೆಡಿಎಸ್ ಆರೋಪಿಸಿದೆ.

ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ರೈತರ ಬಗ್ಗೆ ಕಾಳಜಿ ಇರುವ ಕಾರಣಕ್ಕೆ ಎರಡು ಬಾರಿ ರೈತರ ಸಾಲ ಮನ್ನಾ ಮಾಡಿದ್ದರು. ಅನ್ನದಾತರ ಅಹವಾಲು ಕೇಳಲೆಂದೇ ವಿಧಾನಸೌಧದ ಬಾಗಿಲನ್ನು ಸದಾ ತೆರೆದಿಟ್ಟು ರೈತರೊಂದಿಗೆ ಸಭೆಗಳನ್ನು ನಡೆಸಿದ್ದರು ಎಂದು ಹೇಳಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಉದ್ದೇಶಿಸಿ ಟೀಕಾ ಪ್ರಹಾರ ನಡೆಸಿರುವ ಜೆಡಿಎಸ್, ಹಿಂದಿನ ಕಾಂಗ್ರೆಸ್ ಸರ್ಕಾರ ಒಕ್ಕೂಟ ಸರ್ಕಾರದಲ್ಲಿ ಹೇಗೆ ಆಡಳಿತ ನಡೆಸಿತ್ತು ಎಂಬುದು ತಮಗೆ ಅರಿವಿಲ್ಲವೇ ಅಥವಾ ಮಂದಬುದ್ಧಿಯೇ ಜಾಣಕುರುಡೇ ಎಂಬ ಪ್ರಶ್ನೆಗಳ ಸುರಿಮಳೆಗೈದಿದೆ. ಮೊದಲು ಕರ್ನಾಟಕದಲ್ಲಿ ಲೂಟಿ ಮಾಡುವುದನ್ನು ನಿಲ್ಲಿಸಿ ಸರ್ಕಾರಿ ಗುತ್ತಿಗೆಯಲ್ಲಿ ಶೇ.60ರಷ್ಟು ಕಮೀಷನ್ ಪಡೆಯುವುದನ್ನು ನಿಲ್ಲಿಸಿ ಬೆಂಗಳೂರಿನಲ್ಲಿ ನಿಮ್ಮ ಕುಟುಂಬದ ಆಸ್ತಿ ವಿಸ್ತರಣೆ ಯೋಜನೆಗಳನ್ನು ನಿಲ್ಲಿಸಿ ಎಂದು ಡಿ.ಕೆ.ಶಿವಕುಮಾರ್ ಅವರನ್ನು ಆಗ್ರಹಿಸಿದೆ.

## ಹಸು ಮೈ ತೊಳೆಯಲು ಹೋದ ಮೂವರು ನೀರುಪಾಲು

• ಉದಯವಾಹಿನಿ, ಬೆಂಗಳೂರು

ಹಸು ಮೈ ತೊಳೆಯಲು ಕೆರೆಗೆ ಹೋಗಿದ್ದ ಯುವಕ ಮುಳುಗುತ್ತಿದ್ದುದನ್ನು ಗಮನಿಸಿ ರಕ್ಷಿಸಲು ಮುಂದಾದ ಇಬ್ಬರು ಸೇರಿದಂತೆ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಬೆಳಿಗ್ಗೆ ನಂಜನಗೂಡು ತಾಲ್ಲೂಕಿನ ಬಿಳಿಗೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.ಕಾಮಳ್ಳಿ ನಿವಾಸಿಗಳಾದ ವಿನೋದ, ಬಸವೇಗೌಡ ಮತ್ತು ಮುದ್ದೇಗೌಡ ಮೃತಪಟ್ಟವರು.ಬೆಳಿಗ್ಗೆ 8.30 ರ ಸುಮಾರಿನಲ್ಲಿ ವಿನೋದ ಎಂಬಾತ ಹಸು ಮೈ ತೊಳೆಯಲು ಕೆರೆಗೆ ಹೋಗಿದ್ದಾಗ ಹಸು ನೀರಿಗೆ ಇಳಿಯುತ್ತಿದ್ದಂತೆ ಸ್ವಲ್ಪ ಮುಂದೆ ಹೋಗಿದೆ. ಹಸು ಹಿಡಿದುಕೊಳ್ಳಲು ವಿನೋದ ಹೋದಾಗ ನೀರಿನಲ್ಲಿ ಮುಳುಗಿದ್ದಾರೆ.ಇದನ್ನು ಗಮನಿಸಿದ ಬಸವೇಗೌಡ ಹಾಗೂ ಮುದ್ದೇಗೌಡ ನೀರಿಗೆ ಇಳಿದು ವಿನೋದನನ್ನು ರಕ್ಷಿಸಲು ಯತ್ನಿಸಿದರಾದರೂ ಸಾಧ್ಯವಾಗದೆ ಅವರು ಸಹ ನೀರಿನಲ್ಲಿ ಮುಳುಗಿದ್ದಾರೆ. ಇದನ್ನು ಗಮನಿಸಿದ ಮತ್ತೊಬ್ಬರು ತಕ್ಷಣ ಊರಿನೊಳಗೆ ಹೋಗಿ ವಿಷಯ ತಿಳಿಸಿದ್ದಾರೆ. ಗ್ರಾಮಸ್ಥರು ಓಡಿ ಬಂದು ಕೆರೆಗೆ ಹಾರಿ ಮೂವರನ್ನು ರಕ್ಷಿಸಲು ಮುಂದಾದರಾದರೂ ಸಾಧ್ಯವಾಗಿಲ್ಲ. ವಿನೋದನ ಮೃತದೇಹ ಪತ್ತೆಯಾಗಿದ್ದು, ಇನ್ನಿಬ್ಬರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಸುದ್ದಿ ತಿಳಿದು ಬಿಳಿಗೆರೆ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಇನ್ನಿಬ್ಬರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

## ಅಂಬೇಡ್ಕರ್ ಜನ್ಮದಿನಕ್ಕೆ ರಜೆ ಘೋಷಣೆ ಸ್ವಾಗತಿಸಿದ ಹೆಚ್‌ಡಿ ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಜನ್ಮದಿನವಾದ ಏ.14ರಂದು ಕೇಂದ್ರ ಸರ್ಕಾರದ ಕಚೇರಿಗಳಿಗೆ ರಜಾದಿನವಾಗಿ ಘೋಷಣೆ ಮಾಡಿರುವುದನ್ನು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ವಾಗತಿಸಿದ್ದಾರೆ. ಅಂಬೇಡ್ಕರ್ ಅವರ ಜನ್ಮ ದಿನವಾದ ಏ.14ರಂದು ರಾಷ್ಟ್ರವ್ಯಾಪಿ ಕೇಂದ್ರ ಸರ್ಕಾರದ ಕಚೇರಿಗಳಿಗೆ ಕೇಂದ್ರ ಸರ್ಕಾರ ರಜೆ ಘೋಷಣೆ ಮಾಡಿರುವುದು ಸಂತೋಷದ ಸಂಗತಿ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಐತಿಹಾಸಿಕವಾಗಿ ಅನ್ಯಾಯಕ್ಕೆ ತುತ್ತಾಗಿದ್ದ ಮಹಾನ್ ಮಾನವತಾವಾದಿ ಅಂಬೇಡ್ಕರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಅರ್ಹ ಗೌರವ, ಸಮ್ಮಾನ ಸಮರ್ಪಣೆ ಮಾಡಿದೆ ಎಂದು ಅವರು ಹೇಳಿದ್ದಾರೆ. ಮನುಕುಲಕ್ಕೆ, ಚೈತನ್ಯಶೀಲ ಭಾರತಕ್ಕೆ ಅಂಬೇಡ್ಕರ್ ಅವರು ನೀಡಿರುವ ಕೊಡುಗೆ ಅಜರಾಮರ. ಪ್ರಧಾನಿಗಳ ಈ ನಿರ್ಧಾರ ಸ್ವಾಗತಾರ್ಹ. ಬಾಬಾ ಸಾಹೇಬ್ ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ದೃಷ್ಟಿಕೋನವು ಭಾರತವನ್ನು ಸದಾ ಗಟ್ಟಿಗೊಳಿಸುತ್ತಲೇ ಇದೆ ಎಂದು ಅವರು ತಿಳಿಸಿದ್ದಾರೆ.

## ಕಾನೂನು ಸುವ್ಯವಸ್ಥೆಗೂ ಹನಿಟ್ರ್ಯಾಪ್ ಪ್ರಕರಣಕ್ಕೂ ಸಂಬಂಧವಿಲ್ಲ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿ ನಿರ್ವಹಿಸಲ್ಪಡುತ್ತಿದೆ.ಹನಿಟ್ರ್ಯಾಪ್ ಪ್ರಕರಣಕ್ಕೆ ಕಾನೂನು ಸುವ್ಯವಸ್ಥೆ ಸಂಬಂಧವಿಲ್ಲ ಎಂದು ಸಮಾಜಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿಯವರೊಂದಿಗೆ ಉಪಹಾರ ಕೂಟ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹನಿಟ್ರ್ಯಾಪ್ ಪ್ರಕರಣದಲ್ಲಿ ರಾಜಣ್ಣ ದೂರು ನೀಡಿದ್ದಾರೆ. ಅದರ ತನಿಖೆಯಾಗುತ್ತಿದೆ.

ಈ ಹಂತದಲ್ಲಿ ಯಾವುದೇ ವಿಚಾರ ಚರ್ಚಿಸುವುದಿಲ್ಲ ಎಂದರು. ಮುಖ್ಯಮಂತ್ರಿ ಆಪ್ತರಿಗೆ ರಕ್ಷಣೆ ಇಲ್ಲ, ಸಚಿವರ ಪುತ್ರನಿಗೆ ಪ್ರಾಣ ಬೆದರಿಕೆ ಇದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಮಹದೇವಪ್ಪ, ಹನಿಟ್ರ್ಯಾಪ್ ಪ್ರಕರಣಕ್ಕೂ ಕಾನೂನು ಸುವ್ಯವಸ್ಥೆಗೂ ಸಂಬಂಧವಿಲ್ಲ ಎಂದು ಪುನರುಚ್ಚರಿಸಿದರು. ಸಚಿವ ಸಂಪುಟ ಪುನರ್‌ರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಯಾವುದೇ ವಿಚಾರಗಳಾಗಿದ್ದರೂ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಈ ವಿಷಯದಲ್ಲಿ ನಾವು ಚರ್ಚೆ ಮಾಡುವುದು ಸೂಕ್ತ ಅಲ್ಲ ಎಂದರು.

# ರಾಜ್ಯಪಾಲರ ಅನುಮಾನ ಪರಿಹರಿಸಲು ಸದನ ಸಮಿತಿ ಸಿದ್ಧ; ಶಾಸಕ ರಿಜ್ವಾನ್

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಕುರಿತು ರಾಜ್ಯಪಾಲರ ಕಳವಳ ಪರಿಹರಿಸಲು ಸದನ ಸಮಿತಿ ಸಿದ್ಧವಾಗಿದೆ ಎಂದು ಶಾಸಕಾಂಗ ಸಮಿತಿಯ ಮುಖ್ಯಸ್ಥರಾಗಿರುವ ಶಾಸಕ ರಿಜ್ವಾನ್ ಅರ್ಷದ್ ತಿಳಿಸಿದ್ದಾರೆ. ರಾಜ್ಯಪಾಲರು ಮಸೂದೆಯನ್ನು ತಿರಸ್ಕರಿಸಿಲ್ಲ, ಬದಲಿಗೆ ಕೆಲವು ನಿರ್ದಿಷ್ಟ ಸ್ಪಷ್ಟೀಕರಣಗಳನ್ನು ಕೇಳಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಜೊತೆ ಮಾತನಾಡಿದ ಅವರು, ವಿಶೇಷವಾಗಿ 74 ನೇ ತಿದ್ದುಪಡಿಯ ಬಗೆಗಿರುವ ಆತಂಕದ ಬಗ್ಗೆ ವಿವರಿಸಿದ್ದಾರೆ.

ಕಾಯ್ದೆಯ ಬಗ್ಗೆ ಯಾವುದೇ ನಿಖರವಾದ ಅಂಶವನ್ನು ಎತ್ತಲಾಗಿಲ್ಲ. ಮಸೂದೆಯಲ್ಲಿನ ಸಾಂವಿಧಾನಿಕ ನ್ಯೂನತೆಗಳ ಹಕ್ಕು ಇಲ್ಲ ಎಂದರು. ಕಾಂಗ್ರೆಸ್ ಸರ್ಕಾರವು ಮೊದಲು ಮಸೂದೆಯಲ್ಲಿ ಪರಿಚಯಿಸಿದ ಪ್ರಸ್ತಾವಿತ ಮೆಟ್ರೋಪಾಲಿಟನ್ ಯೋಜನೆ ಕುರಿತ ಬಗ್ಗೆ ಮಾತನಾಡಿದ ಅವರು, ಅರ್ಷದ್ ನೇತೃತ್ವದ ಸಮಿತಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಹಾನಗರ ಯೋಜನೆಯನ್ನು ಪ್ರಸ್ತಾಪಿಸಲಾಗಿತ್ತು. ಮುಂದೆ ಅದರ ಎಲ್ಲಾ ಅಂಶಗಳನ್ನು ನಾವು ಪರಿಗಣಿಸುತ್ತೇವೆ, ಎಂದು ಅವರು ಹೇಳಿದರು, ಸಮಿತಿಯು ಮಸೂದೆಯನ್ನು ಪರಿಷ್ಕರಿಸಲು ಮುಕ್ತವಾಗಿದೆ ಎಂದು ಸೂಚಿಸಿದರು.



ಶಾಸಕ ರಿಜ್ವಾನ್ ಅರ್ಷದ್ ಹೇಳಿಕೆ

ಅತ್ಯಂತ ವಿವಾದಾತ್ಮಕ ವಿಷಯವೆಂದರೆ ಬಿಬಿಎಂಪಿ ವಿಭಜನೆ ಎಂದು ತೋರುತ್ತದೆ, ಇದು ವಿಮರ್ಶಕರ ಪ್ರಕಾರ, ದೆಹಲಿ ನಾಗರಿಕ ಸಂಸ್ಥೆಯ ಹಾದಿಗೆ ಹೋಗುತ್ತದೆ. ಅಸಮಾನ ಆದಾಯ ವಿತರಣೆಯಿಂದಾಗಿ ದೆಹಲಿ ನಾಗರಿಕ ಸಂಸ್ಥೆಯನ್ನು ಮೂರು ಭಾಗವಾಗಿ ವಿಭಜನೆ ಮಾಡಲಾಗಿದೆ ಎಂದು ಅವರು ಹೇಳಿದರು.

ಇದಕ್ಕೆ ವ್ಯತಿರಿಕ್ತವಾಗಿ, ಬೆಂಗಳೂರಿನ ಭವಿಷ್ಯಕ್ಕಾಗಿ ಸಮತೋಲಿತ ವಿಧಾನವನ್ನು ಖಚಿತಪಡಿಸಿಕೊಳ್ಳುವ ಮೂಲಕ ನಾವು ಅದನ್ನು ಎಚ್ಚರಿಕೆಯಿಂದ ಲೆಕ್ಕ ಹಾಕಿದ್ದೇವೆ.

ಆಡಳಿತಾತ್ಮಕ ದಕ್ಷತೆಗಾಗಿ ಬೆಂಗಳೂರನ್ನು ವಿಭಜಿಸ ಬೇಕಾಗಿದೆ ನಾವು ಎಲ್ಲಾ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದೇವೆ ಎಂದು ಅವರು ಹೇಳಿದರು.

ಮಸೂದೆಯ ಕುರಿತು ರಾಜ್ಯ ಪಾಲರು ಕೆಲವು ಸ್ಪಷ್ಟೀಕರಣಗಳನ್ನು ಕೋರಿದ್ದಾರೆ, ಇದರಿಂದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿಲ್ಲ ಎಂದು ಪುನರುಚ್ಚರಿಸಿದ ಅವರು, ನಾವು ಎಲ್ಲಾ ಸ್ಪಷ್ಟೀಕರಣ ಗಳನ್ನು ನೀಡಲು ಸಂಪೂರ್ಣವಾಗಿ ಸಿದ್ಧರಿದ್ದೇವೆ. ಆತಂಕಕ್ಕೆ ಯಾವುದೇ ಕಾರಣವಿಲ್ಲ ಎಂದು ಹೇಳಿದರು.

# ರಾಜ್ಯ ಸರ್ಕಾರದ ಎಂಎಸ್‌ಐಎಲ್, ಏನೆಲ್ಲಾ ಮಾರಾಟ?

### ನಾಲ್ಕು ಹಂತಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಸ್ವಾಮ್ಯದ ಎಂಎಸ್‌ಐಎಲ್, ವಿವಿಧ ಉತ್ಪನ್ನಗಳ ಮಾರಾಟಕ್ಕೆ ಇ-ಕಾಮರ್ಸ್ ಪೋರ್ಟಲ್ ತೆರೆಯಲು ಸಿದ್ಧತೆ ನಡೆಸಿದೆ. ಕೇಂದ್ರ ಸರ್ಕಾರದ ಜೆಮ್ ಪೋರ್ಟಲ್ ಮಾದರಿಯಲ್ಲಿ ರಾಜ್ಯ ಸರ್ಕಾರ ಸೇರಿದಂತೆ ಖಾಸಗಿ ಒಡೆತನದ ವಿವಿಧ ಉತ್ಪನ್ನಗಳ ಮಾರಾಟದ ಜತೆಗೆ ಖರೀದಿ ವ್ಯವಸ್ಥೆಗೂ ಇದು ವೇದಿಕೆಯಾಗಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ.

ಎಂಎಸ್‌ಐಎಲ್‌ನ ಹಿರಿಯ ಅಧಿಕಾರಿಗಳ ಸಭೆ ನಡೆಸಿ, ವಿಸ್ತೃತವಾಗಿ ಚರ್ಚೆ ನಡೆಸಿದ ಅವರು, ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ಜಾರಿಗೆ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇದರ ಕಾರ್ಯಾಚರಣೆಯನ್ನು ನಾಲ್ಕು ಹಂತಗಳಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದು ಕಾರ್ಯರೂಪಕ್ಕೆ ಬಂದರೆ ಸರಕಾರಿ ಇಲಾಖೆಗಳು ಯಾವುದೇ ಟೆಂಡರ್ ಇಲ್ಲದೆ ತಮ್ಮ ಇಲಾಖೆಗೆ ಬೇಕಾಗುವ ಸಾಮಗ್ರಿಗಳನ್ನು ಇದರ ಮೂಲಕವೇ ಖರೀದಿಸಬಹುದು. ಹಾಗೆಯೇ, ಮಾರಾಟ



ಉದಯವಾಹಿನಿ ಚಿತ್ರ

ಕೂಡ ಮಾಡಬಹುದು. ಕೇಂದ್ರ ಸರಕಾರದ ಮಟ್ಟದಲ್ಲಿ ಟೆಂಡರ್ ಇಲ್ಲದೆ ನೇರವಾಗಿ ಖರೀದಿಸಲು ಜೆಮ್ ಪೋರ್ಟಲ್ ಇದ್ದು, ಅದೇ ಮಾದರಿಯಲ್ಲಿ ಇದು ಕೂಡ ಕೆಲಸ ಮಾಡಲಿದೆ ಎಂದು ಸಚಿವ ಪಾಟೀಲ್ ವಿವರಿಸಿದರು.

ಮೂರನೇ ಹಂತದಲ್ಲಿ ಗ್ರಾಹಕ ಉತ್ಪನ್ನಗಳು ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳು ಹಾಗೂ ನಾಲ್ಕನೇ ಹಂತದಲ್ಲಿ ತಾಜಾ ಉತ್ಪನ್ನಗಳನ್ನು ಇ-ಕಾಮರ್ಸ್ ಮೂಲಕ ಮಾರಾಟ ಮಾಡುವ ಉದ್ದೇಶ ಇದೆ ಎಂದು ಅವರು ಹೇಳಿದರು.

ದೇಶದ ಇ-ಕಾಮರ್ಸ್ ವಹಿವಾಟು ಈಗ ವಾರ್ಷಿಕ 75 ಬಿಲಿಯನ್ ಡಾಲರ್ ಇದೆ. 2030ರ ಹೊತ್ತಿಗೆ ಇದು 350 ಬಿಲಿಯನ್ ಡಾಲರ್ ಮುಟ್ಟಲಿದೆ ಎಂದು ಅಂದಾಜಿಸಲಾಗಿದೆ. ನಮ್ಮಲ್ಲಿ ಈಗ 900 ಮಿಲಿಯನ್ ಇಂಟರ್ನೆಟ್ ಬಳಕೆದಾರರು ಇದ್ದಾರೆ. ಇವೆಲ್ಲವೂ ಇ-ಕಾಮರ್ಸ್ ಬೆಳವಣಿಗೆಗೆ ಪೂರಕವಾಗಿ ಒದಗಿ ಬರಲಿವೆ ಎಂದು ಪಾಟೀಲ್ ವಿಶ್ಲೇಷಿಸಿದರು.

**ಮೊದಲ ಹಂತದಲ್ಲಿ ಕೇವಲ ಎಂಎಸ್‌ಐಎಲ್ ಉತ್ಪನ್ನಗಳನ್ನು ಮಾರಾಟ ಮಾಡುವುದು. ಎರಡನೇ ಹಂತದಲ್ಲಿ ಮೈಸೂರು ಸ್ಯಾಂಡಲ್ ಸೋಪು, ಲಿಕ್ಕರ್ ಉತ್ಪನ್ನ, ಮೈಸೂರು ರೇಷ್ಮೆ ಬಟ್ಟೆ, ಕಾವೇರಿ ಎಂಪೋರಿಯಂ ಉತ್ಪನ್ನ, ನಂದಿನಿ ಉತ್ಪನ್ನ ಇತ್ಯಾದಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಇದರಲ್ಲಿ ಎಂಎಸ್‌ಎಂಇ ಉತ್ಪನ್ನಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸುವ ಉತ್ಪನ್ನಗಳಿಗೂ ವೇದಿಕೆ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದರು.**

- **ಇ-ಕಾಮರ್ಸ್ ಪೋರ್ಟಲ್ ಆರಂಭಿಸಲು ಸಿದ್ಧತೆ ನಡೆಸಿದೆ ಎಂಎಸ್‌ಐಎಲ್**
- **ವಿವಿಧ ಉತ್ಪನ್ನಗಳನ್ನು ಮಾರಾಟ ಮಾಡುವ ಗುರಿ ಹೊಂದಿದೆ ಸಂಸ್ಥೆ**
- **ಇದನ್ನು 4 ಹಂತಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದು ಎಂದ ಎಂಬಿ ಪಾಟೀಲ್**
- **ರಾಜ್ಯ ಸರ್ಕಾರದ ಉತ್ಪನ್ನಗಳು ಸೇರಿದಂತೆ ಖಾಸಗಿ ಒಡೆತನದ ವಿವಿಧ ಉತ್ಪನ್ನಗಳ ಮಾರಾಟಕ್ಕೆ ಪ್ಲ್ಯಾನ್**
- **ಜತೆಗೆ ಖರೀದಿ ವ್ಯವಸ್ಥೆಗೂ ಇದು ವೇದಿಕೆಯಾಗಲಿದೆ ಎಂದು ವಿವರಿಸಿದ ಸಚಿವರು**

ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ನಿರ್ದೇಶಕ ಚಂದ್ರಪ್ಪ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಜಿಐ ಟ್ಯಾಗ್ ಹೊಂದಿರುವ ಕಾಫಿ ಡ್ರಿಪ್ ಬ್ಯಾಗ್ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಭಾರತೀಯ ಕಾಫಿ ಮಂಡಳಿಯು ತನ್ನ ಹೊಸ GI ಟ್ಯಾಗ್ ಮಾಡಲಾದ ಕಾಫಿ ಡ್ರಿಪ್ ಬ್ಯಾಗ್‌ಗಳನ್ನು ಬಿಡುಗಡೆ ಮಾಡಿದೆ.ಸುಲಭವಾಗಿ ಸಾಗಿಸಲು ಅನುಕೂಲವಾಗಿರುವ ಟೀ ಬ್ಯಾಗ್‌ಗಳಂತೆಯೇ, ಹೊಸದಾಗಿ ಬಿಡುಗಡೆ ಮಾಡಲಾದ ಕಾಫಿ ಡ್ರಿಪ್ ಬ್ಯಾಗ್‌ಗಳು ಪೋರ್ಟಬಲ್ ಆಗಿರುತ್ತವೆ, ಆದರೆ ಕಾರ್ಯವಿಧಾನವು ಟೀ ಬ್ಯಾಗ್‌ಗಳಲ್ಲಿ ಡಿಪ್ಪಿಂಗ್ ವಿಧಾನಕ್ಕಿಂತ ಭಿನ್ನವಾಗಿರುತ್ತದೆ, ಅಂದರೆ ಕಾಫಿ ಬ್ಯಾಗ್‌ನೊಳಗೆ ಬಿಸಿನೀರನ್ನು ಸುರಿಯಬೇಕಾಗುತ್ತದೆ.

ಹೀಗೆ ಕಾಫಿ ಬ್ಯಾಗ್‌ಗಳು ಪ್ರತಿ ಮನೆಗೆ ಆನಂದದಾಯಕ ಅನುಭವವನ್ನು ತರುತ್ತವೆ, ಅನುಕೂಲತೆಗಾಗಿ ವಿನ್ಯಾಸಗೊಳಿಸಲಾಗಿದೆ, ಇದು ಮನೆ ಕಚೇರಿ ಮತ್ತು ಪ್ರಯಾಣದ ವೇಳೆ ಕಾಫಿ ತಯಾರಿಸಲು ಸರಿಹೊಂದುತ್ತದೆ. ಕಾಫಿ



ಉದಯವಾಹಿನಿ ಚಿತ್ರ

ಪ್ರಿಯರಿಗೆ ಅದರ ಶುದ್ಧ ರೂಪದಲ್ಲಿ ಕಾಫಿಯ ಶ್ರೀಮಂತಿಕೆಯನ್ನು ತರುವ, ಸಿಂಗಲ್ ಸರ್ವ್, ತಯಾರಿಸಲು ಸುಲಭವಾದ ಕಾಫಿ ಡ್ರಿಪ್ ಬ್ಯಾಗ್‌ಗಳು ಒಳಗೊಂಡಿವೆ. ಇದರ ಬೀಜಗಳನ್ನು ಭಾರತದ ವಿವಿಧ ಭಾಗಗಳಿಂದ ಪಡೆಯಲಾಗುತ್ತದೆ, ಕೂರ್ಗ್ ಅರೇಬಿಕಾ, ಚಿಕ್ಕಮಗಳೂರು ಅರೇಬಿಕಾ, ಬಾಬಾಬುಡಾನಿ ಅರೇಬಿಕಾ, ಅರೌ ವ್ಯಾಲಿ ಅರೇಬಿಕಾದಂತಹ ರೂಪಾಂತರಗಳನ್ನು ಒಳಗೊಂಡಿದೆ.

ಇದಲ್ಲದೆ, ಕಾಫಿ ಬ್ಯಾಗ್‌ಗಳನ್ನು ಜೈವಿಕ ವಿಘಟನೀಯ ಘಟಕಗಳಿಂದ ತಯಾರಿಸಲಾಗಿದ್ದು, ಪ್ರತಿಯೊಬ್ಬ ಖರೀದಿದಾರನು ಪರಿಸರ ಪ್ರಜ್ಞೆ ಮತ್ತು ಸುಸ್ಥಿರತೆಯತ್ತ ಹೆಜ್ಜೆ ಇಡುವಂತೆ ಮಾಡುತ್ತದೆ. ಈ ನಾವೀನ್ಯತೆಯು ಭಾರತದಲ್ಲಿ ಸಮರ್ಪಿತ ಕಾಫಿ ರೈತರನ್ನು ಬೆಂಬಲಿಸಲು ಸಹಾಯ ಮಾಡುತ್ತದೆ. ದೇಶೀಯ ಮತ್ತು ಅಂತರರಾಷ್ಟ್ರೀಯ ಗ್ರಾಹಕರಲ್ಲಿ ಜಿಐ-ಟ್ಯಾಗ್ ಮಾಡಲಾದ ಕಾಫಿಯನ್ನು ಜನಪ್ರಿಯಗೊಳಿಸುವುದು ಮತ್ತು ಉತ್ತಮ ಕಾಫಿ ಸಂಸ್ಕೃತಿಯನ್ನು ಉತ್ತೇಜಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ಭಾರತೀಯ ಕಾಫಿ ಮಂಡಳಿಯ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಕೆಜಿ ಜಗದೀಶ ಹೇಳಿದರು. ಮಂಡಳಿಯು ಇ-ಕಾಮರ್ಸ್ ವೆಬ್ ಸೈಟ್‌ಗಳೊಂದಿಗೆ ಸಹ ಸಹಯೋಗ ಹೊಂದಿದೆ ಎಂದು ಅವರು ಹೇಳಿದರು.

## ಬೆಂಗಳೂರು ಆರ್‌ಪಿಒ ವಿರುದ್ಧ ಪಾಕ್ ಸುಳ್ಳು ಸುದ್ದಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ (ಆರ್‌ಪಿಒ) ಅವರನ್ನು ಗುರಿಯಾಗಿಸಿ ಪಾಕಿಸ್ತಾನದ ಕೆಲವು 'ಎಕ್ಸ್' ಬಳಕೆದಾರರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಬೆಂಗಳೂರಿನ ಆರ್‌ಪಿಒ ಅಜಿತ್ ಜಾನ್ ಜೋಶುವಾ ಅವರು ಭಾರತದ ಗುಪ್ತಚರ ಸಂಸ್ಥೆ 'ರಿಸರ್ಚ್ ಆ?ಯಂಡ್ ಅನಲಿಸಿಸ್ ವಿಂಗ್‌ಗೆ (ರಾ) ಕೆಲಸ ಮಾಡುತ್ತಿದ್ದಾರೆ. ಬಲೂಚಿಸ್ತಾನದಲ್ಲಿ ರೈಲಿನ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಅವರ ಕೈವಾಡವಿದೆ ಎಂದು ಕೆಲವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಲೂಚಿಸ್ತಾನದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಉಗ್ರಗಾಮಿ ಸಂಘಟನೆಯಾದ ಬಲೂಚ್ ಲಿಬರೇಶನ್ ಆರ್ಮಿ (ಬಿಎಲ್‌ಎ) ಪ್ರತಿನಿಧಿಗಳ ಜತೆ ಮಾತುಕತೆ ನಡೆಸಲು ಅವರು ಇರಾನ್‌ಗೂ ಭೇಟಿ ನೀಡಿದ್ದಾರೆ ಎಂದು ಕೆಲವು ಪೋಸ್ಟ್‌ಗಳಲ್ಲಿ




ಉದಯವಾಹಿನಿ ಚಿತ್ರ

ಉಲ್ಲೇಖಿಸಲಾಗಿದೆ.

ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ನಕಲಿ ಸುದ್ದಿಗಳನ್ನು ಪ್ರಚಾರ ಮಾಡುವ ಪೋಸ್ಟ್‌ಗಳನ್ನು ಭಾರತವು ಗುರುತಿಸಿದೆ. 'ಅಜಿತ್ ಜಾನ್ ಜೋಶುವಾ ಅವರು ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಆಗಿದ್ದಾರೆ. ಅವರಿಗೆ ಸಂಬಂಧಿಸಿದ ಈ ಕೆಳಗಿನ ಟ್ವಿಟ್‌ಗಳು ನಕಲಿ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

## ಕೇಂದ್ರ ಸರ್ಕಾರದ ವಿರುದ್ಧ ಬ್ಯಾಂಕ್ ನಿವೃತ್ತರ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಪಿಂಚಣಿ ಪರಿಷ್ಕರಣೆ, ಆರೋಗ್ಯ ವಿಮೆ ವ್ಯವಸ್ಥೆ ಸುಧಾರಣೆ ಒಳಗೊಂಡಂತೆ ಹಲವು ದಶಕಗಳಿಂದ ಬಾಕಿ ಉಳಿದಿರುವ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಬ್ಯಾಂಕ್ ನಿವೃತ್ತರ ಒಕ್ಕೂಟಗಳ ಸಂಯುಕ್ತ ವೇದಿಕೆ ನಗರದ ಫ್ರೀಡಂ ಪಾರ್ಕ್‌ನಲ್ಲಿಂದು ಬೃಹತ್ ಪ್ರತಿಭಟನೆ ನಡೆಸಿತು.

ಬ್ಯಾಂಕ್ ನಿವೃತ್ತರ ಸಂಯುಕ್ತ ವೇದಿಕೆಯು ದೇಶದ ಸುಮಾರು ಏಳು ಬ್ಯಾಂಕ್ ನಿವೃತ್ತರ ಸಂಘಟನೆಗಳ ಒಂದು ರಾಷ್ಟ್ರೀಯ ಬೃಹತ್ ಸಂಘಟನೆಯಾಗಿದ್ದು,ವಿವಿಧ ನಿವೃತ್ತರ ಸಂಘಟನೆಗಳು ಸದಸ್ಯರು ಪ್ರತಿಭಟನೆಯಲ್ಲಿ ಭಾಗಿಯಾದರು.

ಸಂಯುಕ್ತ ವೇದಿಕೆಯ ಸಂಚಾಲಕರಾದ ಎಸ್.ಸಿ ಜೈನ್ ಮಾತನಾಡಿ, 1995 ರಿಂದ ಬಾಕಿ ಇರುವ ಬ್ಯಾಂಕ್ ನಿವೃತ್ತರ ಪಿಂಚಣಿ ಪರಿಷ್ಕರಣೆ, ವಿಶೇಷ ಭತ್ಯೆಗಳ ಮೇಲೆ ಪಿಂಚಣಿ ನೀಡುವ, ಖಾಸಗಿ ಬ್ಯಾಂಕ್ ನಿವೃತ್ತರಿಗೂ ಎಕ್ಸ್ ಗ್ರೇಶಿಯಾ ಕೊಡುವ, ಆರೋಗ್ಯ ವಿಮೆಯ ಸುಧಾರಣೆ ಮತ್ತು ಆರೋಗ್ಯ ವಿಮೆಯ ಮೇಲಿನ ಜಿ. ಎಸ್. ಟಿಯಿಂದ ಸಂಪೂರ್ಣ ವಿನಾಯತಿ ನೀಡುವ, ವಾಣಿಜ್ಯ ಬ್ಯಾಂಕುಗಳ ಪಿಂಚಣಿದಾರರಿಗೆ ಆಗುತ್ತಿರುವ ತಾರತಮ್ಯ ತಪ್ಪಿಸುವ ಜೊತೆಗೆ ಬ್ಯಾಂಕ್ ಉದ್ಯೋಗಕ್ಕೆ ರಾಜೀನಾಮೆ ನೀಡಿದವರಿಗೂ ಆದಷ್ಟು ಬೇಗ ಪಿಂಚಣಿ ನೀಡುವಲ್ಲಿ ಆಗುತ್ತಿರುವ ತೊಂದರೆಯನ್ನು ಬಗೆಹರಿಸಬೇಕು ಎಂದರು.




ಉದಯವಾಹಿನಿ ಚಿತ್ರ

**ಕೇಂದ್ರದ ವಿರುದ್ಧ ಡಿಎಂಕೆ ಪ್ರತಿಭಟನೆ ಒಕ್ಕೂಟದ ಜಂಟಿ ಪ್ರಧಾನ ಕಾರ್ಯದರ್ಶಿ ಕೆ. ವಿಶ್ವನಾಥ ನಾಯ್ಕ್ ಮಾತನಾಡಿ, ಬ್ಯಾಂಕ್ ನಿವೃತ್ತರ ಬೇಡಿಕೆಗಳ ಬಗ್ಗೆ ಚರ್ಚಿಸಲು ನೇರವಾಗಿ ಬ್ಯಾಂಕ್ ನಿವೃತ್ತರ ಸಂಘಟನೆಗಳ ನಾಯಕರನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾಮನ್ ಕರೆದು ಮಾತನಾಡಬೇಕು. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ವಹಿಸಬಾರದು. ಇಲ್ಲವಾದಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.**


## ಪರೀಕ್ಷಾ ವರದಿ ಬರುವವರಿಗೆ ಊಟ, ತಿಂಡಿ ವ್ಯವಸ್ಥೆ

• ಉದಯವಾಹಿನಿ, ಬೆಂಗಳೂರು

ವೈದ್ಯಕೀಯ ತಪಾಸಣೆಗಾಗಿ ದೂರದ ಊರುಗಳಿಂದ ಬರುವ ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಹಾಕದೆ ಅವರನ್ನು ಒಳರೋಗಿಗಳಾಗಿ ಸೇರಿಸಿಕೊಳ್ಳಬೇಕು ಎಂದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಅವರು ಕಿದ್ವಾಯಿ ಆಡಳಿತ ಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಸ್ಥೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿಬಡರೋಗಿಗಳ ಆರ್ಥಿಕ ಹೊರೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, ಅಂತಿಮ ಆರೋಗ್ಯ ತನಿಖಾ ವರದಿ ನೀಡುವವರೆಗೆ ಅಂತಹ ರೋಗಿಗಳನ್ನು ಆಸ್ಪತ್ರೆಯ ವಾರ್ಡ್ ಗಳಲ್ಲಿಒಳರೋಗಿಗಳಾಗಿ ಸೇರಿಸಿಕೊಳ್ಳುವಂತೆ ಕಿದ್ವಾಯಿ ಸ್ಮಾರಕ ಆಂಕೋಲಜಿ ಸಂಸ್ಥೆಯ (ಕೆಎಂಐಒ) ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪರಿಶೀಲನೆ ಸಮಯದಲ್ಲಿರೋಗಿಗಳ ಸಂಖ್ಯೆ ಹೆಚ್ಚಾಗಿದ್ದರೂ ಆಸ್ಪತ್ರೆಯ ಹಾಸಿಗೆಗಳು ಶೇ.70ಕ್ಕಿಂತ ಕಡಿಮೆ ಭರ್ತಿಯಾಗಿರುವುದು ಏಕೆ?'' ಎಂದು ಸಚಿವರು ಪ್ರಶ್ನಿಸಿದರು. ಅದಕ್ಕೆ ಅಧಿಕಾರಿಗಳು, 'ಅಂತಿಮ ರೋಗನಿರ್ಣಯದ ನಂತರವೇ ಒಳರೋಗಿಗಳಾಗಿ ಸೇರಿಸಿಕೊಳ್ಳಲಾಗುವುದು. ಆರಂಭಿಕ ರೋಗನಿರ್ಣಯ ಮತ್ತು ಅವರ ಅಂತಿಮ ಆರೋಗ್ಯ ವರದಿ ಬರುವವರೆಗೂ ರೋಗಿಗಳು ಹೊರಗುಳಿಯುತ್ತಿದ್ದಾರೆ,''



ಉದಯವಾಹಿನಿ ಚಿತ್ರ

**ಆರ್ಥಿಕವಾಗಿ ದುರ್ಬಲರಾಗಿರುವ ರೋಗಿಗಳಿಗೆ ಅಂತಿಮ ವರದಿ ಬರುವವರೆಗೂ ಬೆಂಗಳೂರಿನಲ್ಲಿಖಾಸಗಿ ವಸತಿ ಸೌಕರ್ಯ ಪಡೆಯಲು ಸಾಧ್ಯವಾಗುವುದಿಲ್ಲ. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿವಾಸಿಸುವವರಿಗೆ ಇದು ಅಗತ್ಯವಿಲ್ಲದಿರಬಹುದು. ದೂರದ ಪ್ರದೇಶಗಳಿಂದ ವಿಶೇಷವಾಗಿ ಉತ್ತರ ಕರ್ನಾಟಕದಿಂದ ಬರುವ ರೋಗಿಗಳಿಗೆ ಇದು ಅತ್ಯಗತ್ಯ, ಎಂದು ಡಾ.ಪಾಟೀಲ್ ಹೇಳಿದರು.**

ಎಂದು ವಿವರಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವರು, ಕೆಎಂಐಒ ತನ್ನ ನೀತಿ ಬದಲಾಯಿಸಲು ಮತ್ತು ಈ ಮಧ್ಯಂತರ ಅವಧಿಯಲ್ಲಿ ರೋಗಿಗಳನ್ನು ವಾರ್ಡ್‌ಗಳಿಗೆ ಸೇರಿಸಲು ಸೂಚನೆ ನೀಡಿದರು.

## ಹಬ್ಬ: ಹೆಚ್ಚಿದ ಜನ, ವಾಹನ ದಟ್ಟಣೆ

• ಉದಯವಾಹಿನಿ, ಬೆಂಗಳೂರು

ಉದ್ಯೋಗ ಇನ್ನಿತರ ಕಾರಣಗಳಿಗಾಗಿ ಊರು ಬಿಟ್ಟು ನಗರಕ್ಕೆ ಬಂದಿರುವ ಜನರು ಯುಗಾದಿ, ರಂಜಾನ್ ಹಬ್ಬದ ನಿಮಿತ್ತ ತಮ್ಮ ಊರುಗಳಿಗೆ ಹೊರಟಿರುವುದರಿಂದ ನಗರದ ಬಸ್ ನಿಲ್ದಾಣಗಳಲ್ಲಿ ಭಾರಿ ಜನದಟ್ಟಣೆ ಉಂಟಾಯಿತು. ಹೊರ ಜಿಲ್ಲೆ, ಹೊರ ರಾಜ್ಯಗಳನ್ನು ಸಂಪರ್ಕಿಸುವ ನಗರದ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಸಂಚಾರಕ್ಕೆ ತೊಡಕುಂಟಾಯಿತು. ಭಾನುವಾರ ಯುಗಾದಿ, ಸೋಮವಾರ ರಂಜಾನ್ ಹಬ್ಬಗಳಿದ್ದು, ಜನರು ಶುಕ್ರವಾರವೇ ಲಗೇಜುಗಳೊಂದಿಗೆ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ, ಮೈಸೂರು ರಸ್ತೆ ಸ್ಯಾಟ್‌ಲೈಟ್ ಬಸ್ ನಿಲ್ದಾಣಗಳ ಕಡೆಗೆ ಗುಂಪು ಗುಂಪಾಗಿ ಬರತೊಡಗಿದ್ದರು.

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಕಲಬುರ್ಗಿ ಸಹಿತ ವಿವಿಧ ನಗರಗಳಿಗೆ ಹೋಗುವವರು ನಿಲ್ದಾಣಗಳಲ್ಲಿ ಜಮಾಯಿಸಿದ್ದರಿಂದ ಬಸ್, ರೈಲು ನಿಲ್ದಾಣಗಳು ಕಿಕ್ಕಿರಿದಿದ್ದವು. ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಜನ, ನಿಲ್ದಾಣಕ್ಕೆ ಬಂದು ಬಸ್ಸಿಗಾಗಿ ಹುಡುಕಾಟ ನಡೆಸಿದರು. ಮುಂಗಡ ಕಾಯ್ದಿರಿಸದೇ ಬಂದವರು ಸೀಟು ಸಿಗದೇ ಪರದಾಡುವಂತಾಯಿತು. ಚಾಲುಕ್ಯ ವೃತ್ತ, ಆನಂದರಾವ್ ವೃತ್ತ, ಮೈಸೂರು ರಸ್ತೆ, ಯಶವಂತಪುರ, ಆರ್‌ಎಂಸಿ ಯಾರ್ಡ್, ತುಮಕೂರು ರಸ್ತೆ, ಹೊಸೂರು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಅಧಿಕವಾಗಿತ್ತು. ಮೆಜೆಸ್ಟಿಕ್ ನಿಲ್ದಾಣದಿಂದ ಹೊರಟಿದ್ದ ಬಸ್‌ಗಳು, ದಟ್ಟಣೆಯಿಂದಾಗಿ ನಿಧಾನವಾಗಿ ಸಂಚರಿಸಿದವು. ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ ಕೆಎಸ್‌ಆರ್‌ಟಿಸಿ, ಹೆಚ್ಚುವರಿಯಾಗಿ 2,000 ಬಸ್‌ಗಳ ವ್ಯವಸ್ಥೆ ಮಾಡಿತ್ತು. ನಗರದಿಂದ ಹೊರಗೆ ಸಂಚರಿಸಲು ಬಿಎಂಟಿಸಿ ಬಸ್‌ಗಳನ್ನು ಕೂಡ ಬಳಸಿಕೊಳ್ಳಲಾಗಿದೆ. ಖಾಸಗಿ ಕಂಪನಿಗಳು



ಉದಯವಾಹಿನಿ ಚಿತ್ರ

### ಖಾಸಗಿ ಬಸ್ ದರ ಏರಿಕೆ

**ಹಬ್ಬಗಳ ಪ್ರಯುಕ್ತ ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುತ್ತಿರುವ ಖಾಸಗಿ ಬಸ್‌ಗಳ ಮೇಲೆ ಸಾರಿಗೆ ಇಲಾಖೆ ದಾಳಿ ಮಾಡಿದೆ. ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಗಳಲ್ಲಿ ಕಾರ್ಯಾಚರಣೆ ನಡೆಸಲು ವಿಶೇಷ ಪಡೆಗಳನ್ನು ರಚಿಸಲಾಗಿತ್ತು. ಗೊರಗುಂಟೆ ಪಾಳ್ಯದಲ್ಲಿ 17 ಬಸ್‌ಗಳ ವಿರುದ್ಧ ಪ್ರಕರಣ ದಾಖಲಿಸಿ ★ 9 ಸಾವಿರ ದಂಡ ವಿಧಿಸಲಾಗಿದೆ. ಮೆಜೆಸ್ಟಿಕ್ ನೆಲಮಂಗಲ ಕಳಸಿಪಾಳ್ಯ ಜ್ಞಾನಭಾರತಿ ಸೇರಿದಂತೆ ವಿವಿಧೆಡೆ ದಾಳಿ ಮಾಡಲಾಗಿದೆ. ಕಾರ್ಯಾಚರಣೆ ಮುಂದುವರಿದಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.**

ಸಹ ಹೆಚ್ಚುವರಿ ಬಸ್‌ಗಳನ್ನು ರಸ್ತೆಗೆ ಇಳಿಸಿದ್ದವು.

## ಬಿಇಎಂಎಲ್‌ನ 5 ನಿಲ್ದಾಣಕ್ಕೆ ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿ!

### ಕೋಣನಕುಂಟೆ ಕ್ರಾಸ್, ದೊಡ್ಡಕಲ್ಲಸಂದ್ರ, ತಲಘಟ್ಟಪುರ, ರೇಷ್ಮೆ ಸಂಸ್ಥೆ ಪಟ್ಟಿಯಲ್ಲಿವೆ

• ಉದಯವಾಹಿನಿ, ಬೆಂಗಳೂರು

ಮೆಟ್ರೋ ರೈಲು ನಿಗಮ ನಿಯಮಿತ, ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ನಿಂದ ವೇಗವಾದ ಸಾಮೂಹಿಕ ಸಾರಿಗೆ ವ್ಯವಸ್ಥೆಯ ಎತ್ತರಿಸಿದ ಮೆಟ್ರೋ ನಿಲ್ದಾಣಗಳ ವಿಭಾಗದಲ್ಲಿ ರೀಚ್-4ಬಿ ಕೋಣನಕುಂಟೆ ಕ್ರಾಸ್, ದೊಡ್ಡಕಲ್ಲಸಂದ್ರ, ತಲಘಟ್ಟಪುರ, ಮತ್ತು ರೇಷ್ಮೆ ಸಂಸ್ಥೆ ಈ ಐದು ನಿಲ್ದಾಣಗಳಿಗೆ ಹಸಿರು ಕಟ್ಟಡಗಳಿಗೆ ನೀಡುವ ಪ್ರತಿಷ್ಠಿತ ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿಯನ್ನು ಪಡೆದುಕೊಂಡಿದೆ. ನೀರಿನ ಮರುಬಳಕೆ ವ್ಯವಸ್ಥೆಗಳು, ಪರಿಸರ ಸ್ನೇಹಿ ನಿರ್ಮಾಣ ನಮ್ಮ ಆದ್ಯತೆ ಎಂದ ಇಂಧನ ದಕ್ಷತೆ, ನೀರಿನ ಸಂರಕ್ಷಣೆ, ಸುಸ್ಥಿರ ನಿರ್ಮಾಣ ಸಾಮಗ್ರಿ, ಸುಸ್ಥಿರ ಮತ್ತು ಪರಿಸರ ಸ್ನೇಹಿ ಕಟ್ಟಡ ಪ್ರಮಾಣೀಕರಿಸಿ ಬಿಇಎಂಎಲ್‌ನ ಐದು ನಿಲ್ದಾಣಗಳಿಗೆ ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್‌ನಿಂದ ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿ ಗಿಟ್ಟಿಸಿಕೊಂಡಿದೆ. ಈ ಬಗ್ಗೆ ನಮ್ಮ ಮೆಟ್ರೋ ಪ್ರಕಟಣೆ ಹೊರಡಿಸಿದೆ.

**ಐದು ನಿಲ್ದಾಣಗಳಿಗೆ ಪ್ರತಿಷ್ಠಿತ ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿ:** ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತಗೆ , ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ನಿಂದ ವೇಗವಾದ ಸಾಮೂಹಿಕ ಸಾರಿಗೆ ವ್ಯವಸ್ಥೆಯ ಎತ್ತರಿಸಿದ ಮೆಟ್ರೋ ನಿಲ್ದಾಣಗಳ ವಿಭಾಗದಲ್ಲಿ ರೀಚ್-4ಬಿ ಕೋಣನಕುಂಟೆ ಕ್ರಾಸ್, ದೊಡ್ಡಕಲ್ಲಸಂದ್ರ, ತಲಘಟ್ಟಪುರ, ಮತ್ತು ರೇಷ್ಮೆ ಸಂಸ್ಥೆ ಈ ಐದು ನಿಲ್ದಾಣಗಳಿಗೆ ಹಸಿರು ಕಟ್ಟಡಗಳಿಗೆ ನೀಡುವ ಪ್ರತಿಷ್ಠಿತ



ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿಯನ್ನು ಪಡೆದುಕೊಂಡಿದೆ.

ನೈಸರ್ಗಿಕ ವಸ್ತು ಬಳಕೆ ಮೊದಲ ಆದ್ಯತೆ: ಃಒಖಿಅಐ ಸದರಿ ನಿಲ್ದಾಣಗಳಲ್ಲಿ ಹಲವಾರು ಸುಸ್ಥಿರ ವ್ಯವಸ್ಥೆಗಳನ್ನು ಜಾರಿಗೆ ತಂದಿದೆ. ದಾಕ್ಷತೆ ಇಂಧನ ಬಳಕೆ ಮತ್ತು ಹವಾನಿಯಂತ್ರಣ ವ್ಯವಸ್ಥೆಗಳ ಸ್ಥಾಪನೆ, ನಿಲ್ದಾಣ ಕಾರ್ಯಾಚರಣೆಗಳಿಗೆ ಸೌರಶಕ್ತಿಯ ಬಳಕೆ, ಮಳೆನೀರು ಕೊಯ್ಲು, ನೀರಿನ ಮರುಬಳಕೆ ವ್ಯವಸ್ಥೆಗಳು, ಪರಿಸರ ಸ್ನೇಹಿ ನಿರ್ಮಾಣ ಸಾಮಗ್ರಿಗಳ ಸಂಯೋಜನೆ.

ಇತ್ಯಾದಿ ಒಳಗೊಂಡಿದೆ. ಈ ಸಾಧನೆಯು ತನ್ನ ಎಲ್ಲಾ ಮೆಟ್ರೋ ಕಾರಿಡಾರ್‌ಗಳ ನಿರ್ಮಾಣ ಮತ್ತು ಕಾರ್ಯಾಚರಣೆಗಳಲ್ಲಿ ಹಸಿರು ಕಟ್ಟಡ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ದೊಡ್ಡ ದೃಷ್ಟಿಕೋನದ ಭಾಗವಾಗಿದೆ.

### ಹಸಿರು ಕಟ್ಟಡಗಳಿಗೆ ನೀಡುವ ಪ್ರಮುಖ ಪ್ರಶಸ್ತಿ

**ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ಸಂಸ್ಥೆಯು ಹಸಿರು ಕಟ್ಟಡಗಳಿಗೆ ನೀಡುವ ಪ್ರಮುಖ ಪ್ರಮಾಣೀಕರಣ ಸಂಸ್ಥೆಯಾಗಿದೆ. ಈ ಸಂಸ್ಥೆಯಿಂದ ಪಡೆಯುವ ಪ್ರಮಾಣೀಕರಣವು ಪ್ರತಿಷ್ಠಿತ ಮನ್ನಣೆಯಾಗಿದ್ದು ಇದನ್ನು ವಿವಿಧ ನಿಯತಾಂಕಗಳಲ್ಲಿ ಸುಸ್ಥಿರ ಮತ್ತು ಪರಿಸರ ಸ್ನೇಹಿ ಅಭ್ಯಾಸಗಳನ್ನು ಅನುಸರಿಸುವ ಕಟ್ಟಡಗಳು ಮತ್ತು ಮೂಲಸೌಕರ್ಯ ಯೋಜನೆಗಳಾದ ಇಂಧನ ದಕ್ಷತೆ, ನೀರಿನ ಸಂರಕ್ಷಣೆ, ಸುಸ್ಥಿರ ನಿರ್ಮಾಣ ಸಾಮಗ್ರಿಗಳು, ನವೀಕರಿಸಬಹುದಾದ ಶಕ್ತಿಯ ಬಳಕೆ ಮತ್ತು ವರ್ಧಿತ ಒಳಾಂಗಣ ಪರಿಸರ ಗುಣಮಟ್ಟಗಳನ್ನು ಪ್ರಮಾಣೀಕರಿಸುತ್ತದೆ.**

# ಗುಬ್ಬಿ ತಹಶೀಲ್ದಾರ್ ವರ್ಗಾವಣೆಗೆ ಆಗ್ರಹ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ಶ್ರೀನಿವಾಸ್ ವಿರುದ್ಧ ರೈತರು ಆಕ್ರೋಶ

ಶಾಸಕ ಎಸ್.ಆರ್.ಶ್ರೀನಿವಾಸ್ ರೈತ ಚಳವಳಿ ಅವಮಾನಿಸಿದ್ದು, ಗೂಂಡಾ ವರ್ತನೆ ತೋರಿದ್ದಾರೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಿಪಿಐಎಂ, ಸಿಐಟಿಯು, ಕೆಪಿಆರ್‌ಎಸ್ ಮುಖಂಡರು ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಮಾರ್ಚ್ 25ರಂದು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗುಬ್ಬಿ ತಾ.ಪಂ ಕಚೇರಿ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾಕಾರರು ಮನವಿ ಸಲ್ಲಿಸಿ ವಾಪಸ್ ಹೋಗುವಾಗ ಶಾಸಕರು ಮಧ್ಯ ಪ್ರವೇಶಿಸಿ ರೈತ ಚಳವಳಿ ಅವಮಾನಿಸಿ ಮಾತನಾಡಿದ್ದಾರೆ.

ರಾಜಕೀಯ ಪ್ರಭಾವದಿಂತೆ ವರ್ತಿಸುವುದು ಖಂಡನೀಯ ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಅಸಮಾಧಾನ ವ್ಯಕ್ತಪಡಿಸಿದರು. ಸತತವಾಗಿ 5 ಬಾರಿ ಶಾಸಕರಾದರೂ ಬಗರ್‌ಹುಕುಂ ಸಾಗುವಳಿ ಸಮಸ್ಯೆ ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ. ರೈತರು ಭೂಮಿಗಾಗಿ ಅರ್ಜಿ ಸಲ್ಲಿಸಿ ಕಚೇರಿಗೆ ಅಲೆಯುತ್ತಿದ್ದಾರೆ. ಹಲವು ವರ್ಷಗಳಿಂದ ರೈತರು ಉಳುಮೆ ಮಾಡುತ್ತಿರುವ ಭೂಮಿಯನ್ನು ಕೇಂದ್ರ ಸರ್ಕಾರ ಅರಣ್ಯ ಕಾಯ್ದೆಯಡಿ ತಂದು ಅವರನ್ನು ಒಕ್ಕಲೆಬ್ಬಿಸುತ್ತಿದೆ ಎಂದು ಆರೋಪಿಸಿದರು.

ಕೆಪಿಆರ್‌ಎಸ್ ಜಿಲ್ಲಾ ಘಟಕದ ಅಧ್ಯಕ್ಷ ಚನ್ನಬಸಣ್ಣ, ಗುಬ್ಬಿಯ ಗಂಗಯ್ಯನಪಾಳ್ಯದಲ್ಲಿ ಹೋರಾಟ ನಿರತ ರೈತರ ಮೇಲೆ 11ಕ್ಕೂ ಹೆಚ್ಚು ಪ್ರಕರಣ ದಾಖಲಿಸಲಾಗಿದೆ. ಎಲ್ಲಾ ಪ್ರಕರಣ ವಾಪಸ್ ಪಡೆಯಬೇಕು. ಅರ್ಹರಿಗೆ ಹಕ್ಕುಪತ್ರ ವಿತರಿಸಬೇಕು. ಗುಬ್ಬಿ ತಹಶೀಲ್ದಾರ್ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು.

# ಹಾಸ್ಟೆಲ್ ನಿರ್ವಹಣೆಯಲ್ಲಿ ಭ್ರಷ್ಟಾಚಾರ: ಕ್ರಮಕ್ಕೆ ಒತ್ತಾಯ

• ಉದಯವಾಹಿನಿ, ಮಂಡ್ಯ

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಸ್ಟೆಲ್‌ಗಳ ನಿರ್ವಹಣೆಯಲ್ಲಿ ಭ್ರಷ್ಟಾಚಾರ ಮಾಡಿರುವವರನ್ನು ಕೂಡಲೇ ವರ್ಗಾವಣೆ ಮಾಡಬೇಕು, ಅಂಥವರ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

'ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸಿದ್ದಲಿಂಗ ಬೇವಿನಮಟ್ಟಿ ಮತ್ತು ಸಹಾಯಕ ನಿರ್ದೇಶಕಿ ಕಾವ್ಯಶ್ರೀ ಅವರು ಲಕ್ಷಾಂತರ ರೂಪಾಯಿ ಭ್ರಷ್ಟಾಚಾರ ಮಾಡಿರುವುದು ತನಿಖಾ ವರದಿಯಲ್ಲಿ ಸಾಕ್ಷಿ ಸಮೇತ ಸಾಬೀತಾಗಿದೆ. ಹಾಸ್ಟೆಲ್ ವಾರ್ಡನ್‌ಗಳು ಮತ್ತು ಸಾರ್ವಜನಿಕರು ನೀಡಿದ ದೂರಿನ ಮೇರೆಗೆ ತನಿಖೆ ನಡೆಸಿದಾಗ ದಲಿತ ವಿದ್ಯಾರ್ಥಿಗಳ ಬೆಡ್ ಕವರ್, ಟಿವಿ, ವಾಟರ್ ಪ್ಯೂರಿಫೈಯರ್ ಖರೀದಿ, ಶೌಚಾಲಯ ಮತ್ತು ಕಟ್ಟಡ ದುರಸ್ತಿಯಲ್ಲಿ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಿದರು.

ಇಂತಹ ಅಧಿಕಾರಿಗಳು ಮುಂದೆಯೂ ಜಿಲ್ಲೆಯಲ್ಲಿ, ಅದೇ ಇಲಾಖೆಯಲ್ಲಿ ಮುಂದುವರಿದರೆ ದಲಿತರಿಗೆ ಸಿಗಬೇಕಾದ ಸೌಲಭ್ಯವನ್ನು ನೀಡದೆ ದುರುಪಯೋಗ ಮಾಡಿಕೊಳ್ಳುವುದು ಮತ್ತಷ್ಟು ಹೆಚ್ಚುತ್ತದೆ. ದಲಿತ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕಾದರೆ ಈ ಇಬ್ಬರು ಅಧಿಕಾರಿಗಳನ್ನು ತಕ್ಷಣ ವರ್ಗಾವಣೆ ಮಾಡಿ, ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

ಭ್ರಷ್ಟಾಚಾರದ ಹಣವನ್ನು ಇವರಿಂದಲೇ ವಸೂಲಿ ಮಾಡಿ, ಅದನ್ನು ದಲಿತ ವಿದ್ಯಾರ್ಥಿಗಳಿಗೆ, ಇತರೆ ವಿದ್ಯಾರ್ಥಿಗಳ ಯೋಜನೆಗಳಿಗೆ ಬಳಸಿ ಕೊಳ್ಳಬೇಕು. ಇಲಾಖೆಯ ವಸತಿ ನಿಲಯಗಳ ದುಸ್ಥಿತಿ ದುರಸ್ತಿಗೊಳಿಸಲು ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದರು.

# ಜಿಲ್ಲೆಯಲ್ಲಿ ಹೆಚ್ಚಿದ ಜೂಜಾಟ ದಂಧೆ; ಬಂಧಿಸಿದರೂ ನಿಲ್ಲುತ್ತಿಲ್ಲ

• ಉದಯವಾಹಿನಿ, ಕೋಲಾರ

ಜಿಲ್ಲೆಯಲ್ಲಿ ಜೂಜಾಟ ಪ್ರಕರಣಗಳು ಹೆಚ್ಚುತ್ತಿದ್ದು, ವಾರಕ್ಕೊಂದು ಪ್ರಕರಣ ಪೊಲೀಸರಿಗೆ ಪತ್ತೆಯಾಗುತ್ತಿವೆ. ಇನ್ನು ಪತ್ತೆ ಆಗಲಾರದವು, ಗೊತ್ತಿದ್ದರೂ ಸುಮ್ಮನಾಗುವ ಪ್ರಕರಣಗಳೂ ಇವೆ.

ಈಗ ಯುಗಾದಿ ಹಬ್ಬದ ಕಾರಣ ಜೂಜಾಟ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಪೊಲೀಸರು ಕಡಿವಾಣ ಹಾಕಲು ಪ್ರಯತ್ನಿಸಿದ್ದಾರೆ. ಈ ನಿಟ್ಟಿನಲ್ಲಿ ಜೂಜಾಡುವವರ ವಿರುದ್ಧ ಗೂಂಡಾ ಕಾಯ್ದೆ ಪ್ರಯೋಗಿಸುವ ಎಚ್ಚರಿಕೆ ಸಂದೇಶವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ರವಾನಿಸಿದ್ದಾರೆ.

ಮಾರ್ಚ್ 30ರಂದು ಯುಗಾದಿ ಹಬ್ಬ ನಡೆಯಲಿದ್ದು, ಕಲ್ಯಾಣ ಮಂಟಪ, ಹೋಟೆಲ್, ವಸತಿ ಗೃಹಗಳು, ಮನೆ, ತೋಟದ ಮನೆಗಳು, ರಸ್ತೆಯ ಬದಿ ಗಳಲ್ಲಿ ಟೆಂಟ್ ನಿರ್ಮಿಸಿಕೊಂಡು ಜೂಜಾಡುವುದನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಜೂಜಾಟದಲ್ಲಿ ತೊಡಗುವುದಾಗಲಿ, ಅದಕ್ಕೆ ಅವಕಾಶ ಮಾಡಿಕೊಡುವುದಾಗಲಿ, ಪ್ರೋತ್ಸಾಹ ಕೊಡುವುದಾಗಲಿ ಮಾಡಬಾರದು ಎಂದು ಎಚ್ಚರಿಸಿದ್ದಾರೆ.

ಕಳೆದ ಎರಡು ಮೂರು ತಿಂಗಳಲ್ಲಿ 15ಕ್ಕೂ ಅಧಿಕ ಪ್ರಕರಣಗಳು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಅದರಲ್ಲೂ ಕೋಲಾರ ಗ್ರಾಮಾಂತರ, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿಯೇ ಅಧಿಕ ಜೂಜಾಟ ಪ್ರಕರಣಗಳು ಪತ್ತೆಯಾಗಿವೆ. ಹಣ, ಮೊಬೈಲ್, ವಾಹನ ಸೇರಿದಂತೆ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದಾರೆ. ಆದರೂ ಜೂಜಾಟ ನಿಲ್ಲುತ್ತಿಲ್ಲ.

ಎರಡು ದಿನಗಳ ಹಿಂದೆ ಕೋಲಾರ ತಾಲ್ಲೂಕಿನ ಕೋಟೇರಿ ಸಮೀಪದ ನೀಲಗಿರಿ ತೋಪು, ಗಾಜಲದಿನ್ನೆ ಬಳಿ, ಅರಾಭಿಕೊತ್ತನೂರು ಕೆರೆ ಬಳಿ, ಮಂಗಸಂದ್ರ ಮತ್ತು ಅಮ್ಮೇರಹಳ್ಳಿ ಹತ್ತಿರ ಜೂಜಾಟ, ಶ್ರೀನಿವಾಸಪುರ ತಾಲ್ಲೂಕಿನ ಬಂಗವಾದಿ ಗ್ರಾಮ, ದಳಸನೂರು ಸಮೀಪದ ಅರಣ್ಯ ಪ್ರದೇಶ, ಪೆಗಳಪಲ್ಲಿ ಗ್ರಾಮದ ಬಳಿಯ ಮಾವಿನ ತೋಟ, ಯದರೂರು


ಉದಯವಾಹಿನಿ ಚಿತ್ರ

ಯುಗಾದಿ ಜೂಜಾಟಕ್ಕೆ ಕಡಿವಾಣ

ಗ್ರಾಮದ ಹತ್ತಿರ ಇರುವ ಅರಣ್ಯ ಪ್ರದೇಶ, ಮುಳಬಾಗಿಲು ತಾಲ್ಲೂಕು ಸನ್ಯಾಸನಹಳ್ಳಿ ಗ್ರಾಮದ ಮಾವಿನ ತೋಟ, ನಂಗಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಮಾಲೂರು ಠಾಣಾ ವ್ಯಾಪ್ತಿಯಲ್ಲಿ ಮಟ್ಕಾ, ಜೂಜಾಟ ಹೀಗೆ ಹಲವಾರು ಪ್ರಕರಣಗಳು ದಾಖಲಾಗಿವೆ. ಗುಂಪು ಕಟ್ಟಿಕೊಂಡು ಕೋಳಿ ಅಂಕ, ಅಂದರ್ ಬಾಹರ್ ಇಸ್ಪೀಟ್ ಆಡುವುದು ಕಂಡುಬರುತ್ತಿದೆ.

ಜೂಜು ಅಡ್ಡೆ ಮೇಲೆ ಪೊಲೀಸರು ದಾಳಿ ನಡೆಸಿ ಆರೋಪಿಗಳು, ಹಣ, ವಾಹನ, ಮೊಬೈಲ್, ಕೋಳಿ, ಇನ್ನಿತರ ವಸ್ತುಗಳನ್ನು ವಶಕ್ಕೆ ಪಡೆಯುತ್ತಾರೆ. ಇನ್ನು ಕೆಲವೆಡೆ ಗೊತ್ತಿದ್ದೂ ಸುಮ್ಮನಿರುತ್ತಾರೆ ಎಂಬ ಆರೋಪಗಳೂ ಇವೆ. ಇನ್ನು ಯುಗಾದಿ, ಅಸುಪಾಸಿನ ದಿನಗಳಲ್ಲಿ ಜೂಜಾಟದ ಪ್ರಕರಣಗಳು ಹೆಚ್ಚುತ್ತವೆ.

> **ಕೋಲಾರ ಗ್ರಾಮಾಂತರ, ಶ್ರೀನಿವಾಸಪುರದಲ್ಲಿ ಕಳೆದ ಮೂರು ತಿಂಗಳಲ್ಲಿ 15ಕ್ಕೂ ಅಧಿಕ ಪ್ರಕರಣ ಜೂಜಾಟದಲ್ಲಿ ಲಕ್ಷಾಂತರ ಹಣ ಪಣಕ್ಕೆ ಗೂಂಡಾ ಕಾಯ್ದೆಯ ಎಚ್ಚರಿಕೆ ಜೂಜಾಟದಲ್ಲಿ ಪಾಲ್ಗೊಂಡಿರುವುದು ಕಂಡುಬಂದರೆ ಗೂಂಡಾ ಕಾಯ್ದೆ ಪ್ರಯೋಗಿಸಲಾಗುತ್ತದೆ**
> **-ನಿಖಿಲ್ ಬಿ.**
> **ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ರಾಜಾರೋಷವಾಗಿ ಜೂಜಾಟದಲ್ಲಿ ತೊಡಗುತ್ತಾರೆ. ಲಕ್ಷಾಂತರ ರೂಪಾಯಿ ಜೂಜಾಟದಲ್ಲಿ ಪಣಕ್ಕಿಡುತ್ತಾರೆ. ಇದರ ಹಿಂದೆ ಕೆಲ ಕಿಂಗ್ ಪಿನ್‌ಗಳು ಇರುತ್ತಾರೆ.

ಪ್ರಚೋದನೆಗೆ ಒಳಗಾಗಿ ಕೆಲವರು ಸಾವಿರಾರು ರೂಪಾಯಿ ಹಣ ಕಳೆದುಕೊಳ್ಳುತ್ತಾರೆ. ಜೂಜಾಟದ ಅತಿರೇಕದಿಂದ ಹಣ ಮಾತ್ರವಲ್ಲ ಆಸ್ತಿ ಕಳೆದುಕೊಂಡಿದ್ದಾರೆ. ಜೊತೆಗೆ ಹೊಡೆದಾಟ, ಗಲಾಟೆ ನಡೆಯುತ್ತವೆ. ಹೀಗಾಗಿ, ಜಿಲ್ಲಾ ಪೊಲೀಸರು ಎಚ್ಚರಿಕೆಯ ಪ್ರಕಟಣೆ ಹೊರಡಿಸಿದ್ದಾರೆ. ಯಾವುದೇ ರೀತಿಯ ಜೂಜಾಟ ಕಂಡುಬಂದಲ್ಲಿ ಅಂಥವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. ಅದಕ್ಕೆ ಪ್ರೋತ್ಸಾಹಿಸುವ ಸ್ಥಳದ ಮಾಲೀಕರು ಮಧ್ಯವರ್ತಿಗಳ ಮೇಲೂ ಕಾನೂನು ರೀತಿ ಕ್ರಮ ಜರುಗಿಸಲಾಗುವುದು. ಇದಕ್ಕೆ ಸಂಬಂಧಿಸಿದ ಚರ ಮತ್ತು ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಪ್ರಕಟಣೆ ಹೊರಡಿಸಿದ್ದಾರೆ.

# ವಾರ್ಷಿಕ ಪೂಜೋತ್ಸವಕ್ಕೆ ಸಂಭ್ರಮದ ತೆರೆ

• ಉದಯವಾಹಿನಿ, ಸುಂಟಿಕೊಪ್ಪ

ಇಲ್ಲಿನ ಗದ್ದೆಹಳ್ಳದಲ್ಲಿರುವ ಕೊಡಂಗಲ್ಲೂರು ಭದ್ರಕಾಳಿ ಕುರುಂಬ, ಭಗವತಿ ದೇವಸ್ಥಾನ ಮಹಾಪೂಜೆ ನೂರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ಬೆಳಿಗ್ಗೆ ಗಣಪತಿ ಹೋಮದೊಂದಿಗೆ ವೈದಿಕ ಕೈಂಕರ್ಯಗಳಿಗೆ ಚಾಲನೆ ದೊರೆಯಿತು. ಸಂಜೆ ಗಣಪತಿ ಪೂಜೆ, ಸುಬ್ರಹ್ಮಣ್ಯ ದೇವರ ಪೂಜೆ, ನಂತರ ಮುತ್ತಪ್ಪ ದೇವರ ಬೆಳ್ಳಾಟ ನಡೆದು ಮುತ್ತಪ್ಪ ದೇವರಿಗೆ ಪೈಂಗುತ್ತಿ ನಡೆಯಿತು.

ನಂತರ ವಸೂರಿಮಾಲೆ ದೇವರ ಬೆಳ್ಳಾಟಂ ಮತ್ತು ದೇವಿಯ ದರ್ಶನ ನಡೆಯಿತು. ಇದೇ ವೇಳೆ ದೇವಿಯಲ್ಲಿ ತಮ್ಮ ಬೇಡಿಕೆ ಮತ್ತು ಹರಕೆ ಸಲ್ಲಿಸಿ ಸಂತೃಪ್ತಗೊಂಡರು.

ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ ನಡೆಯಿತು. ಬೆಳಿಗ್ಗೆ 9 ಗಂಟೆಗೆ ದೇವಿ ಹರಕೆ, 10 ರಿಂದ 11ವರೆಗೆ ದೇವಿಗೆ ಅರ್ಪಣೆ ಮತ್ತು ಅನ್ನಸಂತರ್ಪಣೆ ನಡೆಯಿತು. ಸುಂಟಿಕೊಪ್ಪ, ಗದ್ದೆಹಳ್ಳ, ಬಾಳೆಕಾಡು, ಕೆದಕಲ್, ಕಂಬಿಬಾಣೆ, ಮಾದಾಪುರ ಸೇರಿದಂತೆ ಕೇರಳದ ಭಕ್ತರು ಆಗಮಿಸಿದ್ದರು. ವಾರ್ಷಿಕೋತ್ಸವದ ಅಂಗವಾಗಿ ದೇವಾಲಯವನ್ನು ವಿದ್ಯುತ್ ದೀಪ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ದೇವಾಲಯದ ಮುಖ್ಯಸ್ಥರಾದ ಪಿ.ಆರ್. ಸುಕುಮಾರ್, ಸುನಿಲ್ ಕುಮಾರ್, ಶಾಂತ ರಾಮಕೃಷ್ಣ, ಪುಟ್ಟಬಸಪ್ಪ, ರೂಪಾ ಇದ್ದರು.


ಉದಯವಾಹಿನಿ ಚಿತ್ರ

> **ರಾತ್ರಿ ಚಾಮುಂಡೇಶ್ವರಿ ಪೂಜೆ, ಗುಳಿಗನ ಪೂಜೆ, ಭದ್ರಕಾಳಿ ದೇವಿಗೆ ಅರ್ಚನೆ ಮತ್ತು ನೈವೇದ್ಯ ಪೂಜೆ ನೆರವೇರಿತು. ಅನಂತರ ದೇವಿ ದರ್ಶನ ಭಕ್ತರಿಗೆ ನೀಡಲಾಯಿತು. ರಾತ್ರಿ 9.30ರ ನಂತರ ವಸೂರಿಮಲೆ ತಲಪುರಿ ಸ್ನಾನ ಮೆರವಣಿಗೆ ಆಕರ್ಷಣೀಯವಾಗಿ ಮೂಡಿಬಂತು. ದಾರಿಯುದ್ದಕ್ಕೂ ಭಕ್ತರ ಉದ್ಘೋಷ, ಕೇರಳದ ಚಂಡೆ ವಾದ್ಯದೊಂದಿಗೆ ಹಣತೆ ಹಿಡಿದು ಮಹಿಳೆಯರು, ಮಕ್ಕಳು ಮೆರವಣಿಗೆ ಮೂಲಕ ಸಾಗಿ ನಂತರ ದೇವಾಲಯದಲ್ಲಿ ಸಮಾಪ್ತಿಗೊಂಡಿತು.**

## ಗೌರಿಬಿದನೂರು ನಗರಕ್ಕೆ ವಾಟದಹೊಸಹಳ್ಳಿ ನೀರು: ಸ್ಥಳೀಯರ ವಿರೋಧ

# ಕೆರೆಗಳಿಗೆ ನೀರು ತುಂಬಿಸಿ ನಗರಕ್ಕೆ ಹರಿಸಲಿ

• ಉದಯವಾಹಿನಿ, ಗೌರಿಬಿದನೂರು

ನಗರಕ್ಕೆ ವಾಟದಹೊಸಹಳ್ಳಿ ಕೆರೆಯಿಂದ ನೀರು ಹರಿಸುವ ಯೋಜನೆಗೆ ಸ್ಥಳೀಯ ರೈತರು ವಿರೋಧ ವ್ಯಕ್ತಪಡಿಸಿದ್ದು, ಯುಗಾದಿ ಬಳಿಕ ಹೋರಾಟ ನಡೆಸಲು ನಿರ್ಧರಿಸಿದರು. ವಾಟದಹೊಸಹಳ್ಳಿ ಗ್ರಾಮದಲ್ಲಿ ಕೆರೆ ಅಚ್ಚುಕಟ್ಟು ರೈತರು, ಸುತ್ತಮುತ್ತಲಿನ ಗ್ರಾಮಸ್ಥರು ಯೋಜನೆ ವಿರೋಧಿಸಿ, ಮುಂದಿನ ಹೋರಾಟದ ಪೂರ್ವಭಾವಿ ಸಭೆ ನಡೆಸಿ, ಹೋರಾಟದ ರೂಪುರೇಷೆಗಳ ಕುರಿತು ಶನಿವಾರ ಚರ್ಚೆ ನಡೆಸಿದರು.

ರಾಜ್ಯ ರೈತ ಸಂಘ, ಹಸಿರು ಸೇನೆ ತಾಲ್ಲೂಕು ಅಧ್ಯಕ್ಷ ಮಾಳಪ್ಪ ಮಾತನಾಡಿ, ವಾಟದಹೊಸಹಳ್ಳಿ ಕೆರೆಗೆ 400 ವರ್ಷಗಳ ಇತಿಹಾಸವಿದೆ. ಗುಡಿಬಂಡೆ ಕೆರೆಗಿಂತ ಮೊದಲು ನಮ್ಮ ಕೆರೆ ನಿರ್ಮಾಣ ಮಾಡಲಾಗಿದೆ. ಗುಡಿಬಂಡೆ ಕೆರೆ ತುಂಬಿದ ಬಳಿಕ ಈ ಕೆರೆಗೆ ನೀರು ಹರಿಸಬೇಕು ಎಂದು 1932ರಲ್ಲೇ ಶಾಸನ ಮಾಡಲಾಗಿದೆ. ಈ ಹಿಂದೆ ಮಾಜಿ ಶಾಸಕ ಶಿವಶಂಕರ ರೆಡ್ಡಿ ಅಧಿಕಾರ ಸಂದರ್ಭದಲ್ಲಿ ಕೂಡ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದೇವೆ ಎಂದರು.

ಕೆರೆ ಸುಮಾರು 500 ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ನೀರುಣಿಸುತ್ತದೆ. ನಗರಗೆರೆ ಹೋಬಳಿಯ ವಿವಿಧ ಕೆರೆಗೆ ನೀರು ಹರಿಯುತ್ತದೆ. 75 ಹಳ್ಳಿಗಳ ಜನಕ್ಕೆ ಜೀವನಾಧಾರವಾಗಿದೆ. ಇಲ್ಲಿ ಯಾವುದೇ ನದಿ ನಾಲೆ, ಕಾರ್ಖಾನೆಗಳಿಲ್ಲ, ಈ ಭಾಗವನ್ನು ಅಭಿವೃದ್ಧಿ ಮಾಡುವುದನ್ನು ಬಿಟ್ಟು ಏಕಾಏಕಿ ಇಲ್ಲಿನ ನೀರನ್ನು ಬೇರೆಡೆಗೆ ಕೊಂಡೊಯ್ಯಲು ಯೋಜನೆ ರೂಪಿಸಿರುವುದು ಖಂಡನೀಯ ಎಂದರು.


ಉದಯವಾಹಿನಿ ಚಿತ್ರ

> **ಇಲ್ಲವಾದಲ್ಲಿ ಬೃಹತ್ ಹೋರಾಟ**
> **ಯೋಜನೆಯಿಂದ ದೂರ ಸರಿಯಬೇಕು. ಚಿಕ್ಕಬಳ್ಳಾಪುರದ ಜಕ್ಕಲಮಡಗು ಜಲಾಶಯ ದಿಂದ ಗೌರಿಬಿದನೂರಿಗೆ ನೀರು ಹರಿಸುವ ಯೋಜನೆ ರೂಪಿಸಲಿ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.**

ರೈತ ಮುಖಂಡ ವಿವೇಕಾನಂದ ರೆಡ್ಡಿ ಮಾತನಾಡಿ, ಎತ್ತಿನಹೊಳೆ ಯೋಜನೆ ವ್ಯಾಪ್ತಿಗೆ ಈ ಕೆರೆ ಒಳಪಡುವುದಿಲ್ಲ. ಆದರೆ 64 ಕೋಟಿ ಮೊತ್ತದ ಯೋಜನೆ ರೂಪಿಸಿ ದೂರದ ಗೌರಿಬಿದನೂರಿಗೆ ನೀರು ಕೊಂಡೊಯ್ಯಲು ಮುಂದಾಗಿರುವುದು ಸರಿಯಲ್ಲ. ಬೇಕಾದರೆ ನಗರಕ್ಕೆ ಹೊಂದಿಕೊಂಡಿರುವ 4 ಕೆರೆಗಳನ್ನು ಪುನಶ್ಚೇತನ ಮಾಡಿ ಎತ್ತಿನಹೊಳೆ ಯೋಜನೆಯಿಂದ ಕೆರೆಗಳಿಗೆ ನೀರು ತುಂಬಿಸಿ ನಗರಕ್ಕೆ ಹರಿಸಲಿ, ಇದಕ್ಕೆ ನಮ್ಮ ತಕರಾರಿಲ್ಲ. ಶಾಸಕರು ಈ ಬಗ್ಗೆ ಪರಿಶೀಲನೆ ನಡೆಸಿ ರೈತರ ಹಿತ ಕಾಪಾಡಬೇಕು ಎಂದು ಮನವಿ ಮಾಡಿದರು. ಆದಿನಾರಾಯಣ ರೆಡ್ಡಿ, ಕೆಂಪು ರಂಗಪ್ಪ, ವಿಎಂಸಿ ಮಂಜುನಾಥ್, ಹರ್ಷವರ್ಧನ ರೆಡ್ಡಿ, ರಾಜನಾಯಕ್, ಕೃಷ್ಣಮೂರ್ತಿ, ವಿ.ಸಿ ನಾಗರಾಜ್, ಎಸ್.ಎಂ ನವೀನ್, ಅಶ್ವತ್ಥಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ರೈತರು ಭಾಗವಹಿಸಿದ್ದರು.

# ಗುಣಮಟ್ಟದ ಆರೋಗ್ಯ ಸೇವೆ: ಶಾಸಕ ಟಿ.ಬಿ.ಜಯಚಂದ್ರ ಭರವಸೆ

• ಉದಯವಾಹಿನಿ, ಶಿರಾ

ತಾಲ್ಲೂಕಿನ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಶಾಸಕ ಟಿ.ಬಿ.ಜಯಚಂದ್ರ ಹೇಳಿದರು. ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಶನಿವಾರ 50 ಲಕ್ಷ ವೆಚ್ಚದ ಪ್ರಯೋಗಾಲಯ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

2024–25ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಪ್ರಯೋಗಾಲಯ ನಿರ್ಮಾಣಕ್ಕೆ 50


ಉದಯವಾಹಿನಿ ಚಿತ್ರ

ಲಕ್ಷ ಬಿಡುಗಡೆಯಾಗಿದೆ. ಇದರ ಜೊತೆಗೆ ಇನ್ನೂ ಹೆಚ್ಚಿನ ಅನುದಾನ ನೀಡಲಾಗುವುದು. ಒಂದು ಅಂತಸ್ತಿನ ಬದಲು ಎರಡು ಅಂತಸ್ತಿನ ಕಟ್ಟಡ ನಿರ್ಮಿಸಿ ಎಂದು ಸೂಚಿಸಿದರು. ಆಸ್ಪತ್ರೆಗೆ ರಾತ್ರಿ ವೇಳೆ ಬರುವ ರೋಗಿಗಳಿಗೆ ತೊಂದರೆಯಾಗದಂತೆ ವೈದ್ಯರು ಕಾರ್ಯನಿರ್ವಹಿಸಿ. ಸರ್ಕಾರ ಈಗ ವೈದ್ಯರನ್ನು ನೇಮಕ ಮಾಡುತ್ತಿದ್ದು ಅಗತ್ಯ ಇರುವಷ್ಟು ವೈದ್ಯರನ್ನು ನೇಮಕ ಮಾಡಲಾಗುವುದು ಎಂದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಜೊತೆ ಮಾತನಾಡಿದ್ದು, ಶೀಘ್ರದಲ್ಲೇ ಶಿರಾಕ್ಕೆ ಬರಲಿದ್ದಾರೆ. ಆಸ್ಪತ್ರೆಯಲ್ಲಿ ಸಭೆ ನಡೆಸಿ ಮೂಲ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಇಎಸ್‌ಐ ಆಸ್ಪತ್ರೆ:** ತಾಲ್ಲೂಕಿನಲ್ಲಿ 13 ಸಾವಿರ ನೋಂದಾಯಿತ ಕಾರ್ಮಿಕರಿದ್ದಾರೆ. ಅವರಿಗೆ ಅನುಕೂಲವಾಗುವಂತೆ ಶೀಘ್ರದಲ್ಲೇ ಇಎಸ್‌ಐ ಆಸ್ಪತ್ರೆ ಪ್ರಾರಂಭಿಸಲಾಗುವುದು ಎಂದರು.

# ಮಳೆಗಾಗಿ ವೀರಶೈವ ಸಮಾಜದಿಂದ ವಿಶೇಷ ಪೂಜೆ

• ಉದಯವಾಹಿನಿ, ಸೋಮವಾರಪೇಟೆ


ಉದಯವಾಹಿನಿ ಚಿತ್ರ

ಪಟ್ಟಣದ ಮಹದೇಶ್ವರ ಬಡಾವಣೆಯ ಮಹದೇಶ್ವರ ದೇವಸ್ಥಾನದಲ್ಲಿ ವೀರಶೈವ ಸಮಾಜದಿಂದ ಶನಿವಾರ ಮಳೆಗಾಗಿ ವಿಶೇಷ ಪೂಜೆ ನಡೆಸಲಾಯಿತು. ವಿರಕ್ತ ಮಠಾಧೀಶ ನಿಶ್ಚಲ ನಿರಂಜನ ದೇಶೀಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ವಿಶೇಷ ಪರುವಿನ ಪೂಜೆ, ಮಳೆಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು. ವೀರಶೈವ ಸಮಾಜದ ಯಜಮಾನ ಬಿ.ಪಿ.ಶಿವಕುಮಾರ್, ಶೆಟ್ರು ಬಿ.ಆರ್. ಮೃತ್ಯುಂಜಯ, ಕಾರ್ಯದರ್ಶಿ ನಾಗರಾಜ್, ಪದಾಧಿಕಾರಿಗಳಾದ ಯುವರಾಜ್, ರಮೇಶ್, ನಾಗೇಶ್, ಸಚಿನ್, ಮಹದೇವ್ ಇದ್ದರು.

# ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು: ಮಂಜು

• ಉದಯವಾಹಿನಿ, ಕೆ.ಆರ್.ಪೇಟೆ.

ಭಾರತೀಯ ಜಾನಪದ ಸಂಸ್ಕೃತಿ ಶ್ರೇಷ್ಠವಾದುದು. ನಮ್ಮ ರೈತಾಪಿ ವರ್ಗದವರು ಆಚರಣೆ ಮಾಡಿಕೊಂಡು ಬಂದಿರುವ ನೆಲದ ಸಂಸ್ಕೃತಿಯ ಅರಿವನ್ನು ಮುಂದಿನ ಜನಾಂಗಕ್ಕೂ ತಿಳಿಯಪಡಿಸುವ ಮತ್ತು ಅದನ್ನು ಮುಂದೆ ತೆಗೆದುಕೊಂಡು ಹೋಗುವ ಮಹತ್ವದ ಜವಾಬ್ದಾರಿ ನಮ್ಮ ಯುವಕರ ಮೇಲಿದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು. ಪಟ್ಟಣದಲ್ಲಿರುವ ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿ ಕೊಂಡಿದ್ದ ಜಾನಪದ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಲೆಗಳ ತವರೂರಾಗಿರುವ ಕೆ. ಆರ್.ಪೇಟೆ ವಿಶೇಷ ಜಾನಪದ ಪರಂಪರೆ ಹೊಂದಿದೆ. ಯುವ ಪೀಳಿಗೆ ಪಾಶ್ಚಿಮಾತ್ಯ ಮೋಹಕ್ಕೆ ಒಳಗಾಗದೆ ದೇಶಿ ಸಂಸ್ಕೃತಿ ಹಾಗೂ ಜಾನಪದ ಸೊಗಡನ್ನು ಅರಿತು ಸಂಸ್ಕೃತಿಯ ಉಳಿವಿಗೆ ಮುಂದಾಗಬೇಕಿದೆ.


ಉದಯವಾಹಿನಿ ಚಿತ್ರ

ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಆಯೋಜಿಸಿರುವ ಕಾರ್ಯಕ್ರಮ ಪ್ರಸ್ತುತವಾಗಿದೆ. ರಂಗಭೂಮಿ, ಜನಪದ ಕಲೆ, ಸೋಬಾನೆ, ಹರಿಕಥೆ ಮುಂತಾದವುಗಳನ್ನು ಕಲಿಯುವ ಮೂಲಕ ಜನಪದ ಸೊಗಡು ಉಳಿಸಬೇಕು ಎಂದರು. ಕಾಲೇಜಿನ ಆವರಣವನ್ನು ಜನಪದ ವಸ್ತುಗಳಿಂದ ಅಲಂಕರಿಸಿ ಜಾನಪದ ಲೋಕವನ್ನೇ ಸೃಷ್ಟಿಸಲಾಗಿತ್ತು. ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆ ತೊಟ್ಟು ಪಾಲ್ಗೊಂಡಿದ್ದರು. ಕಾಲೇಜಿನ ಆವರಣದಲ್ಲಿ ರಾಗಿ, ಭತ್ತ, ಜೋಳ, ಅವರೆ, ತೊಗರಿ, ಹುರುಳಿ ಇತ್ಯಾದಿ ಆಹಾರ ಧಾನ್ಯ ತೆಂಗು, ಅಡಕೆ ಜಾನಪದ ಲೋಕ ಜತೆಗೆ ಪೂರ್ವಜರು ಬಳಸುತ್ತಿದ್ದ ಒನಕೆ, ಕಡುವಳು ಬೀಸುವ ಕಲ್ಲು, ರುಬ್ಬುಗುಂಡು, ಮಣ್ಣಿನ ಒಲೆ, ಪಾತ್ರ ಇತ್ಯಾದಿ ವಸ್ತುಗಳಿಂದ ಇಡೀ ಕಾಲೇಜಿನ ಆವರಣವನ್ನೇ ಅಲಂಕರಿಸಲಾಗಿತ್ತು. ವಿಶೇಷವಾಗಿ ವಿದ್ಯಾರ್ಥಿಗಳಿಂದ ಆಹಾರ ಮೇಳವು ಎಲ್ಲರ ಕಣ್ಮನ ಸೆಳೆದವು. ಕಾರ್ಯಕ್ರಮ ಆರಂಭಕ್ಕೂ ಮುನ್ನ ಪಟ್ಟಣದ ಪ್ರವಾಸಿ ಮಂದಿರದಿಂದ ಕಾಲೇಜು ಆವರಣದವರೆಗೆ ಎತ್ತಿನ ಗಾಡಿ ಮೆರವಣಿಗೆಯಲ್ಲಿ ಪಟ್ಟಣದ ಪ್ರಮುಖ ರಸ್ತೆ ಉದ್ದಕ್ಕೂ ಡೊಳ್ಳು ಕುಣಿತ ತಾಳಕ್ಕೆ ವಿದ್ಯಾರ್ಥಿಗಳ ಜತೆ ಶಾಸಕ ಎಚ್.ಟಿ.ಮಂಜು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಹೆಜ್ಜೆ ಹಾಕಿದರು.

# ಕೊನೆಗೂ ಸಿದ್ಧವಾಯ್ತು ಕನ್ನಡ ಭವನ

## ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಅವರ ಯೋಜನೆ: 2014ರಲ್ಲಿ ಆರಂಭ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಬರೋಬರಿ 11 ವರ್ಷಗಳ ತರುವಾಯ ನಗರದಲ್ಲಿ ನಿರ್ಮಾಣವಾಗುತ್ತಿರುವ ಕನ್ನಡ ಭವನ ಉದ್ಘಾಟನೆಗೆ ಸಿದ್ಧವಾಗಿದೆ. ಏಪ್ರಿಲ್ ಕೊನೆಯ ವಾರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಮೂಲಕ ಭವನ ಲೋಕಾರ್ಪಣೆ ಕಾಣಲಿದೆ. ಈ ವರ್ಷ ಭವನದ ಕಾಮಗಾರಿ ಪೂರ್ಣವಾಗುತ್ತದೆ ಎಂದು ಜನಪ್ರತಿನಿಧಿಗಳು ಹೇಳುತ್ತಲೇ ವರ್ಷಗಳು ಕಳೆದವು. ಅಂತಿಮವಾಗಿ ಸುಸಜ್ಜಿತ ಭವನ ಉದ್ಘಾಟನೆಗೆ ಸಜ್ಜುಗೊಂಡಿದೆ.

ಬಿಬಿ ರಸ್ತೆಯಲ್ಲಿ 2.4 ಎಕರೆ ವಿಸ್ತೀರ್ಣದಲ್ಲಿ ಕಲಾ ಭವನ ಕಾಮಗಾರಿ 2014ರಲ್ಲಿ ಆರಂಭವಾಯಿತು. ಒಂದು ಸಾವಿರ ಮಂದಿಗೆ ಆಸನಗಳ ವ್ಯವಸ್ಥೆ ಸೇರಿದಂತೆ ಸುಸಜ್ಜಿತ ಕಲಾಭವನ ಮತ್ತು ರಂಗಮಂದಿರ ನಿರ್ಮಿಸಬೇಕು ಎನ್ನುವ ಸದಾಶಯದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಯಿತು. ಒಟ್ಟು 12.5 ಕೋಟಿ ಕಾಮಗಾರಿಗೆ ಮಂಜೂರಾಯಿತು.

ಮೊದಲ ಹಂತದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 1ಕೋಟಿ, ಜಿಲ್ಲಾ ವಿಶೇಷ ಅಭಿವೃದ್ಧಿ ಯೋಜನೆಯಿಂದ 5 ಕೋಟಿ ಬಿಡುಗಡೆ ಮತ್ತು 2021ರ ಮಾರ್ಚ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ


ಉದಯವಾಹಿನಿ ಚಿತ್ರ

ಮತ್ತೆ 1 ಕೋಟಿ ಬಿಡುಗಡೆ ಆಯಿತು. ಮೊದಲ ಹಂತದಲ್ಲಿ ಸಿವಿಲ್ ಕಾಮಗಾರಿಗಳು ಪೂರ್ಣವಾದವು. ಹವಾನಿಯಂತ್ರಕ ವ್ಯವಸ್ಥೆ, ವಿದ್ಯುತ್, ಧ್ವನಿ, ಬೆಳಕು, ವೇದಿಕೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿತ್ತು. ಕರ್ನಾಟಕ ಗೃಹಮಂಡಳಿಗೆ ಕಾಮಗಾರಿಯ ಜವಾಬ್ದಾರಿ ವಹಿಸಲಾಗಿತ್ತು.

ಆದರೆ ಕಾಮಗಾರಿ ಪೂರ್ಣಗೊಳಿಸಲು ಜಿಲ್ಲಾ ವಿಶೇಷ ಅಭಿವೃದ್ಧಿ ಯೋಜನೆ ಯಿಂದ ಹಣ ಪೂರ್ಣವಾಗಿ ಬಿಡುಗಡೆ ಆಗಲಿಲ್ಲ. ಈ ಕಾರಣದಿಂದ ಕಲಾಭವನದ ಕಾಮಗಾರಿ ಕೆಲವು ದಿನಗಳ ಕಾಲ ಸ್ಥಗಿತವಾಯಿತು. ಮತ್ತೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳಲು 6.5 ಕೋಟಿ ಅಗತ್ಯವಿದೆ. 2ನೇ ಹಂತದ ಕಾಮಗಾರಿಯಲ್ಲಿ ಕಲ್ಯಾಣಿ ಅಭಿವೃದ್ಧಿ, ಕಾಂಪೌಂಡ್ ಕಾಮಗಾರಿಗೆ 3.05 ಕೋಟಿ ಸೇರಿದಂತೆ ಒಟ್ಟು 9.55 ಕೋಟಿ ಅನುದಾನ ಅವಶ್ಯವಾಗಿದೆ ಎಂದು ಷರಾ ಬರೆಯಲಾಯಿತು. ಹೀಗೆ ಈ ಷರಾ ಬರೆದೇ ವರ್ಷಗಳು ದಾಟಿದವು. ಹಣ ಮಾತ್ರ ಬಿಡುಗಡೆ ಆಗಲಿಲ್ಲ. ಈ ಕಾರಣದಿಂದ ಮತ್ತಷ್ಟು ದಿನಗಳ ಕಾಲ ಭವನದ ಕಾಮಗಾರಿಗಳು ನಡೆಯಲಿಲ್ಲ. ಕನ್ನಡ ಭವನ ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಅವರ ಕನಸು. ಅವರ ಅಧಿಕಾರದ ಅವಧಿಯಲ್ಲಿ ಭವನಕ್ಕೆ ಭೂಮಿ ಪೂಜೆ ನೆರವೇರಿಸಲಾಗಿತ್ತು.

> **ಸರ್ವ ರೀತಿಯಲ್ಲಿಯೂ ಉದ್ಘಾಟನೆಗೆ ಸಜ್ಜು**
> **ಕನ್ನಡ ಭವನ ಸರ್ವರೀತಿಯಲ್ಲಿಯೂ ಸಜ್ಜುಗೊಂಡಿದೆ. ಜನರ ಬಳಕೆಗೆ ದೊರೆಯಬೇಕು ಎಂಬ ನಿಟ್ಟಿನಲ್ಲಿ ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಲಾಗಿದೆ. ಏಪ್ರಿಲ್‌ನಲ್ಲಿ ಭವನದ ಉದ್ಘಾಟನೆಯ ಜತೆಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಸಹ ನಡೆಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ. ಸೌಂಡ್ ಸಿಸ್ಟಮ್‌ನಲ್ಲಿ ಸಮಸ್ಯೆ ಇದೆ ಎಂದು ಕಲಾವಿದರು ತಿಳಿಸಿದ್ದಾರೆ. ಪ್ರೊಜೆಕ್ಟರ್ ಬದಲಿಗೆ ಎಲ್‌ಇಡಿ ಸ್ಕ್ರೀನ್ ಅಳವಡಿಸಲು ಮನವಿ ಮಾಡಿದ್ದಾರೆ. ಇವೆಲ್ಲವುಗಳನ್ನು ಸರಿಪಡಿಸಲಾಗುವುದು. ಭವನದ ಬಳಿ ಇರುವ ಕಲ್ಯಾಣಿಯನ್ನು 65 ಲಕ್ಷದ ಅನುದಾನದಲ್ಲಿ ಅಭಿವೃದ್ಧಿ ಮಾಡುವಂತೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿದ್ದೇನೆ. ಅದರಂತೆ ಅವರು ಕಾರ್ಯಪ್ರವೃತ್ತರಾಗಿದ್ದಾರೆ ಎಂದರು.**

> **ಈಗ ಕಾಮಗಾರಿಯು ಅಂತಿಮ ಹಂತದಲ್ಲಿದ್ದು ಭರದಿಂದ ನಡೆಯುತ್ತಿದೆ. ಏಪ್ರಿಲ್‌ನಲ್ಲಿ ಭವನ ಉದ್ಘಾಟನೆ ಆಗುವುದು ಖಚಿತ. ಸುಸಜ್ಜಿತ ಕನ್ನಡ ಭವನವು ಚಿಕ್ಕಬಳ್ಳಾಪುರಕ್ಕೆ ಗರಿಮೆ ತರಲಿದೆ.**

**ಸಾಂಸ್ಕೃತಿಕ ಕೇಂದ್ರ:** ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಬೇಕು ಎನ್ನುವ ಉದ್ದೇಶದಿಂದ ಕನ್ನಡ ಭವನ ನಿರ್ಮಿಸಲಾಗಿದೆ. ಕಾಮಗಾರಿಯ ಆಮೆ ನಡಿಗೆ ಜಿಲ್ಲೆಯ ಸಾಂಸ್ಕೃತಿಕ, ಕಲಾಪ್ರಿಯರಲ್ಲಿ ಬೇಸರಕ್ಕೆ ಕಾರಣವಾಗಿತ್ತು.

ರಂಗಮಂದಿರ ಬದಲಿಗೆ ಕನ್ನಡ ಭವನ ಎಂದು ಮರುನಾಮಕರಣ ಮಾಡಿ ಸರ್ಕಾರದ ಆದೇಶ ಆಗಿದೆ. ನಾವೆಲ್ಲಾ ಕನ್ನಡಿಗರು ಕರ್ನಾಟಕದಲ್ಲಿದ್ದೇವೆ. ಜಿಲ್ಲೆಗೆ ಒಂದು ಕನ್ನಡ ಭವನ ಬೇಕಿತ್ತು ಎಂದು ತಿಳಿಸಿದರು.

## ಗಂಟಕನದೊಡ್ಡಿ ಒತ್ತುವರಿ ರಸ್ತೆ ತೆರವಿಗೆ ಒತ್ತಾಯ: ಪ್ರತಿಭಟನೆ

• ಉದಯವಾಹಿನಿ, ಹಾರೋಹಳ್ಳಿ

ಗಂಟಕನದೊಡ್ಡಿ ಗ್ರಾಮದಲ್ಲಿ ಪ್ರಭಾವಿಯೊಬ್ಬರು ರಸ್ತೆ ಒತ್ತುವರಿ ಮಾಡಿ, ದಾರಿ ಮುಚ್ಚಿದ್ದು 8 ರಿಂದ 10 ಕುಟುಂಬಗಳಿಗೆ ತೊಂದರೆ ಯಾಗಿದೆ. ಈ ಸಮಸ್ಯೆಯನ್ನು ಜಿಲ್ಲಾಡಳಿತ ಗಮನಹರಿಸಿ ಬಗೆಹರಿಸಬೇಕೆಂದು ಜಯ ಕರ್ನಾಟಕ ಜನಪರ ವೇದಿಕೆ ಸದಸ್ಯರು, ರೈತ ಸಂಘದ ಪದಾಧಿಕಾರಿಗಳು ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಈ ವೇಳೆ ವೇದಿಕೆಯ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಮಾತನಾಡಿ, ಪ್ರಭಾವಿಯೊಬ್ಬರು ದಾರಿ ಮುಚ್ಚಿ ಕುಟುಂಬಗಳಿಗೆ ತೊಂದರೆ ನೀಡುತ್ತಿದೆ.

ಹಾಗಾಗಿ ತಾಲ್ಲೂಕು ಆಡಳಿತ ಗಮನಹರಿಸಿ, ಸಾರ್ವಜನಿಕರ ರಸ್ತೆಗೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು. ಚೀಲೂರು ಮುನಿರಾಜು, ಬಸವರಾಜು, ಮುನಿಸಿದ್ದೇಗೌಡ, ನಾಗರಾಜು, ಗಿರೀಶ್, ಚಿರಣಕುಪ್ಪೆ ರಾಜೇಶ್, ಪಡುವಣಗೆರೆ ಕುಮಾರ್, ಶಿವರಾಜು, ಸಿದ್ದರಾಜು, ಮಲ್ಲಪ್ಪ, ಹರೀಶ್, ಮರಿಯಪ್ಪ, ಕುಮಾರ್ ಇನ್ನಿತರರಿದ್ದರು.

## 15 ದಿನದೊಳಗೆ ಸೂಕ್ತ ಜಾಗ ತೋರಿಸಲಿ ಮಂಜುನಾಥ್‌ಗೆ ಬಾಲಕೃಷ್ಣ ಸವಾಲ್

• ಉದಯವಾಹಿನಿ, ಮಾಗಡಿ

15 ದಿನದೊಳಗೆ ಪಟ್ಟಣದಲ್ಲಿ ಹೊಸ ಆಸ್ಪತ್ರೆ ಕಟ್ಟಲು ಸೂಕ್ತ ಸರ್ಕಾರಿ ಜಾಗ ತೋರಿಸಿದರೆ ಅಲ್ಲೇ ಸರ್ಕಾರಿ ಆಸ್ಪತ್ರೆ ಕಟ್ಟಲು ಸಿದ್ಧ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು. ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶು ಆಸ್ಪತ್ರೆ, ಕೆಂಪೇಗೌಡ ಉದ್ಯಾನ, ತಾಲ್ಲೂಕು ಕಚೇರಿ ತೆರವುಗೊಳಿಸಿ ಹೊಸ ಆಸ್ಪತ್ರೆ ನಿರ್ಮಾಣಕ್ಕೆ ಮಾಜಿ ಶಾಸಕ ಎ.ಮಂಜುನಾಥ್ ಅವರು ವಿರೋಧ ವ್ಯಕ್ತಪಡಿಸುತ್ತಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ 15 ದಿನದಲ್ಲಿ ಜಾಗ ತೋರಿಸಲಿ ಆ ಜಾಗದಲ್ಲಿ ಆಸ್ಪತ್ರೆ ನಿರ್ಮಾಣ ಮಾಡುತ್ತೇವೆ. ಇಲ್ಲವಾದರೆ ಈ ಜಾಗದಲ್ಲೇ ಆಸ್ಪತ್ರೆ ಕಟ್ಟುತ್ತೇವೆ. ಇದನ್ನು ವಿರೋಧಿಸುವುದು ಸರಿಯಲ್ಲ ಎಂದರು. ಹೊಸ ತಾಲ್ಲೂಕು ಕಚೇರಿಯನ್ನು ಪಟ್ಟಣದ ಎನ್‌ಇಎಸ್ ಬಡಾವಣೆಯಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಈಗಿರುವ ತಾಲ್ಲೂಕು ಕಚೇರಿಯನ್ನು ಸ್ಥಳಾಂತರಿಸಿ ಆ ಜಾಗದಲ್ಲಿ ಹೊಸ ಆಸ್ಪತ್ರೆ ನಿರ್ಮಾಣ ಮಾಡಲಾಗುವುದು.

ಎನ್‌ಇಎಸ್ ಬಡಾವಣೆಯಲ್ಲಿ ತಾಲ್ಲೂಕು ಕಚೇರಿ, ಗುರು ಭವನ ಎರಡೂ ಬರಲಿದೆ. ಇದರಿಂದ ತಾಲ್ಲೂಕಿನ ಜನತೆಗೆ ಅನುಕೂಲವಾಗುತ್ತದೆ. ಇದಕ್ಕೆ ಎ.ಮಂಜುನಾಥ್ ಅವರು ಸಹಕಾರ ನೀಡಬೇಕು. ಅವರ ಸಲಹೆ ಸೂಚನೆಗಳು ಏನಾದರೂ ಇದ್ದರೆ ನನಗೆ ನೀಡಲಿ ಎಂದರು.

## ಪರಿಸರ ಸಂರಕ್ಷಣೆಗೆ ಎಲ್ಲರ ಸಹಕಾರ ಅಗತ್ಯ: ಎಂ.ಎನ್.ಮಧುರ ಮೂರ್ತಿ

• ಉದಯವಾಹಿನಿ, ಮಳವಳ್ಳಿ

ಅರಣ್ಯ ನಾಶ, ತಾಪಮಾನ ಏರಿಕೆಯಿಂದ ಹಿಮನದಿಗಳು ಕರಗುವ ಸ್ಥಿತಿಯಲ್ಲಿದ್ದು, ಪರಿಸರ ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ವಲಯ ಅರಣ್ಯಾಧಿಕಾರಿ ಎಂ.ಎನ್.ಮಧುರ ಮೂರ್ತಿ ತಿಳಿಸಿದರು. ಪಟ್ಟಣದಲ್ಲಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ತಾಲ್ಲೂಕು ವಕೀಲರ ಸಂಘ, ಅರಣ್ಯ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ ವಿಶ್ವಜಲ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಹಿಮನದಿಗಳ ಸಂರಕ್ಷಣೆ ಎಂಬ ಯೋಜನೆಯೊಂದಿಗೆ ವಿಶ್ವ ಜಲ ದಿನ ಆಚರಿಸಲಾಗುತ್ತಿದೆ. ಜಾಗತಿಕ ಹವಾಮಾನ ಬದಲಾವಣೆಯನ್ನು ತಡೆಗಟ್ಟಿ ಹಿಮ ನದಿಗಳನ್ನು ಸಂರಕ್ಷಿಸಲು ಮರಗಿಡಗಳು ನೆಟ್ಟು ಅರಣ್ಯವನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಎಂದರು. ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಮಹೇಂದ್ರ ಚಾಲನೆ ನೀಡಿ ಮಾತನಾಡಿ, ಪ್ಲಾಸ್ಟಿಕ್ ಮುಕ್ತ ಪ್ರದೇಶವನ್ನಾಗಿ ಮಾಡುವುದರ ಮೂಲಕ ಪರಿಸರವನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಡಿ.ಎಂ.ಸುಂದರ್ ಮಾತನಾಡಿ, ಮುಂದಿನ ಪೀಳಿಗೆಗಾಗಿ ಪರಿಸರದ ರಕ್ಷಣೆಗೆ ಮುಂದಾಗಬೇಕು ಎಂದು ಹೇಳಿದರು.

## ನುಗ್ಗಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಪಾಂಡವಪುರ

ತಾಲ್ಲೂಕಿನ ನುಗ್ಗಹಳ್ಳಿ ಗ್ರಾಮದ ರಸ್ತೆಯ 2.20ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ನುಗ್ಗಹಳ್ಳಿ ಗ್ರಾಮ ಪರಿಮಿತಿಯ ಮುಖ್ಯ ರಸ್ತೆಯಲ್ಲಿ ಸಂಚಾರ ಕಷ್ಟಕರವಾಗಿತ್ತು. ನವೀಕರಿಸಲು ಗ್ರಾಮಸ್ಥರು ಮನವಿ ಮಾಡಿದ್ದರು.

ರಸ್ತೆ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ. ಇಲ್ಲಿನ ಮಂಡ್ಯ ಮುಖ್ಯ ರಸ್ತೆಯಿಂದ ಚಿಕ್ಕಮರಳಿ ನುಗ್ಗಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯೂ ಹಾಳಾಗಿದ್ದು, ಅಭಿವೃದ್ಧಿ ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

## ಯತ್ನಾಳ ಉಚ್ಚಾಟನೆ ಆದೇಶ ಹಿಂಪಡೆಯಲಿ: ಮಲ್ಲೇಶ್

• ಉದಯವಾಹಿನಿ, ಮೈಸೂರು

ಶಾಸಕ ಬಸನಗೌಡಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟನೆ ಮಾಡಿರುವುದು ಸರಿಯಲ್ಲ. ಪಕ್ಷದ ವರಿಷ್ಠರು ಈ ನಿರ್ಧಾರವನ್ನು ಮರುಪರಿಶೀಲಿಸಿ ಆದೇಶ ವಾಪಸ್ ಪಡೆಯಬೇಕು' ಎಂದು ಗೌಡ ಲಿಂಗಾಯತ ಪಂಚಮಸಾಲಿ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕ ಮಲ್ಲೇಶ್ ಕೋರಿದರು. ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯತ್ನಾಳ ಅವರು ಬಿಜೆಪಿಯ ಹಿರಿಯ ನಾಯಕ. ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಸೇರಿದಂತೆ ಹಲವು ಹೋರಾಟ ಮಾಡಿದ್ದಾರೆ. ಪಕ್ಷಕ್ಕಾಗಿ ದುಡಿದಿದ್ದಾರೆ. ಅಂಥವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದು ದುರಂತ. ಇದರಿಂದ ಪಂಚಮಸಾಲಿ ಲಿಂಗಾಯತ ಸಮಾಜಕ್ಕೆ ನೋವು ತಂದಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ವಂಶಾಡಳಿತ ಹಾಗೂ ಭ್ರಷ್ಟಾಚಾರದ ವಿರುದ್ಧ ಇದ್ದಾರೆ. ಯತ್ನಾಳ ಅವರ ನಿಲುವೂ ಇದೇ ಆಗಿದೆ. ಆದರೆ, ರಾಜ್ಯದ ಕೆಲ ಪಟ್ಟಭದ್ರ ಹಿತಾಸಕ್ತಿಗಳ ತಪ್ಪು ಮಾಹಿತಿಯ ಕಾರಣದಿಂದಾಗಿ ವರಿಷ್ಠರು ಉಚ್ಚಾಟನೆ ಮಾಡಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ಮಾಡಿದವರು ಉನ್ನತ ಸ್ಥಾನದಲ್ಲಿದ್ದಾರೆ. ಪಕ್ಷಕ್ಕಾಗಿ ದುಡಿದವರನ್ನು ಮೂಲೆಗುಂಪು ಮಾಡುವ ಷಡ್ಯಂತ್ರ ನಡೆಯುತ್ತಿದೆ' ಎಂದು ಆರೋಪಿಸಿದರು.




ಭಾನುವಾರ 30 ಮಾರ್ಚ್ 2025

## ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ಕುಡಿಯುವ ನೀರು ಸಮಸ್ಯೆಯಾಗದಂತೆ ಕ್ರಮವಹಿಸಿ

• ಉದಯವಾಹಿನಿ ಚಿತ್ರದುರ್ಗ

ಬೇಸಿಗೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಎಲ್ಲಿಯೂ ಕೂಡ ಕುಡಿಯುವ ನೀರು ಸಮಸ್ಯೆ ತಲೆದೋರದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು. ಪ್ರಸಕ್ತ ಸಾಲಿನ ಬೇಸಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಜನ-ಜಾನುವಾರುಗಳಿಗೆ ಕುಡಿಯುವ ನೀರು, ಮೇವು ಪರಿಸ್ಥಿತಿ ಮುಂತಾದ ವಿಷಯಗಳ ಕುರಿತು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೇಸಿಗೆ ಈಗಾಗಲೇ ಪ್ರಾರಂಭವಾಗಿದ್ದು, ಕುಡಿಯುವ ನೀರಿಗೆ ಸಂಬಂಧಿಸಿದಂತೆ ಬಹಳ ಎಚ್ಚರಿಕೆಯಿಂದ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕು.

ಆಯಾ ತಾಲ್ಲೂಕು ತಹಶೀಲ್ದಾರ್‌ಗಳು ಹಾಗೂ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತಾಗಿ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ, ಪ್ರತಿ ಗ್ರಾಮವಾರು ಹಿಮ್ಮಾಯಿತಿ ಪಡೆಯಬೇಕು.

ಯಾವ ಗ್ರಾಮದಲ್ಲಿಯೂ ಖಾಲಿ ಕೊಡಗಳ ಪ್ರದರ್ಶನ, ಕುಡಿಯುವ ನೀರಿನ ಸಮಸ್ಯೆಯಂತಹ ದೂರುಗಳು ಕೇಳಿಬರದಂತೆ ಎಚ್ಚರಿಕೆಯಿಂದ ಅಗತ್ಯ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.


ಉದಯವಾಹಿನಿ ಚಿತ್ರ

### ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು

**ಸದ್ಯದ ಪರಿಸ್ಥಿತಿಯಲ್ಲಿ ಹಿರಿಯೂರು ತಾಲ್ಲೂಕು ಹೊರತುಪಡಿಸಿ, ಬೇರೆ ಯಾವ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಹಿರಿಯೂರು ತಾಲ್ಲೂಕಿನಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಇದರಿಂದ ಕುಡಿಯುವ ನೀರಿನ ಸಮಸ್ಯೆಗಳು ಬಗೆಹರಿಯಲಿವೆ ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಏಪ್ರಿಲ್, ಮೇ ಹಾಗೂ ಜೂನ್ ಮಾಹೆವರೆಗೂ ತಿಂಗಳುವಾರು ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳ ವಿವರ ನೀಡಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.**

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕು ತಹಶೀಲ್ದಾರ್, ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಮಸ್ಯಾತ್ಮಕ ಗ್ರಾಮಗಳ ಪಟ್ಟಿವನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದರು. ಹಿರಿಯೂರು ತಾಲ್ಲೂಕಿನ ಪ್ರಸ್ತುತ 11 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದೆ. ದಿಂಡಾವರ, ಗೌಡನಹಳ್ಳಿ, ಉಡುವಳ್ಳಿ ಮತ್ತು ಜವನಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹಿರಿಯೂರು ತಾ.ಪಂ ಇಒ ಸಭೆಗೆ ಮಾಹಿತಿ ನೀಡಿದರು.

**ಈ ಬಾರಿಯ 15ನೇ ಹಣಕಾಸಿನ ಅನುದಾನವನ್ನು ಕುಡಿಯುವ ನೀರಿಗೆ ಮಾತ್ರ ಬಳಕೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ನಿಯಮ ಮೀರಿ ಅನುದಾನ ಬಳಕೆ ಮಾಡುವಂತಿಲ್ಲ ಎಂದು ತಿಳಿಸಿದ ಅವರು, ಜಿಲ್ಲೆಯಲ್ಲಿ ಮೊದಲ ಬಾರಿಗೆ ಒಟ್ಟು 189 ಗ್ರಾಮ ಪಂಚಾಯಿತಿಗಳಿಂದ ಶೇ.77ಕ್ಕೂ ಹೆಚ್ಚು ಕರವಸೂಲಾತಿ ಮಾಡಲಾಗಿದ್ದು, ಒಟ್ಟು ರೂ.24 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ**

**-ಜೆ.ಸೋಮಶೇಖರ್**
**ಜಿಲ್ಲಾ ಪಂಚಾಯಿತಿ ಸಿಇಒ ಎಸ್.**

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಯಾವುದೇ ಮೇವಿನ ಕೊರತೆ ಇಲ್ಲ. ಇನ್ನೂ 9 ತಿಂಗಳವರೆಗೂ ಮೇವು ಲಭ್ಯತೆ ಇದೆ ಎಂದು ಪಶುಸಂಗೋಪನೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಬೇಕು ಎಂದು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನ್, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಗಾಯತ್ರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹೇಂದ್ರ ಕುಮಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಬಸನಗೌಡ ಪಾಟೀಲ್ ಸೇರಿದಂತೆ ತಹಶೀಲ್ದಾರ್‌ಗಳು, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

**ಕಳೆದ ವರ್ಷ ಉತ್ತಮ ಮಳೆಯಾಗಿದ್ದರಿಂದ ಅಂತರ್ಜಲ ಮಟ್ಟ ಹೆಚ್ಚಿದ್ದು ಬಹುತೇಕ ಎಲ್ಲಾ ಕೆರೆಗಳು ತುಂಬಿವೆ. ಕೊಳವೆಬಾವಿಗಳು ರಿಚಾರ್ಜ್ ಆಗಿವೆ. ಹಾಗಾಗಿ ಈ ಬಾರಿಯ ಬೇಸಿಗೆಯನ್ನು ಸಮರ್ಪಕ ಹಾಗೂ ಉತ್ತಮವಾಗಿ ನಿರ್ವಹಣೆ ಮಾಡಬಹುದಾಗಿದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ವಿಶೇಷ ಸಭೆಗಳನ್ನು ನಡೆಸಿ, 15ನೇ ಹಣಕಾಸು ನಿಧಿ, ವಿಶೇಷ ಅನುದಾನ, ತೆರಿಗೆ ಸಂಗ್ರಹ ಹಣವನ್ನು ನಿಯಮಾನುಸಾರ ಬಳಕೆ ಮಾಡಬೇಕು -ಜಿಲ್ಲಾಧಿಕಾರಿ**

## ಮಿನಿ ನ್ಯೂಸ್

### 14 ಕುರಿ ಕಳವು: ದೂರು

• ಉದಯವಾಹಿನಿ ಕಲಬುರಗಿ

ಕುರಿ ದೊಡ್ಡಿಯಲ್ಲಿದ್ದ 50 ಕುರಿಗಳಲ್ಲಿ 14 ಕುರಿಗಳನ್ನು ಕಳವು ಮಾಡಿರುವ ಘಟನೆ ಹೇರೂರ (ಬಿ) ಗ್ರಾಮದಲ್ಲಿ ನಡೆದಿದೆ. ಶಿವಶರಣ ಜೋಗೂರ ಅವರಿಗೆ ಸೇರಿದ 1,68000 ಸಾವಿರ ರೂ.ಬೆಲೆ ಬಾಳುವ 14 ಕುರಿಗಳನ್ನು ಕಳವು ಮಾಡಲಾಗಿದೆ. ಶಿವಶರಣ ಜೋಗೂರ ಅವರು ಗ್ರಾಮದ ಸೈಬಣ್ಣ ಚಿಕ್ಕ ಕವಲಗಿ ಅವರ ತೋಟದ ಹೊಲದಲ್ಲಿ ಒಂದು ಕಬ್ಬಿಣದ ಬೇಲಿ ಹಾಕಿದ ದೊಡ್ಡಿ ಮಾಡಿದ್ದು, ಎಂದಿನಂತೆ ಮಾ.17 ರಂದು ರಾತ್ರಿ ಸಹ ಕುರಿ ದೊಡ್ಡಿಯಲ್ಲಿ 50 ಕುರಿಗಳನ್ನು ಹಾಕಿ ಮನೆಗೆ ಹೋಗಿದ್ದರು. ಬೆಳಿಗ್ಗೆ ಬಂದು ನೋಡಿದಾಗ 50 ಕುರಿಗಳಲ್ಲಿ ಒಂದು ದೊಡ್ಡ ಟಗರು, ಒಂದು ಹೋತ ಮತ್ತು 12 ಕುರಿಗಳು ಸೇರಿ ಒಟ್ಟು 14 ಕುರಿಗಳು ಕಳವಾಗಿವೆ. ಈ ಸಂಬಂಧ ಅವರು ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

### ವಿದ್ಯಾರ್ಥಿಗಳಿಂದ ಶಿಕ್ಷಕರ ಅನುಕರಣೆ

• ಉದಯವಾಹಿನಿ ಜೇವರ್ಗಿ

ಕಲಿಕೆಯ ವಾತಾವರಣವನ್ನು ಶಿಕ್ಷಕರೇ ನಿರ್ಮಿಸಬೇಕು. ಕೆಲವು ಶಿಕ್ಷಕರನ್ನು ಮಾತ್ರ ಮಕ್ಕಳು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ವಿದ್ಯಾರ್ಥಿಗಳ ನೆನಪಿನಲ್ಲಿ ಉಳಿಯುವಂತಹ ಶಿಕ್ಷಕರು ನೀವಾಗಬೇಕು. ಮಕ್ಕಳಿಗೆ ಶಿಕ್ಷಕರೇ ಮಾದರಿ, ಶಿಕ್ಷಕರು ಹಾಕುವ ತೊಡುವ ಬಟ್ಟೆ, ನಡಿಗೆ ಎಲ್ಲವನ್ನು ಅನುಕರಣೆ ಮಾಡುತ್ತಾರೆ. ಅತ್ಯಾಕರ್ಷಕ ವ್ಯಕ್ತಿತ್ವ ಶಿಕ್ಷಕರಾದಾಗಿರಬೇಕು. ಮಕ್ಕಳ ಬಗ್ಗೆ ನಕಾರಾತ್ಮಕವಾಗಿ ಮಾತನಾಡಬಾರದು. ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದರೆ ಅದು ಅವರ ತಪ್ಪಲ್ಲ. ಪಾಠ ಮಾಡುವ ಶಿಕ್ಷಕರು ಪರಾಮರ್ಶೆ ಮಾಡಿಕೊಳ್ಳಬೇಕು ಎಂದು ಖ್ಯಾತ ಶಿಕ್ಷಣ ತಜ್ಞರಾದ ಮತ್ತು ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ.ಫೆಸರ್ ಎಸ್ ಎಸ್ ಪಟ್ಟಣ್ ಶೆಟ್ಟರ್ ಹೇಳಿದರು. ಅವರು ಜೇವರ್ಗಿ ನಗರದ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಜೀವನದಲ್ಲಿ ಸಮಯವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಇದು ಅತ್ಯಂತ ಅದ್ಭುತ ಮತ್ತು ಪ್ರಾಯೋಗಿಕ ವಿಷಯವಾಗಿದೆ. ಸಮಯದ ಮೌಲ್ಯವನ್ನು ಅರ್ಥಮಾಡಿಕೊಳ್ಳುವ ಮೂಲಕ ಮತ್ತು ಸಮಯವನ್ನು ಪರಿಣಾಮಕಾರಿಯಾಗಿ ಬಳಸುವುದರಿಂದ, ನಾವೆಲ್ಲರೂ ಕಡಿಮೆ ಪ್ರಯತ್ನದಿಂದ ಹೆಚ್ಚಿನದನ್ನು ಸಾಧಿಸಬಹುದು, ಪ್ರಶಿಕ್ಷಣಾರ್ಥಿಗಳಿಗೆ ಎಲ್ಲಾ ರೀತಿಯ ಬೋಧನಾ, ಕಲಿಕಾ ಸಾಮಗ್ರಿಗಳು ಅನುಭವಿ ಉಪನ್ಯಾಸಕರು, ಗ್ರಂಥಾಲಯ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಎಲ್ಲಾ ಸೌಲಭ್ಯಗಳು ನೀಡಲಾಗಿದೆ. ಪ್ರಶಿಕ್ಷಣಾರ್ಥಿಗಳು ಅತ್ಯುತ್ತಮ ಶಿಕ್ಷಕರಾಗಿ ಭವಿಷ್ಯ ರೂಪಿಸಿಕೊಳ್ಳಬೇಕು, ಯಶಸ್ವಿ ವಿದ್ಯಾರ್ಥಿಯು ಇತರರಿಗಿಂತ ಭಿನ್ನವಾಗಿರುತ್ತಾನೆ ಏಕೆಂದರೆ ಅವನು ಸಮಯ ನಿರ್ವಹಣೆಯ ಕೌಶಲ್ಯವನ್ನು ಹೊಂದಿದ್ದಾನೆ. ಸಮಯ ನಿರ್ವಹಣೆಯು ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಬೇಕಾದ ಪ್ರಮುಖ ಜೀವನ ಕೌಶಲ್ಯವಾಗಿದೆ.

## ಮಲ್ಪೆ ಬಂದರು ಸಮಗ್ರ ನಿರ್ವಹಣೆಗೆ ಅಧಿಕಾರಿಗಳಿಗೆ

# ಜಿಲ್ಲಾಧಿಕಾರಿ ವಿದ್ಯಾಕುಮಾರಿ .ಕೆ ಸೂಚನೆ

• ಉದಯವಾಹಿನಿ ಮಲ್ಪೆ

ಮಲ್ಪೆ ಬಂದರು ಪ್ರದೇಶದಲ್ಲಿ ಸ್ವಚ್ಛತೆ ಸೇರಿದಂತೆ ಮತ್ತಿತರ ನಿರ್ವಹಣಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಿ ಮೀನುಗಾರಿಕಾ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವಿದ್ಯಾ ಕುಮಾರಿ .ಕೆ ರವರು ಸೂಚನೆ ನೀಡಿದರು.

ಅವರು ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ಮಲ್ಪೆ ಬಂದರು ಸಮಗ್ರ ನಿರ್ವಹಣೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಮಲ್ಪೆ ಬಂದರು ರಾಜ್ಯದಲ್ಲಿಯೇ ಅತಿ ದೊಡ್ಡ ಮೀನುಗಾರಿಕಾ ಬಂದರು ಆಗಿದ್ದು, ಮೀನುಗಾರಿಕಾ ಚಟುವಟಿಕೆಗಳನ್ನು ಮೀನುಗಾರರು ಕೈಗೊಳ್ಳಲು ಅನುಕೂಲವಾಗುವಂತೆ ಎಲ್ಲಾ ರೀತಿಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಲ್ಪೆ ಬಂದರಿನಲ್ಲಿ ಮೀನುಗಳ ಕಳ್ಳತನ ನಡೆಯುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ .ಇವುಗಳ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ಸಾಧ್ಯವಾದರೆ ಮಲ್ಪೆ ಬಂದರಿನಲ್ಲಿ ಪೊಲೀಸ್ ಔಟ್ ಪೋಸ್ಟನ್ನು ಸ್ಥಾಪಿಸಲು ಸ್ಥಳಾವಕಾಶ ಮಾಡಿ ಕೊಡಬೇಕೆಂದು ಮೀನುಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು


ಉದಯವಾಹಿನಿ ಚಿತ್ರ

**ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯವರು ಕೂಡಲೇ ಮಲ್ಪೆ ಬಂದರಿನಲ್ಲಿ ಅಗತ್ಯವಾದ ಮೂಲಭೂತ ಸೌರ್ಕಗಳಾದ ಕುಡಿಯುವ ನೀರು, ಶೌಚಾಲಯದ ವ್ಯವಸ್ತೆ ಹಾಗೂ ಸಿ.ಸಿ. ಟಿವಿ ಗಳನ್ನು ಆದ್ಯತೆ ಮೇರೆಗೆ ಅನುಷ್ಟಾನಗೊಳಿಸ ಬೇಕೆಂದರು.**

ಬಂದರಿಗೆ ಮೂರು ದ್ವಾರಗಳಿದ್ದು ಸಾರ್ವಜನಿಕರನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾಗಿರುತ್ತದೆ ಆದ್ದರಿಂದ ಮೀನುಗಾರಿಕೆ ಬಂದರಿಗೆ ಬರುವವರನ್ನು ಸರಿಯಾದ ರೀತಿಯಲ್ಲಿ ತಪಾಸಣೆ ಮಾಡಿ ಒಳಗೆ ಬಿಡಬೇಕು.

ಈ ಕಾರ್ಯ ಮಾಡಲು ಗುತ್ತಿಗೆದಾರರು ಅಗತ್ಯ ಸಿಬ್ಬಂದಿಗಳನ್ನು ನೇಮಕ ಮಾಡಬೇಕೆಂದು ಸೂಚನೆ ನೀಡಿದರು.

## ಗಾಂಜಾ, ಚರಸ್ ಮಾರಾಟ: ಇಬ್ಬರ ಬಂಧನ

• ಉದಯವಾಹಿನಿ ಮಂಗಳೂರು

ನಗರದಲ್ಲಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮಾದಕ ವಸ್ತುವಾದ ಹೈಡ್ರೋವೀಡ್ ಗಾಂಜಾ, ಚರಸ್ ಹಾಗೂ ಗಾಂಜಾವನ್ನು ಮಾರಾಟ ಮಾಡುತ್ತಿದ್ದ ಯುವಕರಿಬ್ಬರನ್ನು ಮಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಾದ ಪಾಂಡೇಶ್ವರದ ಸುಭಾಷ್ ನಗರದ ತೈಸಿರ್ ಇಸ್ಮಾಯಿಲ್ ಹುಸೈನ್ (23), ಪಾಣೆ ಬಂಟ್ವಾಳದ ಬೋಳಂಗಡಿ ಹೌಸ್ನ ರೋಯಸ್ಟನ್ ಕ್ಷವಿಯರ್ ಲೋಬೋ (22), ಎಂದು ಗುರುತಿಸಲಾಗಿದೆ.

ಆರೋಪಿಗಳಿಂದ 8,00,000 ರೂ. ಮೌಲ್ಯದ ನಿಷೇಧಿತ ಮಾದಕ ವಸ್ತುವಾದ ಹೈಡ್ರೋವೀಡ್, ಗಾಂಜಾ,ಚರಸ್ ಹಾಗೂ 2 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಕ್ಕೆ ಪಡೆದ ಸೊತ್ತಿನ ಮೌಲ್ಯ ರೂ. 9 ಲಕ್ಷ ರೂ. ಅಂದಾಜಿಸಲಾಗಿದೆ. ಈ ಬಗ್ಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳು ಐಷಾರಾಮಿ ಜೀವನ ಸಾಗಿಸುವ ಉದ್ದೇಶದಿಂದ ಮಾದಕ ವಸ್ತು ಮಾರಾಟದ ದಂಧೆಯನ್ನು ನಡೆಸುತ್ತಿದ್ದರು ಎನ್ನಲಾಗಿದೆ.

## ಯುಗಾದಿ ಹಬ್ಬಕ್ಕಾಗಿ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ತಾತ್ಕಾಲಿಕ ಮಾರುಕಟ್ಟೆ

• ಉದಯವಾಹಿನಿ ಚಿತ್ರದುರ್ಗ

ಯುಗಾದಿ ಹಬ್ಬಕ್ಕೆ ಬೇಕಾಗಿರುವ ವಸ್ತುಗಳನ್ನು ಮಾರಾಟ ಮಾಡಲು ಹಾಗೂ ಸಾರ್ವಜನಿಕರು ಖರೀದಿಸಲು ಅನುಕೂಲವಾಗುವಂತೆ ಮಾ. 28 ರಿಂದ 31 ರವರೆಗೆ ಚಿತ್ರದುರ್ಗ ನಗರದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ತಾತ್ಕಾಲಿಕ ಮಾರುಕಟ್ಟೆ ವ್ಯವಸ್ಥೆಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಅವರು ತಿಳಿಸಿದ್ದಾರೆ.

ಯುಗಾದಿ ಹಬ್ಬದ ಪ್ರಯುಕ್ತ ಹಬ್ಬಕ್ಕೆ ಬೇಕಾಗಿರುವ ವಸ್ತುಗಳನ್ನು ವ್ಯಾಪಾರಸ್ತರು ಚಿತ್ರದುರ್ಗ ನಗರದ ಎಂ.ಜಿ. ವೃತ್ತಕ್ಕೆ ಬಂದು ವ್ಯಾಪಾರವನ್ನು ಈ ಹಿಂದಿನಿಂದಲೂ ಮಾಡುತ್ತಾ ಬರುತ್ತಿದ್ದಾರೆ.

ಇದರಿಂದಾಗಿ ಎಂ.ಜಿ. ವೃತ್ತ, ಆನೆ ಬಾಗಿಲು ರಸ್ತೆ, ಮೆದೆಹಳ್ಳಿ ರಸ್ತೆ, ಹೊಳಲ್ಕೆರೆ ರಸ್ತೆ ಹಾಗೂ ಬಿ.ಡಿ. ರಸ್ತೆಗಳನ್ನು ಹೆಚ್ಚಿನ ಸಾರ್ವಜನಿಕರು ಸೇರುವುದರಿಂದ ನಗರದಲ್ಲಿ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ.

ಅಲ್ಲದೆ ಹೆಚ್ಚಿನ ಜನದಟ್ಟಣೆಯಾಗುವ ಹಿನ್ನೆಲೆಯಲ್ಲಿ ಸರಗಳ್ಳತನಗಳು, ಮೊಬೈಲ್ ಮತ್ತು ಪರ್ಸ್ ಕಳ್ಳತನಗಳು ನಡೆಯುವ ಸಾಧ್ಯತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಹಬ್ಬದ ನಿಮಿತ್ತ ಹಬ್ಬಕ್ಕೆ ಬೇಕಾಗುವ ವಸ್ತುಗಳ ಮಾರಾಟಗಾರರಿಗೆ ನಗರದ ಹಳೇ ಮಾಧ್ಯಮಿಕ ಶಾಲಾ ಮೈದಾನದಲ್ಲಿ ತಾತ್ಕಾಲಿಕ ಮಾರುಕಟ್ಟೆ ವ್ಯವಸ್ಥೆಗೊಳಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೋರಿಕೆ ಸಲ್ಲಿಸಿರುತ್ತಾರೆ.

ಅದರಂತೆ ಸಾರ್ವಜನಿಕರ ಸುಗಮ ಸಂಚಾರ ಹಾಗೂ ಜನದಟ್ಟಣೆ ತಡೆಯುವ ಸಲುವಾಗಿ ಮಾ. 28ರಿಂದ ಮಾರ್ಚ್ 31ರ ವರೆಗೆ ಯುಗಾದಿ ಹಬ್ಬದ ಪ್ರಯುಕ್ತ ಹಬ್ಬಕ್ಕೆ ಬೇಕಾಗುವ ವಸ್ತುಗಳ ಮಾರಾಟಗಾರರಿಗೆ ನಗರದ ಹಳೇ ಮಾಧ್ಯಮಿಕ ಶಾಲಾ ಮೈದಾನದಲ್ಲಿ ನಗರಸಭೆಯ ವತಿಯಿಂದ ತಾತ್ಕಾಲಿಕ ಮಾರುಕಟ್ಟೆಯ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಸಾರ್ವಜನಿಕರು ಹಾಗೂ ಮಾರಾಟಗಾರರು ಹಬ್ಬದ ವಸ್ತುಗಳಿಗೆ ಸಂಬಂಧಿಸಿದಂತೆ ಇದೇ ಮೈದಾನದಲ್ಲಿ ತಮ್ಮ ವ್ಯಾಪಾರ ವಹಿವಾಟು ನಿರ್ವಹಿಸುವಂತೆ ಜಿಲ್ಲಾಧಿಕಾರಿ ವೆಂಕಟೇಶ್ ಟಿ. ಅವರು ತಿಳಿಸಿದ್ದಾರೆ.

## ಬಿಜೆಪಿ ಹೈಕಮಾಂಡ್ ಯತ್ನಾಳ ಉಚ್ಚಾಟನೆ ಹಿಂಪಡೆದು ರಾಜ್ಯಾಧ್ಯಕ್ಷ ಸ್ಥಾನಕ್ಕೆ ನೇಮಿಸಲು: ಗಂಗಾಣಿ ಆಗ್ರಹ

• ಉದಯವಾಹಿನಿ,ಚಿಂಚೋಳಿ

ಬಿಜಾಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಪಕ್ಷದಿಂದ ಉಚ್ಚಾಟನೆ ಮಾಡಿದ್ದು ಖಂಡನೀಯ,ಹೈಕಮಾಂಡ್ ಉಚ್ಚಾಟನೆ ಹಿಂಪಡೆದು ಯತ್ನಾಳಗೆ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಬೇಕು ಎಂದು ಕಾಳಗಿ ರೈತ ಸೇನೆ ಅಧ್ಯಕ್ಷ ವೀರಣ್ಣ ಗಂಗಾಣಿ ಆಗ್ರಹಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,ಯತ್ನಾಳ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮಾತು ಕೇಳಿಕೊಂಡು ಬಿಜೆಪಿ ಹೈಕಮಾಂಡ್ ಉಚ್ಚಾಟನೆ ಮಾಡಿದ್ದಾರೆ.

ಉತ್ತರ ಕರ್ನಾಟಕದಲ್ಲಿ ತನ್ನದೆಯಾದ ಪವ್ವರ ಯತ್ನಾಳ ಹೊಂದಿದ್ದಾರೆ,ಕಳೆದ ಬಾರಿ ವಿಧಾನಸಭೆಯಲ್ಲಿ 120ಶಾಸಕರ ಬಲವಿತ್ತು ಈಗ 60ಇಳಿದಿದೆ ಯತ್ನಾಳ ಉಚ್ಚಾಟನೆಯಿಂದ ಮುಂದೆ 30ಶಾಸಕರು ಗೆದ್ದು ಬರುವುದಿಲ್ಲಾ.

ಯತ್ನಾಳ ಕುಟುಂಬ ರಾಜಾಕಾರಣ ಬಗ್ಗೆ ಹೋರಾಟ ಮಾಡಿದ್ದು, ಕಾಂಗ್ರೇಸ್ ಪಕ್ಷದ ವಿರುದ್ಧ ಹೋರಾಟ ಮಾಡಿದ್ದಾರೆ ಆದರೆ ಹಗಲು ಬಿಜೆಪಿ ರಾತ್ರಿ ಕಾಂಗ್ರೇಸ್ ಪಕ್ಷದಲ್ಲಿದ್ದು ಹೊಂದಾಣಿಕೆ ರಾಜಾಕಾರಣ ಮಾಡುವವರ ಮಾತು ಕೇಳಿ ಉಚ್ಚಾಟನೆ ಮಾಡಿದ್ದು ಬಿಜೆಪಿಗೆ ತುಂಬಾ ನಷ್ಟವಾಗಲಿದೆ,ರಾಜ್ಯಾದ್ಯಂತ ಅನೇಕ ಪದಾಧಿಕಾರಿಗಳು ಕಾರ್ಯಕರ್ತರು ರಾಜೀನಾಮೆ ನೀಡುತ್ತಿದ್ದಾರೆ.

40ವರ್ಷದಿಂದ ಬಂದ ಆಗಿದ ಸಕ್ಕರೆ ಕಾರ್ಖಾನೆ ಪ್ರಾರಂಭಿಸಿ ಈ ಭಾಗದ ಸುತ್ತಮುತ್ತಲಿನ 3-4ತಾಲ್ಲೂಕಿನ ರೈತರಿಗೆ ನೇರವಿಗೆ ಧಾವಿಸಿದ್ದಾರೆ,ಬಿಜೆಪಿಯಲ್ಲಿ ಬಕೆಟ್ ಹಿಡಿದು ರಾಜಾಕಾರಣ ಮಾಡುವವರ ರಾಜಾಕಾರಣ ನಡೆಯುತ್ತಿದೆ ಎಂದರು. ಯತ್ನಾಳ ಹಿಂದೆ ದೊಡ್ಡ ಪ್ರಮಾಣದ ಕಾರ್ಯಕರ್ತರ ಬಲವಿದೆ ರಾಜ್ಯ ಬಿಜೆಪಿಯಲ್ಲಿ ಯಾರ ಹತ್ತಿರ ಧಮ್ ಇಲ್ಲ,ಯತ್ನಾಳ ಹತ್ತಿರ ಸಂಪೂರ್ಣ ಧಮ್ ಯಿದೆ,ಯಾವುದೇ ಹಗರಣವಿಲ್ಲ,ಹೊಂದಾಣಿಕೆ ರಾಜಕೀಯವಿಲ್ಲ, ಬರಿ ಪಕ್ಷ ಸಂಘಟನೆ, ಹಿಂದುತ್ವ ಬ್ರ್ಯಾಂಡ್ ಯತ್ನಾಳ ಹೀಗಾಗಿ ಧಮ್ ಯಿದೆ ಎಂದರು.

**ಅಭಿಮಾನಿಗಳು, ಬಿಜೆಪಿ ಕಾರ್ಯಕರ್ತರು:-** ಗೌತಮ್ ಮೌರ್ಯ, ಶ್ರೀನಿವಾಸ ಪೂಜಾರಿ,ರಾಘವೇಂದ್ರ ಸಿರೋಳ್ಳಿ ಇದ್ದರು.


ಉದಯವಾಹಿನಿ ಚಿತ್ರ

**ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಂಶ ಪರಂಪರೆ ರಾಜಾಕಾರಣ ವಿರುದ್ಧ ಹೋರಾಟ ಮಾಡಿದ್ದಕ್ಕಾಗಿ ಯತ್ನಾಳ ಅವರನ್ನು ಉಚ್ಚಾಟನೆ ಮಾಡಿದ್ದು ಖಂಡನೀಯ, ಬಿಜೆಪಿ ಪಕ್ಷ ಎಲ್. ಕೆ.ಅಡ್ವಾಣಿ,ಅಟಲ್ ಬಿ.ವಾಜಪೇಯಿ,ಬಿಜೆಪಿ ಪಕ್ಷ ಬೆಳೆಸಿದವರು ಈಗ ಉಚ್ಚಾಟನೆ ಮಾಡಿದವರು ಪಕ್ಷದ ಬಗ್ಗೆ ಗೊತ್ತಿಲ,ಯತ್ನಾಳ ಉಚ್ಚಾಟನೆ ಹಿಂಪಡೆಯಬೇಕು ಇಲ್ಲದಿದ್ದರೆ ಬರುವ ದಿನಗಳಲ್ಲಿ ಅವರ ಅಭಿಮಾನಿಗಳು,ಬಿಜೆಪಿ ಕಾರ್ಯಕರ್ತರು ರಾಜೀನಾಮೆ ನೀಡುತ್ತೇವೆ -ವೈಜೀನಾಥ ಕೊಂಡಾ**

## 15.70ಕೋಟಿ ರೂ.ಬಜೆಟ್ ಮಂಡನೆ ಸಮಗ್ರ ಅಭಿವೃದ್ಧಿಗೆ ಬದ್ಧ: ಅಧ್ಯಕ್ಷ ಟೈಗರ್

• ಉದಯವಾಹಿನಿ, ಚಿಂಚೋಳಿ

ಸರ್ಕಾರದಿಂದ ಬರುವ ವಿವಿಧ ಯೋಜನೆಗಳ ಅನುದಾನ ಹಾಗೂ ಸ್ಥಳೀಯ ಸಂಸ್ಥೆಯ ಸ್ವಂತ ಸಂಪನ್ಮೂಲಗಳಿಂದ ಬರುವ ಅಂದಾಜು ಆದಾಯ ಸ್ವೀಕೃತಿ 15,70,11,000 ರೂಪಾಯಿ 2025-26ನೇ ಸಾಲಿನ ಬಜೆಟ್ ಮಂಡನೆ ಮಾಡಲಾಗಿದೆ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಬದ್ಧವೆಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಹೇಳಿದರು.

**2025-26ನೇ ಸಾಲಿನ ಪುರಸಭೆ ಬಜೆಟ್**

ಪಟ್ಟಣದ ಪುರಸಭೆ ಸಭಾಂಗಣದಲ್ಲಿ 2025-26ನೇ ಸಾಲಿನ ಆಯವ್ಯಯ ಬಜೆಟ್ ಮಂಡನೆ ಮಾಡಿ ಮಾತನಾಡಿದ ಅವರು,ಸರ್ಕಾರದಿಂದ ಬರುವ ವಿವಿಧ ಯೋಜನೆಗಳಿಗೆ ಅನುದಾನಗಳ ಅಂದಾಜು ವೆಚ್ಚ ಮತ್ತು ಸ್ಥಳೀಯ ಸಂಸ್ಥೆಯ ಸ್ವತಃ ಸಂಪನ್ಮೂಲಗಳಿಂದ ಮಾಡುವ ಅಂದಾಜು ವೆಚ್ಚ ಪಾವತಿ 15,67,64,000 ರೂಪಾಯಿಗಳು ಮತ್ತು ಉಳಿತಾಯ ಮೊತ್ತ 2,47,000ರೂಪಾಯಿ ಉಳಿತಾಯ ಬಜೆಟ್ ವಾಗಿದೆ. ಅಧ್ಯಕ್ಷ ಸ್ಥಾನ ಅಲಂಕರಿಸಿದ ನಂತರ ಮೊದಲನೇಯ ಬಜೆಟ್ ಇದಾಗಿದ್ದು ಜನಪರವಾಗಿ ಜಾತ್ಯಾತೀತವಾಗಿ ಪಾರದರ್ಶಕವಾಗಿ ಸಮಗ್ರ ಪಟ್ಟಣದ ಅಭಿವೃದ್ಧಿಗೆ ಕಂಕಣಬದ್ಧವಾಗಿ ಶ್ರಮಿಸುತ್ತಿದ್ದೇನೆ. ಇನ್ನೂ ಸಾಕಷ್ಟು ಅನುದಾನವನ್ನು ಜಿಲ್ಲಾ ಉಸ್ತುವಾರಿ ಸಚಿವರಿಂದ ಬಿಡುಗಡೆಗೊಳಿಸಿ ಪಟ್ಟಣದ ಮೂಲಭೂತ ಸೌಕರ್ಯಗಳ ಸಮಸ್ಯೆ ಪರಿಹರಿಸಲಾಗುವುದು. ಆರೋಗ್ಯ,ಶಿಕ್ಷಣ,ನೀರು ನಿರ್ವಹಣೆ,ಶೌಚಾಲಯ,ಸಿಸಿ ರಸ್ತೆ,ಚರಂಡಿ,ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳು ಸಾರ್ವಜನಿಕರ ಅನುಕೂಲತಕ್ಕಂತೆ ಬಜೆಟ್ ಮಂಡನೆ ಮಾಡಲಾಗಿದೆ ಎಂದರು. ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ,ಸ್ಥಾಯಿ ಸಮಿತಿ ಅಧ್ಯಕ್ಷ ಜಗನ್ನಾಥ ಗುತ್ತೇದಾರ,ಉಪಾಧ್ಯಕ್ಷ ಸುಲ್ತಾನಬೇಗಂ ಖಲೀಲ್ ಪಟೇಲ,ಅಬ್ದುಲ್ ಬಾಷೀದ್,ಶಬ್ಬೀರ ಅಹೇಮದ್,ಶಶಿ ಕಳಸ್ಕರ,ಬಸವರಾಜ ಸಿರಸಿ,ನಾಗೇಂದ್ರಪ್ಪಾ ಗುರಂಪಳ್ಳಿ,ಶಿವಕುಮಾರ ಪೋಚಾಲಿ,ರೂಪಕಲಾ ಕಟ್ಟಿಮನಿ,ಲಕ್ಷ್ಮಿಕಾಂತ ಸುಕಂದ,ಸೇರಿದಂತೆ ಸದಸ್ಯರು ಅಧಿಕಾರಿಗಳು ಸಿಬ್ಬಂದಿ ವರ್ಗದವರು ಇದ್ದರು.



ಉದಯವಾಹಿನಿ ಚಿತ್ರ

## ಸಮಾಜದ ಸ್ವಾಸ್ಥ್ಯ ಹೆಚ್ಚಿಸುವ ಸಾಹಿತ್ಯ ಕೃತಿಗಳು ಹೊರಬರಲಿ

• ಉದಯವಾಹಿನಿ ಕಲಬುರಗಿ

ಇಂದಿನ ಸಮಾಜದಲ್ಲಿ ಎಲ್ಲಾ ರಂಗಗಳು ಹಾದಿ ತಪ್ಪುತ್ತಿವೆ. ಸಮಾಜವನ್ನು ಸರಿ ದಾರಿಗೆ ತರುವ ಕಾರ್ಯವನ್ನು ನಮ್ಮ ಸಾಹಿತ್ಯ ಮಾಡುತ್ತದೆ. ಇದರಲ್ಲಿ ಬರಹಗಾರರ ಪಾತ್ರ ಬಹು ಮುಖ್ಯವಾಗಿದೆ.

ಈ ದಿಸೆಯಲ್ಲಿ ಸಮಾಜದ ಸ್ವಾಸ್ಥ್ಯ ಹೆಚ್ಚಿಸುವ ಸಾಹಿತ್ಯ ಕೃತಿಗಳು ಹೊರ ಬರಲಿ ಎಂದು ಹಿರಿಯ ಸಾಹಿತಿ ಡಾ. ಶ್ರೀಶೈಲ ನಾಗರಾಳ ಹೇಳಿದರು.

ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತು ನಗರದ ಕನ್ನಡ ಭವನದ ಸುವರ್ಣ ಸಭಾ ಭವನದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನ ಹಾಗೂ ಯುಗಾದಿ ಪ್ರಯುಕ್ತ ಏರ್ಪಡಿಸಿದ್ದ ಕಾವ್ಯ ಬೇವು ವಿಶೇಷ ಮಹಿಳಾ ಕವಿಗೋಷ್ಠಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ ರಾಜ್ಯದಲ್ಲಿ ಆಡಳಿತದಲ್ಲಿನ ಭ್ರಷ್ಟಾಚಾರಕ್ಕೆ ಲಗಾಮು ಇಲ್ಲವಾಗಿದೆ. ಭ್ರಷ್ಟಾಚಾರ ಮಿತಿ ಮೀರಿದರೆ ಶ್ರೀಸಾಮಾನ್ಯನಿಗೆ ಉಳಿಗಾಲವಿಲ್ಲ.

ಈ ವ್ಯವಸ್ಥೆ ವಿರುದ್ಧ ನಾವೆಲ್ಲ ಒಟ್ಟಾಗಿ ಹೋರಾಡುವ ಅನಿವಾರ್ಯತೆ ಇದೆ ಎಂದು ಹೇಳಿದ ಅವರು, ಬೆಳಕಿಗೆ ಬಾರದ ಗ್ರಾಮೀಣ ಭಾಗದ ಮಹಿಳೆಯರು ಸಾಹಿತ್ಯಕ ಬರವಣಿಗೆ ಪ್ರೇರಣೆ ನೀಡುವ ನಿಟ್ಟಿನಲ್ಲಿ ಪರಿಷತ್ತು ಇಂಥ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.


ಉದಯವಾಹಿನಿ ಚಿತ್ರ

## ಯತ್ನಾಳ್ ಉಚ್ಚಾಟನೆ ಖಂಡನೀಯ: ವೀರಣ್ಣ ಗಂಗಾಣಿ

• ಉದಯವಾಹಿನಿ, ಕಾಳಗಿ

ಹಿಂದುತ್ವದ ಫೈರ್ ಬ್ರ್ಯಾಂಡ್, ಹಿಂದೂ ಹುಲಿ ಎಂತಲೇ ಗುರುತಿಸಿಕೊಂಡಿದ್ದ ಶಾಸಕ ಯತ್ನಾಳ್‌ಗೆ ಬಿಜೆಪಿ ಪಕ್ಷದ ಹೈಕಮಾಂಡ್ ಆರು ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನದಿಂದ ಅಮಾನತು ಮಾಡಿದೆ. ಹೀಗಾಗಿ ಶಾಸಕ ಯತ್ನಾಳ್ ಬೆಂಬಲಿಗರು, ಅಭಿಮಾನಿಗಳು ಆಕ್ರೋಶ ಹೊರಹಾಕುತ್ತಿದ್ದಾರೆ.

ಯತ್ನಾಳ್ ಅವರನ್ನು ವಾಪಸ್ ಪಕ್ಷಕ್ಕೆ ಸೇರಿಸಿಕೊಳ್ಳದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ರೈತ ಸೇನೆ ತಾಲ್ಲೂಕು ಅಧ್ಯಕ್ಷ ವೀರಣ್ಣ ಗಂಗಾಣಿ ಎಚ್ಚರಿಕೆ ನೀಡಿದ್ದಾರೆ. ಕಲ್ಯಾಣ ಕರ್ನಾಟಕದ ಹಿಂದೂ ಹುಲಿ ಬಸನಗೌಡ ಯತ್ನಾಳ ಅವರನ್ನು ಉಚ್ಚಾಟನೆ ಮಾಡಿರೋದು ಖಂಡಿಸುತ್ತೇವೆ. ಉತ್ತರ ಕರ್ನಾಟಕದ ಬಿಜೆಪಿಯ ದೊಡ್ಡ ಆಸ್ತಿ ಎಂದರೆ ಬಸನಗೌಡ ಪಾಟೀಲ ಯತ್ನಾಳ ಎಂದರು.


ಉದಯವಾಹಿನಿ ಚಿತ್ರ

**ಯತ್ನಾಳ್ ಅವರ ಉಚ್ಚಾಟನೆ ಬೆನ್ನಲ್ಲೇ ಕೆಲ ಬಿಜೆಪಿ ಕಾರ್ಯಕರ್ತರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಪಕ್ಷದಿಂದ ಉಚ್ಚಾಟನೆ ಮಾಡಿರುವುದು ನಮಗೆಲ್ಲ ಆಘಾತ ತಂದಿದೆ. ಭಾರತೀಯ ಜನತಾ ಪಕ್ಷ ಹಿಂದುತ್ವದ ಪಕ್ಷವಾಗಿದ್ದು, ಹಿಂದುತ್ವದ ಆಧಾರದ ಮೇಲೆ ಬೆಳೆಯುತ್ತಿರುವ ನಾಯಕರನ್ನ ತುಳಿಯುತ್ತಿರುವುದು ದುರದೃಷ್ಟಕರ.**

## ಎಲ್ಲರೂ ಸಹ ಶ್ರಮಿಸಿದಾಗ ಮಾತ್ರ ಬಡತನ ನಿವಾರಿಸಲು ಸಾಧ್ಯ: ಡಾ. ಎಚ್ ಕೆ ಎಸ್ ಸ್ವಾಮಿ

# ಯಾವುದೇ ಮಗು ಬರಿಗಾಲಿನಲ್ಲಿ, ಬಿಸಿಲಿನಲ್ಲಿ ನಡೆಯದಂತೆ ನೋಡಿಕೊಳ್ಳಿ

• ಉದಯವಾಹಿನಿ ಚಿತ್ರದುರ್ಗ

ಬೇಸಿಗೆಯ ಬಿಸಿಲಿನಲ್ಲಿ ಸ್ಲಂ ಮಕ್ಕಳು ಪಾದರಕ್ಷೆಗಳಿಲ್ಲದೆ ನಡೆದಾಡುತ್ತಿದ್ದು, ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಯಾವುದೇ ಮಗು ಬೇಸಿಗೆ ಸಮಯದಲ್ಲಿ, ಬಿಸಿಲಿನ ಶಾಖದಲ್ಲಿ ಬರಿಗಾಲಿನಲ್ಲಿ ರಸ್ತೆಗಳ ಮೇಲೆ ನಡೆದಾಡಿದಾಗ, ಪಾದಗಳಿಗೆ ಸುಟ್ಟ ಗಾಯಗಳಾಗಿ, ನಡೆದಾಡದಂತ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಆದ್ದರಿಂದ ಯಾವುದೇ ಮಗು ಹೆಚ್ಚುತ್ತಿರುವ ಭೂಮಿಯ ತಾಪಮಾನದ ಇಂದಿನ ದಿನಗಳಲ್ಲಿ, ಚಪ್ಪಲಿಗಳಿಲ್ಲದೆ ರಸ್ತೆಯ ಮೇಲೆ ನಡೆದಾಡ ದಂತೆ ನೋಡಿಕೊಳ್ಳಿ, ಪ್ರತಿ ಸಾರಿ ಹೊರಗೆ ಹೋಗುವಾಗ ಮಕ್ಕಳು ಚಪ್ಪಲಿ ಧರಿಸಿ ಓಡಾಡಲಿ ಎಂದು ಕರ್ನಾಟಕ ಜ್ಞಾನ-ವಿಜ್ಞಾನ ಸಮಿತಿ ರಾಜ್ಯ ಉಪಾಧ್ಯಕ್ಷ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಡಾ ಎಚ್ ಕೆ ಎಸ್ ಸ್ವಾಮಿಯವರು ಪೋಷಕರಲ್ಲಿ ವಿನಂತಿಸಿಕೊಂಡರು.

ಅವರು ಚಿತ್ರದುರ್ಗ ನಗರದ ಬಳಿಯಲ್ಲಿರುವ ಮೆದೆಹಳ್ಳಿ ರಸ್ತೆ, ಈಶ್ವರ ಬಡಾವಣೆ ಸಮೀಪ ಇರುವ ಸ್ಲಂ ಮಕ್ಕಳಿಗೆ ಮತ್ತು ನಿವಾಸಿಗಳಿಗೆ ಬೆಂಗಳೂರಿನ ಮೈಕ್ರೋಸಾಫ್ಟ್ ಕಂಪನಿಯವರು ನೀಡಿದ್ದ ಚಪ್ಪಲಿ, ಹಣ್ಣು, ಬಟ್ಟೆ, ಸಿಹಿ ವಿತರಿಸುತ್ತಾ ಮಾತನಾಡುತ್ತಿದ್ದರು.

ಪ್ರತಿ ವರ್ಷ ಹೊಸ ವರ್ಷದ ಯುಗಾದಿ ಹಬ್ಬವನ್ನು ಬಡವರ ಜೊತೆ ಆಚರಿಸಿಕೊಂಡು, ಅವರಿಗೂ ಸಹ ಹೊಸ ಬಟ್ಟೆ, ಚಪ್ಪಲಿ, ಪುಸ್ತಕ, ಆಹಾರ ಧಾನ್ಯಗಳನ್ನು ನೀಡಿ, ನಮ್ಮ ಸಂತೋಷವನ್ನು ಅವರ ಜೊತೆ ಹಂಚಿಕೊಂಡು ಹೊಸ ಯುಗಾದಿ ಹಬ್ಬವನ್ನ ವಿಭಿನ್ನ ಈ ರೀತಿಯಲ್ಲಿ ಆಚರಿಸಬೇಕು, ಇನ್ನೊಬ್ಬರಿಗೆ ಸಹಕರಿಸುತ್ತಾ ಹಬ್ಬ ಆಚರಿಸುವುದರಿಂದ ಅದು ನಮ್ಮ ಜೀವನ ಪರ್ಯಂತ ನೆನಪಿನಲ್ಲಿ ಉಳಿಯುತ್ತದೆ ನಮ್ಮಷ್ಟಕ್ಕೆ ನಾವು ಹಬ್ಬ ಆಚರಿಸಿಕೊಳ್ಳುವುದಕ್ಕಿಂತ ಸಂಕಷ್ಟದಲ್ಲಿರುವ ಜೊತೆ ಹಬ್ಬ ಆಚರಿಸಿ ಕೊಂಡು, ಅವರನ್ನು ಸಹ ಮೇಲ್ಮಟ್ಟಕ್ಕೆ ತರಲು ಪ್ರಯತ್ನಿಸಬೇಕು ಎಂದರು.

ಸ್ಲಂಗಳಲ್ಲಿ ವಾಸ ಮಾಡುವ ಜನರಲ್ಲಿ, ಗುಡಿ ಕೈಗಾರಿಕೆಗಳ ಬಗ್ಗೆ ಅನುಭವಿದ್ದು, ಅದರ ಬಗ್ಗೆ ಕೆಲಸ ಮಾಡಲು ಸಹ ಉತ್ಸಾಹಿತರಾಗಿದ್ದಾರೆ, ಅವರಿಗೆ ನಾವು ಸರಿಯಾದ ಸಮಯಕ್ಕೆ, ಚರಕ, ಹತ್ತಿ, ದಾರಮಾಡುವುದು ಹೇಗೆ, ನೇಯ್ಗೆ ಮಾಡುವುದು ಹೇಗೆ, ಬಟ್ಟೆ ಹೊಲಿದುಕೊಳ್ಳುವುದನ್ನು ಹೇಳಿಕೊಟ್ಟರೆ, ಅವರು ಒಂದಿಷ್ಟು ರಾಷ್ಟ್ರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುತ್ತಾರೆ ಎಂದರು.

ಬೆಂಗಳೂರಿನ ಮೈಕ್ರೋಸಾಫ್ಟ್ ಕಂಪನಿಯ ಡಾಟಾ ಇಂಜಿನಿಯರ್ ಬಿ. ಮಾನಸ ಮಾತನಾಡುತ್ತಾ ವಿದ್ಯಾರ್ಥಿಗಳು ಶಿಸ್ತಿನಿಂದ ವರ್ತಿಸಬೇಕು.

ಸ್ವಚ್ಛತೆಯನ್ನ ಕಾಪಾಡಿಕೊಂಡು, ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು, ಪರಿಸರವನ್ನ ಸ್ವಚ್ಛವಾಗಿಟ್ಟುಕೊಂಡು, ಉತ್ತಮವಾದ ಶಿಕ್ಷಣವನ್ನು ಪಡೆಯಬೇಕೆಂದು ವಿದ್ಯಾರ್ಥಿಗಳಿಗೆ ಚಪ್ಪಲಿಗಳನ್ನ ವಿತರಿಸುತ್ತಾ ಕಿವಿ ಮಾತನ್ನು ಹೇಳಿದರು.

ಕಾರ್ಯಕ್ರಮದಲ್ಲಿ ಸ್ಲಂ ವಿದ್ಯಾರ್ಥಿಗಳಿಗೆ ಚಪ್ಪಲಿ, ಹಣ್ಣು, ಸಿಹಿ ಮತ್ತು ಬಟ್ಟೆಗಳನ್ನ ವಿತರಿಸಿ, ಅವರಿಗೆ ಚರಕದ ಮುಖಾಂತರ ದಾರವನ್ನು ತೆಗೆದು, ಪ್ರದರ್ಶಿಸಿ, ಸ್ವಚ್ಛತೆ ಬಗ್ಗೆ ಅರಿವನ್ನ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಪತಂಜಲಿ ಯೋಗ ಶಿಕ್ಷಕರಾದ ರವಿ ಅಂಬೇಕರ್, ಮನೋಹರ್ ಬಿ. ಆರ್. ಹಾಗೂ ಇನ್ನಿತರ ಗ್ರಾಮಸ್ಥರು ಭಾಗವಹಿಸಿದ್ದರು.

### ಬಡಜನರ ಏಳಿಗೆಗಾಗಿ ಶ್ರಮಿಸಿ

**ಬಡವರ ಬದುಕನ್ನ ಹತ್ತಿರದಿಂದ ನೋಡಿದಾಗ, ನಾವು ಮಾಡುತ್ತಿರುವ ಅಭಿವೃದ್ಧಿಗಳು ಯಾವುವು ಸಹ ಸರಿಯಾಗಿ ಬಡತನವನ್ನು ನಿವಾರಿಸಲು ಸಾಧ್ಯವಾಗಿಲ್ಲ, ಹಾಗಾಗಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿದರು ಸಹ, ಬಡವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ನಾವು ಕಾರ್ಯ ನಿರ್ವಹಿಸಬೇಕು, ಬಡತನದಲ್ಲಿರುವವರಿಗೆ ವಾಸ ಮಾಡಲು ಮನೆ, ಜಾಗ, ಬದುಕು ಸಾಗಿಸಲು ವಿದ್ಯುತ್ ದೀಪ ವ್ಯವಸ್ಥೆ, ಮಕ್ಕಳ ಶಿಕ್ಷಣಕ್ಕಾಗಿ ಹಾಸ್ಟೆಲ್ ವ್ಯವಸ್ಥೆ, ಊಟ ವಸತಿಯ ವ್ಯವಸ್ಥೆ, ಅವರಿಗೆ ಬೇಕಾದಂತಹ ಪುಸ್ತಕ, ಚಪ್ಪಲಿಗಳನ್ನ, ಕೊಂಡುಕೊಳ್ಳಲಾರದೆ ಪರಿತಪಿಸುತ್ತಿರುವಂತಹ ಬಡಜನರ ಏಳಿಗೆಗಾಗಿ, ಎಲ್ಲರೂ ಸಹ ಶ್ರಮಿಸಿದಾಗ ಮಾತ್ರ ಬಡತನ ನಿವಾರಿಸಲು ಸಾಧ್ಯವಾಗುತ್ತದೆ ಎಂದರು.**


ಉದಯವಾಹಿನಿ ಚಿತ್ರ

**ಯುಗಾದಿ ಹಬ್ಬವನ್ನ ವಿಭಿನ್ನವಾಗಿ ಆಚರಿಸಿ**

**ಮಕ್ಕಳ ಪಾದಗಳು ಸೂಕ್ಷ್ಮವಾಗಿದ್ದು, ಪಾದರಕ್ಷೆಗಳಿಲ್ಲದೆ ಬಿಸಿಲಿನ ತಾಪಮಾನದಲ್ಲಿ, ರಸ್ತೆಯ ಮೇಲೆ, ಒರಟು ಭೂಪ್ರದೇಶದ ಮೇಲೆ ನಡೆದಾಡಿದಾಗ, ಸುಟ್ಟ ಗಾಯಗಳಾಗಿ, ಪರಿತಪಿಸುವಂತಾಗುತ್ತದೆ. ಅಂತಹ ಮಕ್ಕಳಿಗೆ ಪಾದರಕ್ಷೆಗಳನ್ನು ನೀಡಿ ಬಿಸಿಲಿನ ತಾಪಮಾನದಿಂದ ಸುಟ್ಟ ಗಾಯಗಳಾದನ್ನು ತಪ್ಪಿಸಿ, ಒರಟು ಭೂಪ್ರದೇಶವನ್ನು ಸಹಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬಹುದು**

**-ಡಾ. ಎಚ್ ಕೆ ಎಸ್ ಸ್ವಾಮಿ**

### ಸಹಾಯ ಮಾಡುವಲ್ಲಿ ಎಲ್ಲರೂ ಕೈ ಜೋಡಿಸಬೇಕು

**ಹಿಂದುಳಿದ ಮಕ್ಕಳಿಗೆ ಅಗತ್ಯವಾದ ಪಾದರಕ್ಷೆಗಳನ್ನು ಒದಗಿಸಿ, ಅವರು ಸಹ ಆರಾಮ, ಘನತೆ ಮತ್ತು ಆತ್ಮವಿಶ್ವಾಸದಿಂದ ನಡೆಯಲು ಸಹಾಯ ಮಾಡುವಲ್ಲಿ ಎಲ್ಲರೂ ಕೈ ಜೋಡಿಸಬೇಕು, ಈಗ ಹೆಚ್ಚುತ್ತಿರುವ ಸುಡುವ ಬೇಸಿಗೆಯ ಉಷ್ಣತೆಯಲ್ಲಿ, ಸರಿಯಾದ ಪಾದರಕ್ಷೆಗಳಿಲ್ಲದೆ ದೂರ ನಡೆಯುವ ಮಕ್ಕಳಿಗೆ, ಇನ್ನಷ್ಟು ಸವಾಲಾಗಿರುತ್ತದೆ. ಅನೇಕರು ಅಸ್ವಸ್ಥತೆ, ಗಾಯ ಮತ್ತು ಆರೋಗ್ಯದ ಅಪಾಯಗಳಿಗೆ ಒಡ್ಡಿಕೊಳ್ಳುತ್ತಾರೆ. ಸ್ವಯಂಸೇವಕರ ಮೂಲಕ, ಯಾವುದೇ ಮಗು ಬರಿಗಾಲಿನಲ್ಲಿ, ಶಾಖ ಅಥವಾ ಒರಟು ಭೂಪ್ರದೇಶವನ್ನು ಸಹಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಿ. ಭೂಮಿಯ ತಾಪಮಾನ ಹೆಚ್ಚಾದಂತೆ, ಸರಿಯಾದ ಪಾದರಕ್ಷೆಗಳ ಅಗತ್ಯವು ಇನ್ನಷ್ಟು ತುರ್ತು ಆಗುತ್ತದೆ. ಮಕ್ಕಳ ಪಾದಗಳನ್ನು ಶಾಖ, ಒರಟು ಮಾರ್ಗಗಳು ಮತ್ತು ಗಾಯದಿಂದ ರಕ್ಷಿಸುವುದು ಕೇವಲ ಅನಿವಾರ್ಯವಲ್ಲ - ಇದು ಅವರಿಗೆ ಆತ್ಮವಿಶ್ವಾಸ ಮತ್ತು ಉತ್ತಮ ಅವಕಾಶಗಳನ್ನು ನೀಡುವ ಒಂದು ಹೆಜ್ಜೆ ಎಂದು ನುಡಿದರು.**

## ದಿನ ಭವಿಷ್ಯ

| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ. ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು.

**ವೃಷಭ** ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಬಹವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು.

**ಮಿಥುನ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಇದು ಮತ್ತೊಂದು ಚೈತನ್ಯದಾಯಕ ದಿನವಾಗಿರುತ್ತದೆ ಮತ್ತು ಅನಿರೀಕ್ಷಿತ ಲಾಭಗಳನ್ನು ನಿರೀಕ್ಷಿಸಬಹುದು.

**ಕರ್ಕಾಟಕ** ಇಂದು ಜೀವನದ ಹಲವು ಪ್ರಮುಖ ವಿಷಯಗಳ ಕುರಿತು ನೀವು ಕುಟುಂಬದೊಂದಿಗೆ ಕುಳಿತುಕೊಂಡು ಮಾತನಾಡಬಹುದು. ನಿಮ್ಮ ಮಾತುಗಳು ಕುಟುಂಬದವರನ್ನು ತೊಂದರೆಗೊಳಿಸಬಹುದು.

**ಸಿಂಹ** ನಿಮ್ಮನ್ನು ಈ ಮೊದಲು ಆಮಂತ್ರಿಸಿರದಿದ್ದಲ್ಲಿ ಆಮಂತ್ರಿಸಿದಲ್ಲಿ – ಆಹ್ವಾನವನ್ನು ಸಭ್ಯತೆಯಿಂದ ಸ್ವೀಕರಿಸಿ. ಒಮ್ಮೆ ನಿಮ್ಮ ಜೀವನಸಂಗಾತಿಯನ್ನು ನೀವು ಭೇಟಿಯಾದ ಮೇಲೆ, ಬೇರೇನೂ ಬೇಕಾಗಿರುವುದಿಲ್ಲ.

**ಕನ್ಯಾ** ತುಂಬಾ ಚಿಂತೆ ಮತ್ತು ಒತ್ತಡ ರಕ್ತದೊತ್ತಡವನ್ನು ಉಂಟುಮಾಡಬಹುದು. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ತುಲಾ** ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು.

**ವೃಶ್ಚಿಕ** ನಿಮ್ಮ ಶಕ್ತಿಯನ್ನು ಸ್ವಯಂ ಸುಧಾರಣೆ ಯೋಜನೆಗಳಲ್ಲಿ ಹಾಗೂ ನಿಮ್ಮನ್ನು ಉತ್ತಮವಾಗಿಸುವ ಯೋಜನೆಗಳಲ್ಲಿ ಹಾಕಿ. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ.

**ಧನಸ್ಸು** ಸೃಜನಶೀಲ ಆಸಕ್ತಿಗಳು ನಿಮ್ಮನ್ನು ಶಾಂತವಾಗಿರಿಸುತ್ತವೆ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಸಂಜೆ ಸಾಮಾಜಿಕ ಚಟುವಟಿಕೆ ನೀವು ನಿರೀಕ್ಷಿಸಿದ್ದಕ್ಕಿಂತ ಉತ್ತಮವಾಗಿರುತ್ತದೆ.

**ಮಕರ** ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ಕುಂಭ** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

**ಮೀನ** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ.

## ತೋಟದ ಸಾಮಗ್ರಿ ಕಳವು

• ಉದಯವಾಹಿನಿ ಕಲಬುರಗಿ

ಹಾಗರಗಾ ಸೀಮಾಂತರದಲ್ಲಿರುವ ತೋಟದಲ್ಲಿ ತೋಟದ ನೀರಾವರಿಗೆ ಉಪಯೋಗಿಸುವ 52, 500 ರೂ.ಮೌಲ್ಯದ ತೋಟದ ಸಾಮಗ್ರಿಗಳನ್ನು ಕಳವು ಮಾಡಲಾಗಿದೆ.

ಬಸವರಾಜ ಬಪ್ಪನ ಅವರ ತೋಟದಲ್ಲಿ ತೋಟದ ನೀರಾವರಿಗೆ ಉಪಯೋಗಿಸುವ 5 ಸಾವಿರ ರೂ.ಮೌಲ್ಯದ 60 ಫೀಟ್ ಬೋರವೆಲ್ ಕೇಬಲ್, 8 ಸಾವಿರ ರೂ.ಮೌಲ್ಯದ ಟ್ರ್ಯಾಕ್ಟರ್ ಬ್ಯಾಟರಿ, 8 ಸಾವಿರ ರೂ.ಮೌಲ್ಯದ ಸೋಲಾರ್ ಬ್ಯಾಟರಿ, 3 ಸಾವಿರ ರೂ. ಮೌಲ್ಯದ ಸ್ಪ್ಯಾನರ್ ಸೆಟ್, 18 ಸಾವಿರ ರೂ.ಮೌಲ್ಯದ ಸಲಾಕೆ, ಟಿಕಾವು, ಇತರೆ ಕೃಷಿಗೆ ಉಪಯೋಗಿಸುವ ಸಾಮಗ್ರಿ ಮತ್ತು 15 ಸ್ಪಿಂಕಲರ್ ಟ್ಯಾಪ್, 4 ಸಾವಿರ ರೂ.ಮೌಲ್ಯದ 600 ಫೀಟ್ ಸರ್ವಿಸ್ ವಾಯರ್ ಬಂಡಲ್, 6,500 ರೂ.ಮೌಲ್ಯದ ಕ್ರಿಮಿನಾಶಕ ಔಷಧ ಹೊಡೆಯಲು ಉಪಯೋಗಿಸುವ ಯಂತ್ರದ ಬ್ಯಾಟರಿ ಸೇರಿ 52,500 ರೂ. ಮೌಲ್ಯದ ಸಾಮಗ್ರಿ ಕಳವು ಮಾಡಲಾಗಿದೆ. ಈ ಸಂಬಂಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ದುಗನೂರು ನೀರಿನ ಸಮಸ್ಯೆ ಅರಿತು ಗ್ರಾಮಕ್ಕೆ ಭೇಟಿ ನೀಡಿದ ಅಧಿಕಾರಿಗಳು

• ಉದಯವಾಹಿನಿ ಸೇಡಂ


ತಾಲ್ಲೂಕಿನ ದುಗನೂರು ಗ್ರಾಮದಲ್ಲಿ ನೀರಿನ ಸಮಸ್ಯೆಯಿಂದ ಗ್ರಾಮಸ್ಥರು ನಿನ್ನೆ ಬೆಳಗ್ಗೆ ಕಾಲಿ ಕೊಡ ಹಿಡಿದುಕೊಂಡು ಗ್ರಾಪಂ ಮುಂದೆ ಪ್ರತಿಭಟನೆ ಮಾಡುತ್ತಿರುವ ಸುದ್ದಿಯನ್ನು ಪತ್ರಿಕೆ ಪ್ರಕಟಿಸಿತ್ತು ಇದಕ್ಕೆ ಸ್ಪಂದಿಸಿದ ತಾಲ್ಲೂಕ ಆಡಳಿತದ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಇಓ ಚನ್ನಪ್ಪ ರಾಯಣ್ಣನವರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಶಿವಕುಮಾರ್ ಬುದರೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರುವರು.

## ಗುಡುದೂರು ಹಳ್ಳಕ್ಕೆ ಹರಿಯಿತು ನೀರು

• ಉದಯವಾಹಿನಿ ಬಳ್ಳಾರಿ

ಜಿಲ್ಲೆಯ ಕಂಪ್ಲಿ ವಿಧಾನಸಭಾ ಕ್ಷೇತ್ರದ ಗುಡುದೂರು, ಹಂದಿಹಾಳು, ಡಿ.ಕಗ್ಗಲ್ ಹಾಗೂ ಚಾನಾಳ ಗ್ರಾಮಗಳು ಮತ್ತು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಹೆಚ್.ಹೊಸಳ್ಳಿ, ಹಾಗಲೂರು, ದರೂರು, ಕರೂರು, ಗೋಸಬಾಳ, ಕೊರಿಗನೂರು, ಬೂದುಗುಪ್ಪ ಮತ್ತು ಮೈಲಾಪುರ ಗ್ರಾಮಗಳಲ್ಲಿ ಹರಿಯುವ ಗುಡುದೂರು ಹಳ್ಳಕ್ಕೆ ಇಂದು ಎಲ್ ಎಲ್ ಸಿ ಕಾಲುವೆಯಿಂದ 30 ಕ್ಯೂಸೆಕ್ ನೀರನ್ನು ಬಿಡಲಾಗಿದೆ.

ಈ ಹಳ್ಳಕ್ಕೆ ರೈತರು ಪಂಪ್‌ಸೆಟ್‌ಗಳ ಮುಖಾಂತರ ಭತ್ತ ಬೆಳೆದಿದ್ದರು. ಹಳ್ಳದಲ್ಲಿ ನೀರಿಲ್ಲದೇ ಬೆಳೆಗಳು ಒಣಗುವ ಪರಿಸ್ಥಿತಿಗೆ ಬಂದಿದ್ದವು. ಎಕರೆಗೆ ರೂ.50 ಸಾವಿರಗಳಂತೆ ರೈತರು ಭತ್ತ ಬೆಳೆಯಲು ಖರ್ಚು ಮಾಡಿದ್ದರು. ಈ ಬೆಳೆಗಳನ್ನು ಉಳಿಸಲು ಮತ್ತು ದನಕರುಗಳಿಗೆ ಕುಡಿಯಲು ನೀರಿನ ಅನುಕೂಲತೆಗಾಗಿ ಗುಡುದೂರು ಹಳ್ಳಕ್ಕೆ ದಿನಕ್ಕೆ 100 ಕ್ಯೂಸೆಕ್ಸ್ ನಂತೆ 03 ದಿನಗಳವರೆಗೆ ನೀರು ಹರಿಸಿದರೆ ರೈತರ ಬೆಳೆಗಳು ಉಳಿಯುತ್ತವೆ ಮತ್ತು ದನಕರುಗಳಿಗೆ, ಜನರಿಗೆ ಕುಡಿಯಲು ನೀರಿನ ಅನುಕೂಲತೆಯಾಗುತ್ತದೆಂದು ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ತುಂಗಭದ್ರ ರೈತ ಸಂಘದ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ ಮತ್ತವರ ಸದಸ್ಯರು ಮನವಿ ಮಾಡಿದ್ದರ ಹಿನ್ನಲೆಯಲ್ಲಿ ಹಳ್ಳಕ್ಕೆ ನೀರು ಬಿಡಲಾಗಿದೆ.



ಉದಯವಾಹಿನಿ ಚಿತ್ರ


## ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶರಣಬಸಪ್ಪ ದರ್ಶನಾಪೂರ ಜಿಲ್ಲಾ ಪ್ರವಾಸ

• ಉದಯವಾಹಿನಿ ಯಾದಗಿರಿ

**ಮಾ. 31 ಹಾಗೂ ಏ.1 ಜಿಲ್ಲಾ ಪ್ರವಾಸ**

ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪೂರ ಅವರು ಮಾರ್ಚ್ 31 ಹಾಗೂ ಏಪ್ರಿಲ್ 1 ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ ಪ್ರವಾಸವು ಕೆಳಗಿನಂತಿದೆ ಎಂದು ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೋಳ ಅವರು ತಿಳಿಸಿದ್ದಾರೆ.

2025ರ ಮಾರ್ಚ್ 31ರ ಸೋಮವಾರ ರಂದು ಬೆಳಿಗ್ಗೆ 9 ಗಂಟೆ ಕಲಬುರಗಿದಿಂದ ನಿರ್ಗಮಿಸಿ ಬೆಳಿಗ್ಗೆ 10 ಗಂಟೆಗೆ ಶಹಾಪೂರ ಆಗಮಿಸಿ, ಶಹಾಪೂರ ನಗರದಲ್ಲಿ ಸಾರ್ವಜನಿಕ



ಕುಂದುಕೊರತೆಗಳ ವಿಚಾರಣೆ ಆಲಿಸುವರು ಹಾಗೂ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ನಂತರ ಸಂಜೆ 5 ಗಂಟೆಗೆ ಕಲಬುರಗಿ ಪ್ರಯಾಣ ಬೆಳೆಸುವರು.

2025ರ ಏಪ್ರಿಲ್ 1 ಮಂಗಳವಾರ ಬೆಳಿಗ್ಗೆ 9 ಗಂಟೆ ಕಲಬುರಗಿ ದಿಂದ ನಿರ್ಗಮಿಸಿ ಬೆಳಿಗ್ಗೆ 10 ಗಂಟೆ ಶಹಾಪೂರ ಆಗಮಿಸಿ, ಸಾರ್ವಜನಿಕ ಕುಂದುಕೊರತೆ ವಿಚಾರಣೆ ಹಾಗೂ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ನಂತರ ಸಂಜೆ 5 ಗಂಟೆಗೆ ಕಲಬುರಗಿ ಪ್ರಯಾಣ ಬೆಳೆಸುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 5 ಜೋಳದ ಬೀಜದಿಂದಲೇ 10 ಎಕರೆ ಬಿತ್ತನೆಗೆ ಜೋಳ ಅಭಿವೃದ್ಧಿ, ಅಜ್ಜಿ ಕಾಯ್ದಿಟ್ಟ ಗಂಟಿನಲ್ಲಿ ಸಿಕ್ಕ ಜೋಳದ ಬೀಜ

# ಹೈದರಾಬಾದ್‌ನ ಮುತ್ತಿನಂತೆ ಜೋಳ ಬೆಳೆದ ರೈತ

**ಉದಯವಾಹಿನಿ ವಿಶೇಷ**

• ಇಲ್ಯಾಸ್ ಪಟೇಲ್. ಬಳಗಾನೂರ

• ಉದಯವಾಹಿನಿ ಯಾದಗಿರಿ

ಇದು ಹೈಬ್ರಿಡ್ ಯುಗ. ದೇಶಿ ತಳಿಗಳು ಕಣ್ಮರೆ ಆಗುತ್ತಿರುವ ಕಾಲಘಟ್ಟ. ರಾಸಾಯನಿಕ ಪದ್ಧತಿಯಿಂದ ಬೆಳೆದ ವಿಷಾಹಾರವನ್ನೇ ಎಲ್ಲರೂ ಸೇವಿಸಬೇಕಿದೆ.

ಪರಿಣಾಮ ಅನೇಕ ರೋಗ - ರುಜಿನಗಳಿಗೆ ಮನುಷ್ಯ ತುತ್ತಾಗುತ್ತಿದ್ದಾನೆ. ಇಂಥ ವಿಷಮ ಸ್ಥಿತಿಯಲ್ಲಿ ಇಲ್ಲೊಬ್ಬ ರೈತ ಜೋಳವನ್ನು ಬೆಳೆದಿದ್ದಾನೆ.

ದೂರದಿಂದ ನೋಡಿದರೆ ಹೈದರಾಬಾದ್‌ನ ಮುತ್ತಿನಂತೆ ಕಾಣುತ್ತದೆ. ಹೀಗಾಗಿ ಜಮೀನಿನಲ್ಲಿ ಮುತ್ತುಗಳನ್ನು ಬೆಳೆದಿದ್ದಾರೆ ಅಂತ ಅನೇಕರು ಅಚ್ಚರಿ ಪಟ್ಟಿದ್ದರು. ಹೊಲದಲ್ಲಿ ಈ ಭಾರಿ ಅಚ್ಚರಿ ಎನ್ನುವಂತೆ ಜೋಳ ಬೆಳೆದಿದೆ. ಒಂದೆ ದಂಟಿನಲ್ಲಿ ಎರಡು ಮೂರು ಫಸಲು ಒಡೆದು, ಐದಾರು ತನೆಗಳಾಗಿವೆ. ಈ ಸೋಜಿಗ ನೋಡಲು ಅನೇಕರು ಜಮೀನಿಗೆ ಬರುತ್ತಿದ್ದಾರೆ.

ಹೌದು, ಶಾಹಪುರ ತಾಲ್ಲೂಕಿನ ಮುಡಬೂಳ ಗ್ರಾಮದ ರೈತ ಸಿದ್ರಾಮಪ್ಪ ಅಂಗಡಿ ಕೇವಲ 5 ಜೋಳದ ಬೀಜಗಳನ್ನು ಕಾಯ್ದಿಟ್ಟು ಬೀಜ ಅಭಿವೃದ್ಧಿಪಡಿಸಿ ಇಂದು 10ಎಕರೆಯಾಗುವಷ್ಟು ಅತ್ಯಂತ ರುಚಿಯಾಗಿರುವ ವಿಶಿಷ್ಟ ಜೋಳ ಬೆಳೆಯುವ ಮೂಲಕ ಇತರೆ ರೈತರಿಗೆ ಮಾದರಿಯಾಗಿದ್ದಾನೆ.

ಉತ್ತರ ಕರ್ನಾಟಕ ಭಾಗದ ಜನರ ಪ್ರಮುಖ ಆಹಾರದ ಬೆಳೆ ಜೋಳ. ಹೀಗಾಗಿ ಈ ಭಾಗದಲ್ಲಿ ಹೆಚ್ಚಿನ ಜನರು ಪ್ರತಿ ವರ್ಷ ಹಿಂಗಾರು ಬೆಳೆಯಾಗಿ ಜೋಳವನ್ನು ಬೆಳೆಯುತ್ತಾರೆ.

> **ಹಳೇ ಕಾಲದ ಅಜ್ಜಿಯ ಗಂಟಿನಲ್ಲಿದ್ದ ಜೋಳದ ಬೀಜ ನನ್ನ ಅದೃಷ್ಟ ಖುಲಾಯಿಸುತ್ತಿದೆ. ಸದ್ಯ ರಾಸಾಯನಿಕ ಬಳಸದೇ ಹಸಿರೆಲೆ ಗೊಬ್ಬರ ಬಳಸಿ 10 ಎಕರೆಯಲ್ಲಿ ಜೋಳ ಬಿತ್ತನೆ ಮಾಡಿದ್ದೇನೆ. ಸದ್ಯದಲ್ಲಿಯೇ ರಾಶಿ ಮಾಡಿ ಮನೆಗಷ್ಟು ಜೋಳ ಇಟ್ಟುಕೊಂಡು ಸಾವಯವ ಕೃಷಿಯಲ್ಲಿ ಆಸಕ್ತಿ ಹೊಂದಿರುವ ರೈತರಿಗೆ ಬಿತ್ತನೆ ಮಾಡಿ ಜೋಳ ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.**
>
> -ಸಿದ್ರಾಮಪ್ಪ ಅಂಗಡಿ, ರೈತ, ಮುಡಬೂಳ.

ಅಜ್ಜಿ ಕಾಯ್ದಿಟ್ಟ ಹಳೇ ಗಂಟು ಬಿಚ್ಚಿ ನೋಡಿದ ರೈತನಿಗೆ ನಿಧಿ ಸಿಕ್ಕಿತೆನ್ನುವಷ್ಟು ಖುಷಿಯಾಗಿದ್ದ. ಆದರೆ, ಸಿಕ್ಕಿದ್ದು ಕೇವಲ ಚಿಕ್ಕ ಜೋಳದ ಗಂಟು.

ಆದರೆ, ಅದನ್ನೇ ನಿಧಿಯನ್ನಾಗಿಸಿಕೊಂಡು ಯಶಸ್ವಿಯಾಗಿದ್ದಾನೆ. ಹಬ್ಬಕ್ಕಾಗಿ ತಮ್ಮ ಮನೆಯ ಎಲ್ಲಾ ವಿಭಾಗ ಶುಚಿಯಾಗಿಸುತ್ತಿರುವಾಗ ಮನೆಯ ಹಳೇ ಕಾಲದ ಖೇಲ್‌ನಲ್ಲಿ ಒಂದು ಚಿಕ್ಕ ಗಂಟು ದೊರಕಿತ್ತು. ಅದನ್ನು ಬಿಚ್ಚಿ ನೋಡಿದ ರೈತ ಅಂಗಡಿಗೆ ಒಂದಿಷ್ಟು ನಿರಾಶೆಯಾಯಿತು.

ಕಾರಣ ಅದರಲ್ಲಿ ಸಿಕ್ಕಿದ್ದು ಕೇವಲ ಒಂದು ಹಿಡಿ ಜೋಳದ ಗಂಟು. ಆದರೆ, ಹಿಡಿ ಜೋಳದಲ್ಲಿಯೇ ನಿಧಿ ಇದೆ ಎಂದು ಅರಿತು ಬಹುತೇಕ ಹಿಟ್ಟು ಹಿಟ್ಟಾಗಿದ್ದ ಜೋಳ ಹಸನಾಗಿಸಿಕೊಂಡಾಗ ಆತನಿಗೆ ಸಿಕ್ಕಿದ್ದ ಕೇವಲ ನಾಲ್ಕೈದು ಉತ್ತಮ ಜೋಳದ ಬೀಜ ಎತ್ತಿಟ್ಟಕೊಂಡ. ಜೋಳ ಬಿತ್ತನೆ ಸಮಯದಲ್ಲಿ




ಉದಯವಾಹಿನಿ ಚಿತ್ರ

> **ನಾಡಿನ ಹಲವಾರು ರೈತರ ಯಶೋಗಾಥೆಯನ್ನು ನನ್ನ ಚಾನಲ್ ಮೂಲಕ ಪರಿಚಯಿಸಿ ಇನ್ನಷ್ಟು ರೈತರಿಗೆ ಮಾಹಿತಿ ಒದಗಿಸುವ ಕೆಲಸ ಮಾಡುತ್ತಿದ್ದ ನನಗೆ ನನ್ನ ಗ್ರಾಮದಲ್ಲಿಯೇ ಇಂತಹ ಅದ್ಭುತ ರೈತನಿರುವುದು ತಿಳಿದು ನನ್ನ ಚಾನಲ್ ಮೂಲಕ ನಾಡಿನ ರೈತರಿಗೆ ಮಾಹಿತಿ ಒದಗಿಸಿದ್ದೇನೆ. ಸದ್ಯ ಹಲವಾರು ರೈತರಿಗೆ ನಮ್ಮೂರಿನ ರೈತ ಅಂಗಡಿ ಮಾದರಿಯಾಗಿದ್ದಾನೆ.**
>
> -ರಂಗು ಕಸ್ತೂರಿ, ಕೃಷಿ ಯುಟ್ಯೂಬ್ ಚಾನಲ್ ಮುಡಬೂಳ.

ಆ 4-5 ಜೋಳದ ಬೀಜಗಳನ್ನು ತನ್ನ ಹೊಲದ ಬದುವಿನಲ್ಲಿ ಬಿತ್ತನೆ ಮಾಡಿದ. ಹಳೇ ಕಾಲದ ಜೋಳವಾಗಿದ್ದರಿಂದ ದಿನದಿಂದ ದಿನಕ್ಕೆ ಜೋಳ ಅತ್ಯಂತ ಹುಲುಸಾಗಿ ಬೆಳೆಯುವುದಷ್ಟೇ ಅಲ್ಲದೇ ಅತ್ಯಂತ ವಿಶಿಷ್ಟವಾಗಿ ಬೆಳೆದು ನಿಂತು ಗುಂಡು ತೆನೆಯಾಗಿ ಕಂಗೊಳಿಸಲಾರಂಭಿಸಿತು. ಜೋಪಾನವಾಗಿ ರಾಶಿ ಮಾಡಿಕೊಂಡಾಗ ಸುಮಾರು ಒಂದು ಎಕರೆಗೆ ಆಗುವಷ್ಟು ಬೀಜಗಳು ದೊರೆತವು. ಆ ಬೀಜಗಳಿಗೆ

**ಜೋಳ ತಿಂದವ ತೋಳದಂತೆ**

**ಇಂದು ಬಹುತೇಕ ರೈತರು ರಾಸಾಯನಿಕ ಕೃಷಿಯನ್ನೆ ನೆಚ್ಚಿಕೊಂಡಿದ್ದಾರೆ. ಇಂಥ ಆಹಾರ ಸೇವನೆಯಿಂದ ನೂರೆಂಟು ರೋಗಗಳು ಉತ್ಪತ್ತಿಯಾಗುತ್ತಿವೆ. ಅಲ್ಲದೇ ಹೆಚ್ಚಿನ ಖರ್ಚಾಗಿ ಸಾಲದ ಕೂಪದಲ್ಲಿ ರೈತ ಮುಳುಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಪ್ರತಿಯೊಂದು ದೇಶಿ ಜೋಳಗಳಲ್ಲೂ ತನ್ನದೇಯಾದ ಔಷಧ ಗುಣಗಳಿವೆ. ಕೆಂಪು ಜೋಳದಿಂದ ಕಡಬು, ದೋಸೆ, ಸಂಗಟಿ ಮಾಡಬಹುದು. ಶುಗರ್ ಇದ್ದವರಿಗೆ ಇದು ರಾಮಬಾಣ. ಇನ್ನು ಸಕ್ಕರಿಮುಕ್ಕಿ ಜೋಳಕ್ಕೆ ಶೀತ ತಡಿಯೋ ಶಕ್ತಿ ಇದೆ. ಕೋಡಮುರಕ ಜೋಳ ಬಾರ್ಸಿ ಜೋಳ ರೊಟ್ಟಿಗೆ ಹೇಳಿ ಮಾಡಿಸಿದ ತಳಿ. ಮಾಲದಂಡಿ ಜೋಳ ಕಪ್ಪುಮಣ್ಣಿಗೆ ಉತ್ತಮ ಫಸಲು ಕೊಡುತ್ತದೆ. ಇದರ ಮೇವು ದನಗಳಿಗೆ ಬಹಳ ಇಷ್ಟ. ಗಟ್ಟಿದನಿ ಜೋಳ ಬರನಿರೋಧಕ ಗುಣ ಹೊಂದಿವೆ. ಈ ಜೋಳ ತಿನ್ನುವುದರಿಂದ ನಮಗೆ ಯಾವುದೇ ರೋಗ ರುಜಿನ ಬರುವುದಿಲ್ಲ. ಜೋಳ ತಿಂದವ ತೋಳದಂತೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಆದ್ದರಿಂದ ಎಲ್ಲಾ ರೈತರು ಸಾವಯವ ಕೃಷಿ ಕಡೆ ಮುಖ ಮಾಡಿ, ದೇಶಿ ತಳಿಗಳನ್ನು ಉಳಿಸಿ, ಬೆಳೆಸಬೇಕು. ಇದರಿಂದ ರಾಸಾಯನಿಕ ಮುಕ್ತ, ಸದೃಢ ಆರೋಗ್ಯಯುಕ್ತ ಸಮಾಜ ನಿರ್ಮಿಸಬಹುದು.**



ಉದಯವಾಹಿನಿ ಚಿತ್ರ

ಬೀಜೋತ್ಪಾದನೆ ಮಾಡಿ ಮುಂಬರುವ ಬಿತ್ತನೆ ಸಮಯದಲ್ಲಿ ಸದ್ಯ 10ಎಕರೆಯಲ್ಲಿ ಬಿತ್ತನೆ ಮಾಡಿದ್ದಾನೆ. ಸದ್ಯ ಜೋಳ ಯಾವ ತಳಿ ಎಂಬುದು ಗೊತ್ತಿಲ್ಲ. ಆದರೆ, ಹುಲುಸಾಗಿ ಬೆಳೆದು ಇದೀಗ ರಾಶಿ ಮಾಡುವ ಹಂತಕ್ಕೆ ತಲುಪಿದೆ.

**ಜೋಳ ಬಿತ್ತನೆಗೆ ಬೀಜ ನೀಡಲು ಸಿದ್ಧ:** ತಾಲ್ಲೂಕಿನ ಬಹುತೇಕ ಭಾಗದ ಗ್ರಾಮಗಳ ರೈತರು ಕಷ್ಟವೋ ನಷ್ಟವೋ ದಶಕಗಳಿಂದ ವಾಣಿಜ್ಯ ಬೆಳೆಗಳಾದ ಭತ್ತ, ಮೆಣಸಿನಕಾಯಿ, ಹತ್ತಿ, ತೊಗರಿಗೆ ಮೊರೆ ಹೋಗಿದ್ದರಿಂದ ಜೋಳ ಬಿತ್ತನೆ ಕಡಿಮೆಯಾಗಿದೆ. ರೈತಾಪಿ ವರ್ಗವೇ ಊಟಕ್ಕಾಗಿ ಅಕ್ಕಪಕ್ಕದ ತಾಲ್ಲೂಕುಗಳಿಂದ ಮಾರಾಟಕ್ಕಾಗಿ ಬಂದ ಜೋಳ ಖರೀದಿಸುವಂತಾಗಿತ್ತು. ಸದ್ಯ ಮುಡಬೂಳ ರೈತ ಸಿದ್ರಾಮಪ್ಪ ಅಂಗಡಿ ಸಾವಯವ ಪದ್ಧತಿಯಲ್ಲಿ ವಿಶಿಷ್ಟ ಜೋಳದ ಬೀಜ ಅಭಿವೃದ್ಧಿ ಪಡಿಸಿ 10 ಎಕರೆಯಲ್ಲಿ ಯಾವುದೇ ರೀತಿಯ ರಾಸಾಯನಿಕ ಬಳಸದೇ ಬೆಳೆದು ತಾಲ್ಲೂಕಿನ ಇನ್ನಷ್ಟು ರೈತರಿಗೆ ಬಿತ್ತನೆ ಮಾಡಲು ಬೀಜ ಒದಗಿಸುವುದಾಗಿ ತಿಳಿಸಿದ್ದಾರೆ.

### ಪರೀಕ್ಷೆಯಲ್ಲಿ ಅಂಕಗಳಿಗಾಗಿ ವಿದ್ಯಾರ್ಥಿಯ ವಿಚಿತ್ರ ಪ್ರಾರ್ಥನೆ


## ದೇವಸ್ಥಾನದ ಕಾಣಿಕೆ ಡಬ್ಬಿಯಲ್ಲಿ ಪತ್ರೆ

• ಉದಯವಾಹಿನಿ ಕುಂದಾಪುರ

ಪರೀಕ್ಷೆಯಲ್ಲಿ ನನಗೆ ಪಾಸ್ ಆಗುವಷ್ಟು ಅಂಕಗಳು ಬೇಕು ಎಂದು ವಿದ್ಯಾರ್ಥಿ ಬೇಡಿಕೆ ಪಟ್ಟಿಯನ್ನು ಬರೆದು ದೇವರ ಕಾಣಿಕೆ ಡಬ್ಬಿಗೆ ಹಾಕಿರುವ ಘಟನೆ ಹಕ್ಲಾಡಿ ಸಮೀಪದ ಹೊಮ್ಮಿದೆ ಎಂಬಲ್ಲಿ ನಡೆದಿದೆ.

ತಾಲ್ಲೂಕಿನ ಪ್ರಸಿದ್ಧ ದೈವಸ್ಥಾನಗಳಲ್ಲಿ ಒಂದಾದ ಹೊಳ್ಮಗೆ ಹೊರ್ ಬೊಬ್ಬರ್ಯ ದೈವಸ್ಥಾನದ ಕಾಣಿಕೆ ಹುಂಡಿಯೊಳಗೆ ಈ ಮನವಿ ಪಟ್ಟಿ ಸಿಕ್ಕಿದ್ದು, ಮನವಿಯ ಫೋಟೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಹೊಳ್ಮಗೆ ಬೊಬ್ಬರ್ಯ ದೈವಸ್ಥಾನಕ್ಕೆ ಕುಂದಾಪುರ, ಬೈಂದೂರು ತಾಲ್ಲೂಕಿನಲ್ಲಿ ಮಾತ್ರವಲ್ಲದೇ ಮುಂಬೈ, ಬೆಂಗಳೂರು ಮುಂತಾದ ಕಡೆಗಳಲ್ಲಿಯೂ ಈ ದೇವರನ್ನು ನಂಬಿರುವ ದೊಡ್ಡ ಭಕ್ತ ವರ್ಗ ಇದೆ. ಮಾ.14 ರಂದು ಈ ದೈವಸ್ಥಾನದ ವಾರ್ಷಿಕ ಹಾಲು ಹಬ್ಬ ಹಾಗೂ ಕೆಂಡಸೇವೆ ನಡೆದಿದ್ದು, ಇದಾದ ಬಳಿಕ ದೈವಸ್ಥಾನದ ಆಡಳಿತ ಮಂಡಳಿ, ಊರವರು ಹಾಗೂ ಭಕ್ತರ ಉಪಸ್ಥಿತಿಯಲ್ಲಿ ದೇವರ ಕಾಣಿಕೆ ಡಬ್ಬಿ ತೆರೆದಿದ್ದಾರೆ. ಈ ವೇಳೆ ಭಕ್ತರು ಹಾಕಿರುವ ಕಾಣಿಕೆ ಹಣದ ಜೊತೆ ಈ ವಿಚಿತ್ರ ಬೇಡಿಕೆ ಇರುವ ಪಟ್ಟಿ ಸಿಕ್ಕಿದೆ.

ಬೇಡಿಕೆ ಪಟ್ಟಿ ಬರೆದಿರುವವರು ಬೇಡಿಕೆ ಈಡೇರಿಸಲು ಕೋರಿಕೊಂಡಿದ್ದಾರೆ. ಪಾಸ್ ಮಾಡುವಂತೆ ಮನವಿ ಮಾಡಿರುವ ವಿದ್ಯಾರ್ಥಿ ಗಣಿತದಲ್ಲಿ 36-39, ಇಂಗ್ಲಿಷ್‌ನಲ್ಲಿ 37-39, ಕನ್ನಡದಲ್ಲಿ 39-40, ವಿಜ್ಞಾನದಲ್ಲಿ 38-39, ಹಿಂದಿಯಲ್ಲಿ 39-40 ಹಾಗೂ ಸಮಾಜದಲ್ಲಿ 37-38 ಅಂಕಗಳು ಸಿಗಲಿ ಎಂದು ಬರೆದಿದ್ದು ಪತ್ರದ ಮೇಲ್ಭಾಗದಲ್ಲಿ ಪರೀಕ್ಷೆಯಲ್ಲಿ ನನಗೆ ಇಷ್ಟು ಮಾರ್ಕ್ ಇರಬೇಕು ದೇವರೇ ಹೊರ್ ಬೊಬ್ಬರ್ಯ ಎಂದು ಹಾಗೂ ಕೆಳ ಭಾಗದಲ್ಲಿ ಮತ್ತೆ ದೇವರೇ ಇದಕ್ಕಿಂತಲೂ ನನಗೆ ಕಡಿಮೆ ಬೇಡ ದೇವರೆ ಹೋರ್ ಬೊಬ್ಬರ್ಯ ಎಂದು ಬರೆದು ಕಾಣಿಕೆ ಡಬ್ಬಿಗೆ ಹಾಕಿದ್ದಾರೆ.



ಪರೀಕ್ಷೆಯಲ್ಲಿ ನನಗೆ ಇಷ್ಟು
ಮಾರ್ಕ್ ಇರಬೇಕು
ದೇವರೆ
ಹೋರ್ ಬೊಬ್ಬರ್ಯ
Maths = 39.38.37.36
English = 39.38.37
Kannada = 40,39
Science = 39,38
Hindi = 40,39
Social = 38.37
ಮತ್ತೆ ದೇವರ ಇದರ ಕಿಂತಲು
ನನಗೆ ಕಡಿಮೆ
ಬೇಡ ದೇವರ ಹೋರ ಬೊಬ್ಬರ್ಯ

## ಅಕ್ರಮ ಗೋ ಸಾಗಾಟ ಪತ್ತೆ: ಪ್ರಕರಣ ದಾಖಲು

• ಉದಯವಾಹಿನಿ ಮಂಗಳೂರು

ಅಕ್ರಮ ಗೋ ಸಾಗಾಟಕ್ಕೆ ಬಜರಂಗದಳದ ಕಾರ್ಯಕರ್ತರು ಮತ್ತೆ ತಡೆಯೊಡ್ಡಿರುವ ಘಟನೆ ಮಂಗಳೂರಿನ ಹೊರವಲಯದ ಬಜಪೆ ಸುರಲ್ಪಾಡಿಯಲ್ಲಿ ನಡೆದಿದೆ.

ಅಕ್ರಮವಾಗಿ ಗೋವುಗಳನ್ನು ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ವಾಹನವನ್ನು ತಡೆದು ಪರಿಶೀಲನೆ ನಡೆಸಿದ ವೇಳೆ ಗೂಡ್ಸ್ ವಾಹನದಲ್ಲಿ ಕಾಲುಗಳನ್ನು ಕಟ್ಟಿ ಅಮಾನುಷವಾಗಿ 25 ಗೋವುಗಳನ್ನು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಘಟನೆ ವೇಳೆ ಚಾಲಕ ಸ್ಥಳದಿಂದ ಪರಾರಿಯಾಗಿದ್ದು, ಕೂಡಲೇ ವಾಹನದಲ್ಲಿದ್ದ ಗೋವುಗಳನ್ನು ರಕ್ಷಣೆ ಮಾಡಿದ ಕಾರ್ಯಕರ್ತರು ವಾಹನವನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಘಟನೆ ಸಂಬಂಧ ಬಜಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಉದಯವಾಹಿನಿ ಚಿತ್ರ

## ಬಸ್‌ನಲ್ಲಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಆರೋಪ: ಪ್ರಕರಣ ದಾಖಲು

• ಉದಯವಾಹಿನಿ ಬಂಟ್ವಾಳ

ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಕಾಲೇಜು ವಿದ್ಯಾರ್ಥಿನಿಯೋರ್ವಳಿಗೆ ವ್ಯಕ್ತಿಯೋರ್ವ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪುತ್ತೂರಿನಿಂದ ಮಂಗಳೂರಿಗೆ ಹೋಗುತ್ತಿದ್ದ ಸರ್ಕಾರಿ ಬಸ್ಸಿನಲ್ಲಿ ಯುವತಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿಯನ್ನು ಕಲ್ಲಡ್ಕದಲ್ಲಿ ಸ್ಥಳೀಯರು ಹಿಡಿದು ನಗರ ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದಾರೆ.

ಆರೋಪಿಯನ್ನು ನಾವೂರ ಗ್ರಾಮ ಪಂಚಾಯಿತಿ ಸದಸ್ಯ ಮಹಮ್ಮದ್ ಯಾನೆ ಮೋನು ಎಂದು ಗುರುತಿಸಲಾಗಿದೆ.

ರಿಕ್ಷಾ ಚಾಲಕನಾಗಿರುವ ಆತ ಪುತ್ತೂರಿನಿಂದ ಬಿ ಸಿ ರೋಡುವರೆಗೆ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ. ಈ ವೇಳೆ ಸೀಟಿನಲ್ಲಿ ಕುಳಿತಿದ್ದ ವಿದ್ಯಾರ್ಥಿನಿಯ ಮೈಮೇಲೆ ಬಿದ್ದು ಉದ್ದೇಶಪೂರ್ವಕವಾಗಿ ಕೀಟಲೆ ನೀಡಿದ್ದ. ಈ ಬಗ್ಗೆ ಬಸ್ ನಿರ್ವಾಹಕನಿಗೆ ವಿದ್ಯಾರ್ಥಿನಿ ದೂರು ನೀಡಿದ್ದಳೆ. ನಿರ್ವಾಹಕ ಆತನಿಗೆ ಸರಿಯಾಗಿ ಪ್ರಯಾಣಿಸುವಂತೆ ತಿಳಿಸಿದ್ದ.





ಉದಯವಾಹಿನಿ ಚಿತ್ರ

ಆರೋಪಿಯು ಮಹಿಳೆ ಜೊತೆ ಅನುಚಿತವಾಗಿ ವರ್ತಿಸಿದ್ದು ಗೊತ್ತಾಗಿ ಇನ್ನೇನು ಸಿಕ್ಕಿಬೀಳುವ ಹೆದರಿಕೆಯಿಂದ ಈತ ಕಲ್ಲಡ್ಕದಲ್ಲಿ ಬಸ್‌ನಿಂದ ಇಳಿದು ಪರಾರಿಯಾಗಲು ಯತ್ನಿಸಿದ್ದ, ಈ ವೇಳೆ ಬಸ್‌ನಲ್ಲಿದ್ದ ಪ್ರಯಾಣಿಕರು ಈತನನ್ನು ಹಿಡಿಯುವಂತೆ ಮನವಿ ಮಾಡಿದ್ದಾರೆ.

ಸ್ಥಳೀಯರು ಈತನನ್ನು ಹಿಡಿದು ಬಂಟ್ವಾಳ ನಗರ ಪೊಲೀಸ್ ಠಾಣೆಗೆ ಒಪ್ಪಿಸಿದ್ದು, ಈತನ ಬಗ್ಗೆ ಪ್ರಕರಣ ದಾಖಲಾಗಿದೆ.

## ಉನ್ನತ ಶಿಕ್ಷಣಕ್ಕೆ ತಂತ್ರಜ್ಞಾನ ಅವಶ್ಯಕ : ಡಾ. ಪ್ರವೀಣಕುಮಾರ ಕುಂಬಾರ



ಉದಯವಾಹಿನಿ ಚಿತ್ರ

• ಉದಯವಾಹಿನಿ ಕಲಬುರಗಿ

ಉನ್ನತ ಶಿಕ್ಷಣದಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡಷ್ಟು ಸಂಶೋಧನಾರ್ಥಿಗಳಿಗೆ ಶೈಕ್ಷಣಿಕ ಸಂಶೋಧನೆಯ ಮಾಡಲು ಸುಲಭವಾಗುತ್ತದೆ ಎಂದು ಗುಲ್ಬರ್ಗ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ. ಪ್ರವೀಣ್ ಕುಮಾರ್ ಕುಂಬಾರ ಹೇಳಿದರು. ಗುಲ್ಬರ್ಗ ವಿವಿಯ ಗ್ರಂಥಾಲಯದಲ್ಲಿ ಹಮ್ಮಿಕೊಂಡಿದ್ದ "ಸಂಶೋಧನಾ ಪದ್ಧತಿ ಮತ್ತು ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ ಎಂಬ 5 ದಿನಗಳ ಕಾಲ ನಡೆದಿರುವ ಸಂಶೋಧನಾ ಸಪ್ತಾಹ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

> **80 ದಶಕದಲ್ಲಿ ಪಿಎಚ್. ಡಿ ಮಾಡೋದು ಬಹಳ ಕಷ್ಟದ ಕೆಲಸ ಆಗಿತ್ತು. ಯಾಕೆಂದರೆ ಅಂದಿನ ದಿನಗಳಲ್ಲಿ ಮಾರ್ಗದರ್ಶಕರ ಕೊರತೆ ಬಹಳಷ್ಟು ಇತ್ತು. ಆದರೆ ಇಂದು ವಿಶ್ವವಿದ್ಯಾಲಯದಲ್ಲಿ ಆ ಕೊರತೆ ಹೋಗಿದೆ ಸಂಶೋಧನಾ ಮಾಡುವುದಕ್ಕೆ ಸುಲಭವಾಗಿ ಎಲ್ಲ ಸೌಲಭ್ಯಗಳನ್ನು ಸಿಗುತ್ತಿದೆ**
>
> -ಡಾ. ಖೇಮಣ್ಣ ಅಲ್ದಿ

ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ತಂತ್ರಜ್ಞಾನದ ಬಗ್ಗೆ ತಿಳಿದುಕೊಳ್ಳುತ್ತಾರೆ ಅಷ್ಟೇ ಬೇಗ ಅವರು ಜ್ಞಾನವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕಲಬುರ್ಗಿಯು ಹಿಂದುಳಿದ ಭಾಗವೆಂದು ಜನ ಅಂತಾರೆ ಆದರೆ ನಮ್ಮ ವಿದ್ಯಾರ್ಥಿಗಳು ಮುಂದುವರಿದು ಸಾಧನೆ ಮಾಡಿ ವಿಶ್ವವಿದ್ಯಾಲಯದ ಕೀರ್ತಿ ತರಬೇಕು. ಐದು ದಿನಗಳ ಕಾಲ ನಾವು ಮಾಡಿರುವ ಕಾರ್ಯಾಗಾರದ ಉದ್ದೇಶ ನಮ್ಮ ವಿವಿ ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎನ್ನುವ ಕಾರಣಕ್ಕೆ ಎಂದು ಅವರು ಹೇಳಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದಿದೆ ಕಲಿಕೆಗೆ ಬಹಳ ಅನುಕೂಲ ಇದೆ ಎಂದು ಹೇಳಿದರು.

## ಏ.1ರಿಂದ ನರೇಗಾ ಕೂಲಿ 349 ರಿಂದ 370ಕ್ಕೆ ಹೆಚ್ಚಳ

• ಉದಯವಾಹಿನಿ ಕಮಲಾಪುರ



ತಾಲೂಕಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಯೋಜನೆಯಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಏಪ್ರಿಲ 1ರಿಂದ ಕೂಲಿ ಮೊತ್ತ ವನ್ನು 349 ರಿಂದ 370ಕ್ಕೆ ಹೆಚ್ಚಳ ಮಾಡಲಾಗಿದೆ. ಹಾಗೂ ನರೇಗಾ ಯೋಜನೆ ಅಡಿ ಪ್ರತಿದಿನ ಕೆಲಸಕ್ಕೆ ಗಂಡು ಹೆಣ್ಣಿಗೆ ಸಮಾನ ಕೂಲಿ ವೇತನ 370ಕ್ಕೆ ಹೆಚ್ಚಳ ಮಾಡಲಾಗಿದೆ ಒಂದು ಆರ್ಥಿಕ ವರ್ಷದಲ್ಲಿ ನೂರು ದಿನ ಕೆಲಸ ಮಾಡಿ ರೂಪಾಯಿ 37.000 ರೂಪಾಯಿ ತಮ್ಮ ಖಾತೆಗೆ ನೇರವಾಗಿ ಜಮಾ ಮಾಡಿಕೊಳ್ಳಬಹುದು. ಎಂದು ಕಮಲಾಪುರ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ನೀಲಗಂಗಾ ಅವರು ಹೇಳಿದರು. ಕಮಲಾಪುರ ತಾಲ್ಲೂಕಿನ ಉದ್ಯೋಗ ಖಾತ್ರಿಯ ಕೂಲಿಕಾರರು ನಗರದತ್ತ ಕೆಲಸಕ್ಕೆ ಅರಸಿ ಹೋಗದೆ ನಿಮ್ಮೂರಲ್ಲಿ ಕೆಲಸ ಮಾಡಿ ಇದರ ಲಾಭ ಪಡೆಯಿರಿ ಎಂದು ಕಮಲಾಪುರ ತಾಲ್ಲೂಕಿನ ಕಾರ್ಯ ನಿರ್ವಾಹಕ ಅಧಿಕಾರಿ ನೀಲಗಂಗಾ ಅವರು ಹೇಳಿದರು.

### ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ನಗರದಲ್ಲಿ ತಮ್ಮ ಶಕ್ತಿ ಪ್ರದರ್ಶನದ ಮೂಲಕ ಎಚ್ಚರಿಕೆಯ ಸಂದೇಶ

# ಬಸನಗೌಡ ಪಾಟೀಲ ಯತ್ನಾಳ ಉಚ್ಚಾಟನೆ ಖಂಡಿಸಿ ಬೃಹತ್ ಪ್ರತಿಭಟನೆ

• ಉದಯವಾಹಿನಿ ವಿಜಯಪುರ

ಭ್ರಷ್ಟಾಚಾರ, ಕುಟುಂಬ ರಾಜಕಾರಣ ವಿರೋಧಿಸಿದಕ್ಕೆ ಪ್ರಖರ ಹಿಂದುತ್ವವಾದಿ ನಾಯಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಿದ ಅನ್ಯಾಯಕ್ಕೆ ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ನಗರದಲ್ಲಿ ತಮ್ಮ ಶಕ್ತಿ ಪ್ರದರ್ಶನದ ಮೂಲಕ ಎಚ್ಚರಿಕೆಯ ಸಂದೇಶ ರವಾನಿಸಿದರು.

ನಗರದ ಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ಜಮಾಯಿಸಿದ ಸಹಸ್ರಾರು ಸಂಖ್ಯೆಯ ಹಿಂದೂ ಬಾಂಧವರು ಸಭೆ ನಡೆಸಿ, ನಂತರ ಯಡಿಯೂರಪ್ಪ ಮತ್ತು ವಿಜಯೇಂದ್ರನ ಹೆಣದ ಪ್ರತಿಕೃತಿ ಹೊತ್ತಿಕೊಂಡು ಮೆರವಣಿಗೆ ಮೂಲಕ ಗಾಂಧಿ ಚೌಕ್ ಗೆ ತೆರಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ ಬಳಿಕ, ಅಪ್ಪ ಮಕ್ಕಳ ಪ್ರತಿಕೃತ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯುದ್ದಕ್ಕೂ ಅಪ್ಪ ಕಳ್ಳ, ಮಗ ಸುಳ್ಳ, ಯಡಿಯೂರಪ್ಪ, ವಿಜಯೇಂದ್ರನಿಗೆ ಧಿಕ್ಕಾರ ಘೋಷಣೆಗಳು ಮೊಳಗಿದವು. ಪ್ರತಿಭಟನೆಯಲ್ಲಿ ಎಲ್ಲಿ ನೋಡಿದರಲ್ಲಿ ಕೇಸರಿಮಯವಾಗಿತ್ತು. ಭಾಗವಹಿಸಿದ್ದ ಪ್ರತಿಯೊಬ್ಬರ ತಲೆಗೆ ಕೇಸರಿ ಟೊಪ್ಪಿಗೆ, ಕೊರಳಿಗೆ ಕೇಸರಿ ಶಾಲು ಹಾಕಿರುವುದು ಗಮನ ಸೆಳೆಯಿತು.

**ಉಚ್ಚಾಟಿಸಿದ್ದು ದುರದೃಷ್ಟಕರ**

**ಬಿಜೆಪಿ ನಮ್ಮ ನಾಯಕರನ್ನು ಉಚ್ಚಾಟಿಸಿದ್ದು ದುರದೃಷ್ಟಕರ. ಅವರ ಶಕ್ತಿ ಏನೆಂಬುದನ್ನು ಹೈಕಮಾಂಡ್ ಮನಗಾಣಬೇಕು. ಅದನ್ನು ನಾವೆಲ್ಲರೂ ತೋರಿಸಬೇಕು. ಹಿಂದೂ ಸರ್ಕಾರ ತರುವ ಆಶಯವಿದೆ. ಯಾರೋ ಒಂದು ಕುಟುಂಬದ ಸ್ವಾರ್ಥಕ್ಕಾಗಿ ಪಕ್ಷ ಬಲಿ ಕೊಡುವುದು ಒಳ್ಳೆಯದಲ್ಲ. ಹಿಂದುತ್ವ ನಾಯಕರನ್ನು ಸಹ ಮೂಲೆಗುಂಪು ಮಾಡಲಾಗುತ್ತದೆ. ಹಿಂದೂ ಹುಲಿ ಶಾಸಕರು ಇದಾರಂತ ವಿಜಯಪುರ ಶಾಂತವಾಗಿದೆ. ದೇಶದಲ್ಲೂ ಇದೇ ರೀತಿ ಶಾಂತ ನಾಡಬೇಕಾದರೆ ಬಸನಗೌಡರು ಸಿಎಂ ಆಗಬೇಕು. ಹೈಕಮಾಂಡ್ ತಮ್ಮ ನಿರ್ಧಾರ ಹಿಂಪಡೆಯಬೇಕೆಂದು ಆಗ್ರಹಿಸಿದರು.**



ಉದಯವಾಹಿನಿ ಚಿತ್ರ

ನಂತರ ಮಾತನಾಡಿದ ಸ್ವಾಮಿ ವಿವೇಕಾನಂದ ಸೇನೆ ಅಧ್ಯಕ್ಷ ರಾಘವ್ ಅಣ್ಣಿಗೇರಿ, ಬಸನಗೌಡರ ಆಸ್ತಿಯೇ ಹಿಂದುತ್ವ. ಅವರ ಶಕ್ತಿಯೇ ಸಮಸ್ತ ಹಿಂದೂಗಳು. ಪಕ್ಷ ಏನಾದರಾಗಲಿ ಕುಟುಂಬದ ಹಿತವೇ ಮುಖ್ಯ ಎನ್ನುವ ಅಪ್ಪ ಮಕ್ಕಳ ಕುತಂತ್ರ, ಕುಮ್ಮಕ್ಕಿನಿಂದ ಕೇವಲ ಬಸನಗೌಡ ಪಾಟೀಲ ಯತ್ನಾಳರನ್ನು ಹೊರಗೆ ಹಾಕಿಲ್ಲ. ಬದಲಾಗಿ ಇಡೀ ಹಿಂದುತ್ವವನ್ನೇ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಜಮೀರ್ ಅಹ್ಮದನ ಅಶ್ವಮೇಧ ಕುದುರೆ ಕಟ್ಟಿ ಹಾಕಿ, ಅಮಾಯಕರ ಆಸ್ತಿ ಉಳಿಸಿದ ನಾಯಕ ಬಸನಗೌಡರು, ಸರ್ವ ಜನಾಂಗದ ಹಿತವನ್ನು ಬಯಸಿ, ದಲಿತರು, ಹಿಂದುಳಿದವರ ಪರವಾಗಿ ಧ್ವನಿ ಎತ್ತುವ ನಾಯಕನನ್ನು ಉಚ್ಚಾಟನೆ ಮಾಡಿದ್ದು ಇದೊಂದು ಹುಚ್ಚಾಟ. ಈ ಮೂಲಕ ಸಮಸ್ತ ಹಿಂದೂ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ**
>
> -ಪ್ರತಾಪ ಸಿಕ್ಕಲಕಿ,


ಪ್ರಖರ ಹಿಂದುತ್ವ ನಾಯಕರನ್ನು ಗುರಿಯನ್ನಾಗಿಸಿ ಒಬ್ಬೊಬ್ಬರನ್ನು ಮುಗಿಸುತ್ತಿರುವ ಕುಟುಂಬವನ್ನು ನಂಬಿ ತೆಗೆದುಕೊಂಡಿರುವ ತಪ್ಪು ನಿರ್ಣಯವನ್ನು ಮತ್ತೊಮ್ಮೆ ಪರಿಶೀಲಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಸಮಸ್ತ ನಾಡಿನ ಹಿಂದೂಗಳೇ ತಕ್ಕ ಪಾಠ ಕಲಿಸುತ್ತಾರೆ ಎಚ್ಚರ ಇರಲಿ. ಹಿಂದುತ್ವದ ನಾಯಕ ಯಾರು ಅಂತ ಕೇಳಿದರೆ ಮೊದಲಿಗೆ ಬರುವ ಹೆಸರೇ ಬಸನಗೌಡ ಪಾಟೀಲ ಯತ್ನಾಳರದ್ದು. ರಾಜ್ಯದಲ್ಲಿ ಎಲ್ಲೇ ಹಿಂದು ಕಾರ್ಯಕರ್ತರ ಕೊಲೆಯಾದರೆ, ಅವರ ಮೇಲೆ ದೌರ್ಜನ್ಯ ನಡೆದರೆ ಮೊದಲು ಅವರನ್ನು ಭೇಟಿ ಆಗಿ ಸಾಂತ್ವನದ ಜೊತೆಗೆ ಪರಿಹಾರ ನೀಡುವರು ಬಸನಗೌಡರು. ರೈತರ ಆಸ್ತಿಗಳನ್ನು ಕಬಳಿಸುವ ಹುನ್ನಾರ ತಡೆಯಲು ಮೊದಲು ಪ್ರಧಾನಮಂತ್ರಿಗಳಿಗೆ ಪತ್ರ ಬರೆದವರೇ ಬಸನಗೌಡರು.

ಗಟ್ಟಿಯಾಗಿ ನಿಂತು ದಿಟ್ಟತನದಿಂದ ಹೋರಾಟ ಮಾಡಿ ಕಬಳಿಸಲು ಯತ್ನಿಸಿರುವ ಆಸ್ತಿ ಮರಳಿ ಜನರಿಗೆ ಸಿಗುವಂತೆ ಮಾಡಿದ ನಾಯಕರು ನಮ್ಮ ಬಸನಗೌಡರು. ಫಕೀರ ಬಸ್ತಿ ಆಗಿದ್ದ ವಿಜಯಪುರ ಹಿಂದುತ್ವ, ಶಾಂತಿಯ ಬೀಡು ಮಾಡಿದ್ದಾರೆ ಎಂದರು.

# ವರ್ಟಿಕಲ್ ಲಿಫ್ಟ್ ರೈಲು ಸೇತುವೆ 'ಪಂಬನ್ ಬ್ರಿಡ್ಜ್' ರಾಮನವಮಿಯಂದು ಲೋಕಾರ್ಪಣೆ

**ಹೊಸದಿಲ್ಲಿ:** ಏಪ್ರಿಲ್ 6ರ ರಾಮನವಮಿಯಂದು ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿನ ರಾಮೇಶ್ವರಂ ಸಂಪರ್ಕಿಸುವ ನೂತನ ಪಂಬನ್ ಸೇತುವೆ ಉದ್ಘಾಟಿಸಲಿದ್ದಾರೆ. ಅಲ್ಲದೇ ರಾಮೇಶ್ವರಂ ದೇವಸ್ಥಾನದಲ್ಲಿಪೂಜೆ ಸಲ್ಲಿಸಲಿದ್ದಾರೆ.

ಅತ್ಯಾಧುನಿಕ ಎಂಜಿನಿಯರಿಂಗ್ ತಂತ್ರಜ್ಞಾನಕ್ಕೆ ಸಾಕ್ಷಿಯಾದ ನೂತನ ಸೇತುವೆಯು ದೇಶದ ಮೊದಲ ವರ್ಟಿಕಲ್ ಲಿಫ್ಟ್ ರೈಲು ಸೇತುವೆ ಎಂಬ ಶ್ರೇಯಕ್ಕೆ ಪಾತ್ರವಾಗಲಿದೆ. ಇದು ಭಾರತದ ಮೊದಲ ವರ್ಟಿಕಲ್ ರೈಲ್ವೆ ಸೇತುವೆ ಆಗಲಿದೆ.



ಅಂದರೆ ಸಮುದ್ರ ಮಾರ್ಗದಲ್ಲಿ ಹಡುಗುಗಳ ಸಂಚಾರ ವೇಳೆ ಸೇತುವೆಯು ಕೇವಲ 5 ನಿಮಿಷದಲ್ಲಿ ಗರಿಷ್ಠ 22 ಮೀಟರ್‌ವರೆಗೆ ಮೇಲಕ್ಕೆತ್ತಲ್ಪಟ್ಟು ಬಳಿಕ ಅದು ಸ್ವಸ್ಥಾನಕ್ಕೆ ಮರಳಿದೆ. ಎಲೆಕ್ಟ್ರೊ ಮೆಕ್ಯಾನಿಕಲ್ ವ್ಯವಸ್ಥೆ ಮೂಲಕ ಕಾರ್ಯಾಚರಣೆ ನಡೆಯಲಿದೆ. ರೈಲ್ ವಿಕಾಸ ನಿಗಮ ನಿಯಮಿತವು (ಆರ್‌ವಿಎನ್ ಎಲ್) 535 ಕೋಟಿ ರೂ. ವೆಚ್ಚದಲ್ಲಿ ಸೇತುವೆಯನ್ನು ನಿರ್ಮಿಸಿದೆ. ಸೇತುವೆ ಮೇಲೆ ರೈಲು ಸಂಚಾರ ವೇಗವನ್ನು ಗಂಟೆಗೆ 75 ಕಿ.ಮೀ ಮಿತಿಗೊಳಿಸಲಾಗಿದೆ.

**ಏನಿದರ ವಿಶೇಷ?**

- – 2.5 ಕಿ.ಮೀ ಉದ್ದದ ದೇಶದ ಮೊದಲ ವರ್ಟಿಕಲ್ ಲಿಫ್ಟ್ ರೈಲು ಸೇತುವೆ
- – ಹಡಗು ಸಂಚಾರ ವೇಳೆ ಮೇಲಕ್ಕೆತ್ತಲ್ಪಟ್ಟು ಮತ್ತೆ ಸ್ವಸ್ಥಾನಕ್ಕೆ ಮರಳುವ ವ್ಯವಸ್ಥೆ
- – ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಯಾತ್ರಾರ್ಥಿಗಳಿಗೆ ಅನುಕೂಲ
- – ಮುಖ್ಯಭೂಮಿಯಿಂದ ರಾಮೇಶ್ವರಂಗೆ 5 ನಿಮಿಷದಲ್ಲಿಪ್ರಯಾಣ
- – 535 ಕೋಟಿ ರೂ. ವೆಚ್ಚ, ವೇಗದ ಮಿತಿ ಗಂಟೆಗೆ 75 ಕಿ.ಮೀ

1914ರಲ್ಲಿ ನಿರ್ಮಾಣಗೊಂಡ ರೈಲ್ವೆ ಸೇತುವೆಯ ಮೂಲಕ ರಾಮೇಶ್ವರಂಗೆ ಸಂಪರ್ಕ ಕಲ್ಪಿಸಲಾಗಿತ್ತು.

ಆದರೆ, ಆ ಸೇತುವೆ ಶಿಥಿಲಗೊಂಡ ಹಿನ್ನೆಲೆಯಲ್ಲಿ 2022ಸರಲ್ಲಿ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಹಳೆ ಸೇತುವೆಯ ಪಕ್ಕದಲ್ಲೇ ಹೊಸ ಸೇತುವೆ ನಿರ್ಮಾಣ ಕಾರ್ಯಕ್ಕೆ ಮೋದಿ ಅವರೇ 2019ರಲ್ಲಿಶಂಕುಸ್ಥಾಪನೆ ನೆರವೇರಿಸಿದ್ದರು. ಆದರೆ, ಕೊರೋನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿಕಾಮಗಾರಿಗೆ ಅಡಚಣೆಯಾಗಿತ್ತು. 2.5 ಕಿ.ಮೀ ಉದ್ದದ ಹೊಸ ಸೇತುವೆ ಈಗ ಪೂರ್ಣಗೊಂಡಿದ್ದು, ಈಗಾಗಲೇ ಪ್ರಾಯೋಗಿಕ ರೈಲು ಸಂಚಾರವೂ ಯಶಸ್ವಿಯಾಗಿದೆ. ಈ ಹಿಂದೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಸೇತುವೆಯ ವಿಶೇಷ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು. ಈ ಸೇತುವೆ ಮೂಲಕ ಮುಖ್ಯಭೂಮಿಯಿಂದ ರಾಮೇಶ್ವರಂ ಅನ್ನು ಕೇವಲ 5 ನಿಮಿಷದಲ್ಲಿ ತಲುಪಬಹುದಾಗಿದೆ. ಹಳೆ ಸೇತುವೆಯಲ್ಲಿ ಸಂಚಾರ 25 ನಿಮಿಷ ಹಿಡಿಯುತ್ತಿತ್ತು.

# ಮಿನಿ ನ್ಯೂಸ್

## ಜಾರ್ಖಂಡ್‌ನ ಲತೇಹಾರ್‌ನಲ್ಲಿ ಮಾವೋವಾದಿ ಬಂಧನ

**ಲತೇಹಾರ್:** ನಿಷೇಧಿತ ಸಿಪಿಐ ಸಂಘಟನೆಯಿಂದ ಬೇರ್ಪಟ್ಟ ಸ್ವಯಂ ಘೋಷಿತ ಏರಿಯಾ ಕಮಾಂಡರ್‌ನನ್ನು ಶನಿವಾರ ಲತೇಹಾರ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಾರ್ಖಂಡ್ ಜನ ಮುಕ್ತಿ ಪರಿಷತ್ ಸದಸ್ಯನನ್ನು ಚಿಪಾದೋಹರ್ ಪೊಲೀಸ್ ಠಾಣೆ ಪ್ರದೇಶದ ಕಟಿಯಾ ಅರಣ್ಯದಲ್ಲಿ ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೊಕಾಖಂಡ್, ಹರ್ಪಂಜ್‌ನಲ್ಲಿ ಪೊಲೀಸರೊಂದಿಗೆ ನಡೆದ ಎರಡು ಎನ್‌ಕೌಂಟರ್‌ಗಳಲ್ಲಿ ಭಾಗಿಯಾಗಿದ್ದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದರು.

## ಉತ್ತರ ಪ್ರದೇಶ : ಗುಂಡಿಕ್ಕಿ ವಾಯುಪಡೆಯ ಸಿವಿಲ್ ಎಂಜಿನಿಯರ್ ಹತ್ಯೆ

**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಭಾರತೀಯ ವಾಯುಪಡೆಯ ಸಿವಿಲ್ ಎಂಜಿನಿಯರ್ ಮೇಲೆ ಗುಂಡು ಹಾರಿಸಿ ಕೊಲೆ ಮಾಡಲಾಗಿದೆ. ಎಸ್‌ಎನ್ ಮಿಶ್ರಾ (51) ಕೊಲೆಯಾದ ಅಧಿಕಾರಿ. ತಮ್ಮ ಮನೆಯ ಕೋಣೆಯಲ್ಲಿ ಮಲಗಿದ್ದಾಗ ಅಪರಿಚಿತ ದುಷ್ಕರ್ಮಿಯೊಬ್ಬ ಕಿಟಕಿಯಿಂದ ಮೂಲಕ ರಿವಾಲ್ವರ್‌ನಿಂದ ಗುಂಡು ಹಾರಿಸಿದ್ದಾನೆ ಎಂದು ಪುರಾಮುಫ್ತಿ ಪೊಲೀಸ್ ಠಾಣೆ ಅಧಿಕಾರಿ ಮನೋಜ್ ಸಿಂಗ್ ತಿಳಿಸಿದ್ದಾರೆ. ಎದೆಗೆ ಗುಂಡು ತಗುಲಿ ತೀವ್ರವಾಗಿ ಗಾಯಗೊಂಡ ಮಿಶ್ರಾ ಅವರನ್ನು ತಕ್ಷಣ ಸೇನಾ ಆಸ್ಪತ್ರೆಗೆ ಸಾಗಿಸಲಾಯಿತು. ಮಿಶ್ರಾ ಆಸ್ಪತ್ರೆಯಲ್ಲಿ ಮಿಶ್ರಾ ಅವರು ಪತ್ನಿ, ಒಬ್ಬ ಮಗ ಮತ್ತು ಮಗಳು ಜೊತೆ ವಾಸಿಸುತ್ತಿದ್ದರು ಈ ಘಟನೆ ಹಿಂದ ಉಗ್ರರ ಕೈವಾಡ ವಿರುವ ಶಂಕೆ ಇದೆ, ಹಿರಿಯ ಮೃತಪಟ್ಟಿದ್ದಾರೆ ಪೊಲೀಸ್ ಅಧಿಕಾರಿಗಳು, ಸೇನಾ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

# ಕಾಮಿಡಿಯನ್ ಕುನಾಲ್ ಕಾಮ್ರಾಗೆ ಕೇಂದ್ರ ಸರ್ಕಾರ ರಕ್ಷಣೆ ಒದಗಿಸಬೇಕು: ಸಂಜಯ್ ರಾವುತ್



**ಮುಂಬೈ:** ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ಟೀಕೆ, ತನಿಖೆಯನ್ನು ಎದುರಿಸುತ್ತಿರುವ ಹಾಸ್ಯನಟ ಕುನಾಲ್ ಕಾಮ್ರಾ ಅವರಿಗೆ ಕೇಂದ್ರ ಸರ್ಕಾರ ರಕ್ಷಣೆ ನೀಡಬೇಕೆಂದು ಶಿವಸೇನೆ, ಸಂಸದ ಸಂಜಯ್ ರಾವತ್ ಒತ್ತಾಯಿಸಿದ್ದಾರೆ. 2020ರಲ್ಲಿ ನಟಿ ಕಂಗನಾ ರಣಾವತ್ ಅವರಿಗೆ ಸರ್ಕಾರ ರಕ್ಷಣೆ ಒದಗಿಸಿದ್ದನ್ನು ನೆನಪಿಸಿದ್ದಾರೆ.

ಏಕನಾಥ್ ಶಿಂಧೆ ಅವರನ್ನು ಕಾರ್ಯಕ್ರಮವೊಂದರಲ್ಲಿ ದೇಶದ್ರೋಹಿ ಎಂದು ಟೀಕಿಸಿದ್ದಕ್ಕಾಗಿ ಕಾಮ್ರಾ ವಿರುದ್ಧ ಅನೇಕ ಎಫ್‌ಐಆರ್‌ಗಳು ದಾಖಲಾಗಿದ್ದು, ಕಳೆದ ಭಾನುವಾರ ಶಿಂಧೆ ನೇತೃತ್ವದ ಶಿವ ಸೇನಾ ಕಾರ್ಯಕರ್ತರು ಸ್ಟುಡಿಯೋವನ್ನು ಧ್ವಂಸಗೊಳಿಸಿದ್ದರು.

ಮದ್ರಾಸ್ ಹೈಕೋರ್ಟ್ ಕಾಮ್ರಾ ಅವರಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ. ಮುಂಬೈ ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ಕುನಾಲ್ ಕಾಮ್ರಾ ಅವರಿಗೆ ಎರಡು ನೋಟಿಸ್‌ಗಳನ್ನು ನೀಡಿದ್ದು, ಕಾಮ್ರಾ ಇನ್ನೂ ವಿಚಾರಣೆಗೆ ಹಾಜರಾಗಿಲ್ಲ. ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯನ್ನು ಪ್ರತಿಪಾದಿಸುವ ಕವಿತೆಯ ಕ್ಲಿಪ್ ಅನ್ನು ಪೋಸ್ಟ್ ಮಾಡಿದ ಆರೋಪದ ಮೇಲೆ ಕಾಂಗ್ರೆಸ್ ಸಂಸದ ಇಮ್ರಾನ್ ಪ್ರತಾಪ್‌ಗಢಿ ವಿರುದ್ಧದ ಎಫ್‌ಐಆರ್ ಅನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್ ಆದೇಶವನ್ನು ರಾವುತ್ ಸ್ವಾಗತಿಸಿದರು. ಪ್ರತಾಪ್‌ಗಢಿಯವರಂತೆಯೇ, ಕಾಮ್ರಾ ಕೂಡ ಒಬ್ಬ ಕಲಾವಿದ, ಕವಿ, ವಿಡಂಬನಕಾರ ಎಂದರು.

ಕಾಮ್ರಾ ಅವರು ಮುಂಬೈಗೆ ಬಂದು ತನ್ನ ವಿಷಯವನ್ನು ಮಂಡಿಸಬೇಕು. ಕೇಂದ್ರ ಸರ್ಕಾರ ಕಂಗನಾ ರಣಾವತ್ ಅವರನ್ನು ರಕ್ಷಿಸಿತು. ಅದರಂತೆ ಕುನಾಲ್ ಕಾಮ್ರಾ ಅವರಿಗೂ ವಿಶೇಷ ರಕ್ಷಣೆ ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ ಎಂದು ಸುದ್ದಿಗಾರರಿಗೆ ತಿಳಿಸಿದರು. 2020ರಲ್ಲಿ, ಉದ್ಧವ್ ಠಾಕ್ರೆ ಮುಖ್ಯಮಂತ್ರಿಯಾಗಿದ್ದಾಗ ಬಾಂದ್ರಾದಲ್ಲಿರುವ ರಣಾವತ್ ಅವರ ಬಂಗಲೆಯ ಒಂದು ಭಾಗವನ್ನು ಮುಂಬೈ ನಾಗರಿಕ ಸಂಸ್ಥೆಯು ಬದಲಾವಣೆಗಳನ್ನು ಮಾಡಿದ್ದಾರೆ ಎಂಬ ಆರೋಪದ ಮೇಲೆ ಕೆಡವಿತು.

ಇದು ನಟಿ ಮತ್ತು ಶಿವಸೇನಾ ನಾಯಕರ ನಡುವೆ ಆಕ್ರೋಶ ಮತ್ತು ಮಾತಿನ ಚಕಮಕಿಗೆ ಕಾರಣವಾಯಿತು. ನಂತರ ಕೇಂದ್ರವು ಸದ್ಯ ಹಿಮಾಚಲ ಪ್ರದೇಶದ ಬಿಜೆಪಿ ಸಂಸದರಾಗಿರುವ ರಣಾವತ್ ಅವರಿಗೆ ರಕ್ಷಣೆ ನೀಡಿತ್ತು.

### ಜಮ್ಮು-ಕಾಶ್ಮೀರದ ಬುದ್ಯಾಮ್ ಜಿಲ್ಲೆಯಲ್ಲಿ ಆಕ್ಷೇಪಾರ್ಹ ಘೋಷಣೆ ಕೂಗಿದವರ ವಿರುದ್ಧ ಕೇಸ್

# ಕಾನೂನು, ಸುವ್ಯವಸ್ಥೆಯ ಬಗ್ಗೆ ಕಳವಳಕ್ಕೆ ಕಾರಣ

**ಶ್ರೀನಗರ:** ಜಮ್ಮು-ಕಾಶ್ಮೀರದ ಬುದ್ಯಾಮ್ ಜಿಲ್ಲೆಯಲ್ಲಿ ಆಕ್ಷೇಪಾರ್ಹ ಘೋಷಣೆಗಳನ್ನು ಕೂಗುವ ಮೂಲಕ ಕಾನೂನು, ಸುವ್ಯವಸ್ಥೆಗೆ ಭಂಗ ತಂದ ಆರೋಪದ ಮೇಲೆ ಮೆರವಣಿಗೆಯ ಸಂಘಕರು, ಭಾಗವಹಿಸುವವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಈ ಪ್ರಕರಣವು ಮಧ್ಯ ಕಾಶ್ಮೀರದ ಬೀರ್ವಾಡ್‌ನ ಸೋನ್ ಪಾಹ್ ಗ್ರಾಮದಲ್ಲಿ ಯೂಮ್-ಎ-ಕುದ್ ಮೆರವಣಿಗೆಯ ಸಂಘಟಕರು, ಭಾಗವಹಿಸುವವರಿಗೆ ಸಂಬಂಧಿಸಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಪೊಲೀಸರು ಘಟನೆಯ ಬಗ್ಗೆ ತಕ್ಷಣ ಗಮನಹರಿಸಿದರು, ಬೀರ್ವಾ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 126(2), 189 (6)ರಡಿ ಪ್ರಕರಣ ದಾಖಲಿಸಿದ್ದಾರೆ. ತನಿಖೆ ಮುಂದುವರಿದಿದ್ದು, ಸಂಬಂಧಪಟ್ಟವರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಶಾಂತಿ ಕಾಪಾಡಲು, ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಕ್ರಮಗಳನ್ನು ತಪ್ಪಿಸುವಂತೆ ಪೊಲೀಸರು ನಾಗರಿಕರನ್ನು ಒತ್ತಾಯಿಸಿದ್ದಾರೆ. ಸೆಪ್ಟೆಂಬರ್ 2024ರಲ್ಲಿ ನೂರಾರು ಪ್ರತಿಭಟನಾಕಾರರು ಕಾಶ್ಮೀರದಲ್ಲಿ ರ‍್ಯಾಲಿ ನಡೆಸಿದರು. ಹಿಜ್ಬುಲ್ಲಾ ನಾಯಕ ಹಸನ್ ನಸ್ರಲ್ಲಾ ಅವರ ಹತ್ಯೆಯನ್ನು ಖಂಡಿಸಿದರು, ಉನ್ನತ ರಾಜಕಾರಣಿಗಳು ವಿಧಾನಸಭೆ ಚುನಾವಣೆಯ ಪ್ರಚಾರವನ್ನು ಸ್ಥಗಿತಗೊಳಿಸಿದ್ದರು. ಪ್ರತಿಭಟನಾಕಾರರು ಬೀದಿಗಿಳಿದು, ಲೆಬನಾನಿನ ನಾಯಕನ ಚಿತ್ರಗಳನ್ನು ಹಿಡಿದುಕೊಂಡು, ಓ ಪ್ಯಾಲೆಸ್ತೀನ್ ಹುತಾತ್ಮರೇ, ನಾವು ನಿಮ್ಮೊಂದಿಗಿದ್ದೇವೆ ಎಂಬ ಘೋಷಣೆಗಳನ್ನು ಕೂಗಿದರು. ಅವರು ಇಸ್ರೇಲ್, ಯುನೈಟೆಡ್ ಸ್ಟೇಟ್ಸ್ ಅನ್ನು ಖಂಡಿಸುವ ಚಿಹ್ನೆಗಳು, ಬ್ಯಾನರ್ಗಳನ್ನು ಎತ್ತಿ ಹಿಡಿದು ಪ್ರದರ್ಶಿಸಿದ್ದರು. ಮಾಜಿ ಮುಖ್ಯಮಂತ್ರಿ, ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೆ ಮೆಹಬೂಬಾ ಅವರು ಒಗ್ಗಟ್ಟಿನ ಅಂತಿಮ ಹಂತದ ಮತದಾನಕ್ಕಾಗಿ ತಮ್ಮ ಪ್ರಚಾರವನ್ನು ರದ್ದುಗೊಳಿಸಿದ್ದರು.

**ಅಗತ್ಯ ಕಾನೂನು ಕ್ರಮ**

ಯೂಮ್-ಎ-ಕುಡ್ಸ್, ಇದನ್ನು ಕುಡ್ಸ್ ಡೇ ಅಥವಾ ಇಂಟನ್ಯಾಷನಲ್ ಕುಡ್ಸ್ ಡೇ ಎಂದೂ ಕರೆಯಲಾಗುತ್ತದೆ, ಇದು ಇಸ್ಲಾಮಿಕ್ ಪವಿತ್ರ ತಿಂಗಳ ರಂಜಾನ್ ಕೊನೆಯ ಶುಕ್ರವಾರದಂದು ಆಚರಿಸಲಾಗುವ ವಾರ್ಷಿಕ ಕಾರ್ಯಕ್ರಮವಾಗಿದೆ. ಈ ದಿನವನ್ನು ಪ್ಯಾಲೆಸ್ತೀನ್ ಪರವಾದ ಪ್ರದರ್ಶನಗಳಿಂದ ಗುರುತಿಸಲಾಗಿದೆ, ಇದು ಪ್ಯಾಲೇಸ್ಟಿನಿಯನ್ ಕಾರಣದೊಂದಿಗೆ ಐಕಮತ್ಯವನ್ನು ವ್ಯಕ್ತಪಡಿಸುವ ಗುರಿಯನ್ನು ಹೊಂದಿದೆ.

**ಸಾರ್ವಜನಿಕರಿಗೆ ಅಡ್ಡಿ**

**ಸೋನ್ಪಾಹ್ ಗ್ರಾಮದಲ್ಲಿ ಮೆರವಣಿಗೆಯ ಸಂದರ್ಭದಲ್ಲಿ ಸಂಘಟಕರ ನಿರ್ದೇಶನದ ಮೇರೆಗೆ ದೊಡ್ಡ ಜನ ಸಮೂಹವು ಜಮಾಯಿಸಿ ಆಕ್ಷೇಪಾರ್ಹ ಘೋಷಣೆಗಳನ್ನು ಎತ್ತಿತು, ಇದು ಕಾನೂನು, ಸುವ್ಯವಸ್ಥೆಯ ಬಗ್ಗೆ ಕಳವಳಕ್ಕೆ ಕಾರಣವಾಗಿತ್ತು. ಸಂಘಟಕರು ತಮ್ಮ ಘೋಷಣೆಗಳ ಮೂಲಕ ಕಾನೂನು-ಸುವ್ಯವಸ್ಥೆ ಪರಿಸ್ಥಿತಿಯನ್ನು ಸೃಷ್ಟಿಸಲು ಪ್ರಯತ್ನಿಸಿದರು, ಸೋನ್ಪಾ-ಬೀರ್ವಾಹ್ ರಸ್ತೆಯನ್ನು ತಡೆದು ಸಾರ್ವಜನಿಕರಿಗೆ ಅಡ್ಡಿಪಡಿಸಿದರೆಂದು ಆರೋಪಿಸಲಾಗಿದೆ.**

# ಸಾಧು ಭದ್ರೇಶ್‌ದಾಸ್‌ಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ್



**ನವದೆಹಲಿ:** ಕೆ.ಕೆ ಬಿರ್ಲಾ ಪ್ರತಿಸ್ಥಾನವು ಕೊಡಮಾಡುವ 2024ನೇ ಸಾಲಿನ ಪ್ರತಿಷ್ಠಿತ ಸರ ಸ್ವತಿ ಸಮ್ಮಾನ್‌ಗೆ ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಮಹಾಮಹೋಪಾದ್ಯಾಯ ಸಾಧು ಭದ್ರೇಶ್ ದಾಸ್ ಅವರು ಭಾಜನರಾಗಿದ್ದಾರೆ.

ಸಾಧುಭದ್ರೇಶ್‌ದಾಸ್ ಅವರ ಸ್ವಾಮಿ ನಾರಾಯಣ ಸಿದ್ಧಾಂತ ಸುಧಾ ಸಂಸ್ಕೃತ ಕೃತಿಗೆ ಈ ಗೌರವ ಲಭಿಸಿದೆ. ಮಹಾರಾಷ್ಟ್ರದ ನಾಂದೇಡ್‌ನಲ್ಲಿ 1966ರ ಡಿಸೆಂಬರ್ 12 ರಂದು ಜನಿಸಿರುವ ಸಾಧು ಅವರು ವರ್ಣರಂಜಿತ ಶೈಕ್ಷಣಿಕ ದಾಖಲೆ ಹೊಂದಿದ್ದು, ಎಂ.ಎ, ಪಿಹೆಚ್.ಡಿ. ಡಿ.ಲಿಟ್ ಮತ್ತು ಐಐಟಿ ಖರಗ್‌ಪುರ್ ನಿಂದ ಡಾಕ್ಟರ್ ಆಫ್‌ಸೈನ್ಸ್ ಪದವಿಗಳನ್ನು ಗಳಿಸಿದ್ದಾರೆ ಇವರು ಭಾರತೀಯ ತತ್ವಜ್ಞಾನದ ಪ್ರಮುಖ ವಿದ್ವಾಂಸರಾಗಿ ಗುರುತಿಸಿಕೊಂಡಿದ್ದಾರೆ.

ಇಂಡಿಯನ್ ಕೌನ್ಸಿಲ್ ಆಫ್ ಫಿಲಾಸಫಿಕಲ್ ರಿಸರ್ಚ್ (ಐಸಿಪಿಆರ್) ನಿಂದ ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿರುವ ಸಾಧು ಭದ್ರೇಶ್‌ದಾಸ್ ಅವರಿಗೆ ಥಾಯ್ಲೆಂಡಿನ ಶಿಲ್ಪಾಕಾರ್ನ್ ವಿಶ್ವವಿದ್ಯಾನಿಲಯವು ವೇದಾಂತ ಮಾರ್ತಾಂಡ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಸ್ತುತ ಇವರು ಬಿಎಪಿಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2022 ರಲ್ಲಿ ಪ್ರಕಟವಾದ ಸ್ವಾಮಿ ನಾರಾಯಣ ಸಿದ್ಧಾಂತ ಸುಧಾ ಕೃತಿಯು ಪ್ರಸ್ಥಾನತ್ರಯೀ ವಿಷಯವನ್ನು ಒಳಗೊಂಡಿದ್ದು ಅಕ್ಷರ ಪುರುಷೋತ್ತಮ ದರ್ಶನ ಸಿದ್ಧಾಂತ ದೃಷ್ಟಿಕೋನವನ್ನು ಸರಳವಾಗಿ ಆದರೆ ಪಾರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಈ ಕೃತಿಯು ಭಾರತದಲ್ಲಿ ಅನೇಕ ಸೈದ್ಧಾಂತಿಕ ಸಂಶೋಧನೆಗಳಿಗೆ ಆಕರವಾಗಿದೆ. ಸರಸ್ವತಿ ಸಮ್ಮಾನ್ 1991 ರಲ್ಲಿ ಕೆ.ಕೆ. ಬಿರ್ಲಾ ಫೌಂಡೇಷನ್ ಸ್ಥಾಪಿಸಿರುವ ಒಂದು ಸಾಹಿತ್ಯಕ ಪ್ರಶಸ್ತಿಯಾಗಿದೆ.

ಇದು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಭಾರತೀಯ ಭಾಷಾ ಕೃತಿಗೆ ನೀಡುವ ವಾರ್ಷಿಕ ಪ್ರಶಸ್ತಿಯಾಗಿದೆ. ಕಳೆದ 10 ವರ್ಷಗಳಲ್ಲಿ ಭಾರತೀಯ ಪ್ರಜೆಯಿಂದ ರಚಿತವಾಗಿರುವ ಕೃತಿಯನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿಯು ಹದಿನೈದು ಲಕ್ಷ (15 ಲಕ್ಷ) ರೂಪಾಯಿಗಳ ನಗದು ಬಹುಮಾನ, ಬಿನ್ನವತ್ತಳೆ ಮತ್ತು ಸ್ಮರಣಿಕೆನ್ನೊಳಗೊಂಡಿದೆ.

# ಅಮೆರಿಕ-ಭಾರತ ಮಧ್ಯೆ ವ್ಯಾಪಾರ ಮಾತುಕತೆ ಸುಗಮವಾಗಿ ಸಾಗುತ್ತದೆ ಎಂಬ ವಿಶ್ವಾಸ ಇದೆ: ಟ್ರಂಪ್

**ನ್ಯೂಯಾರ್ಕ್:** ಪ್ರಧಾನ ಮಂತ್ರಿ, ನರೇಂದ್ರ ಮೋದಿಯವರನ್ನು ಅತ್ಯಂತ ಬುದ್ಧಿವಂತ ವ್ಯಕ್ತಿ, ನನ್ನ ಉತ್ತಮ ಸ್ನೇಹಿತ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಣ್ಣಿಸಿದ್ದಾರೆ. ಸುಂಕ ವಿಧಿಸುವ ವಿಚಾರದಲ್ಲಿ ಭಾರತ, ನಮ್ಮ ದೇಶದ ನಡುವೆ ಮಾತುಕತೆಗಳು ಉತ್ತಮವಾಗಿ ಸಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಭಾರತ, ಇತರ ದೇಶಗಳು ಅಮೆರಿಕದ ಸರಕುಗಳ ಮೇಲೆ ವಿಧಿಸುತ್ತಿರುವ ಹೆಚ್ಚಿನ ಸುಂಕಗಳ ಮೇಲೆ ಟ್ರಂಪ್ ಅವರು ನೀಡುತ್ತಿರುವ ಹೇಳಿಕೆಗಳಿಂದಾಗಿ ಈ ಮಾತುಗಳು ಮಹತ್ವ ಪಡೆದಿವೆ. ಪ್ರಧಾನಿ ಮೋದಿ ಇತ್ತೀಚೆಗೆ ಇಲ್ಲಿಗೆ ಬಂದಿದ್ದರು, ನಾವು ಯಾವಾಗಲೂ ಉತ್ತಮ ಸ್ನೇಹಿತರಾಗಿದ್ದೇವೆ ಎಂದು ನಿನ್ನೆ ಶ್ವೇತಭವನದಲ್ಲಿ ಟ್ರಂಪ್ ಹೇಳಿದ್ದಾರೆ.

**ಮೋದಿ ಬಹಳ ಬುದ್ಧಿವಂತ ವ್ಯಕ್ತಿ,**

ಭಾರತವು ವಿಶ್ವದ ಅತಿ ಹೆಚ್ಚು ಸುಂಕ ವಿಧಿಸುವ ರಾಷ್ಟ್ರಗಳಲ್ಲಿ ಒಂದಾಗಿದೆ. ಇದು ಕ್ರೂರ ಕ್ರಮ. ಪ್ರಧಾನಿ ಮೋದಿಯವರು ತುಂಬಾ ಬುದ್ಧಿವಂತರು. ಹಾಗೆಯೇ ನನ್ನ ಉತ್ತಮ ಸ್ನೇಹಿತನೂ ಹೌದು. ನಮ್ಮ ಮಾತುಕತೆ ಸುಗಮವಾಗಿ ಸಾಗುತ್ತಿದೆ. ಭಾರತ ಮತ್ತು ನಮ್ಮ ದೇಶದ ನಡುವೆ ಇದು ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ ಎಂದರು. ವಾಷಿಂಗ್ಟನ್‌ನಲ್ಲಿರುವ ಶ್ವೇತ ಭವನದ ಓವಲ್ ಕಚೇರಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಸ್ತಲಾಘವ ಮಾಡುತ್ತಿದ್ದಾರೆ.

ಮೋದಿಯವರು ಒಬ್ಬ ಉತ್ತಮ ಪ್ರಧಾನಿ.

**ಭಾರತ ಮತ್ತು ಇತರ ದೇಶಗಳು ಅಮೆರಿಕದ ಸರಕುಗಳ ಮೇಲೆ ವಿಧಿಸುತ್ತಿರುವ ಹೆಚ್ಚಿನ ಸುಂಕಗಳ ಮೇಲೆ ಟ್ರಂಪ್ ಅವರು ನೀಡುತ್ತಿರುವ ಹೇಳಿಕೆಗಳಿಂದಾಗಿ ಈ ಮಾತುಗಳು ಮಹತ್ವ ಪಡೆದಿವೆ. ಪ್ರಧಾನಿ ಮೋದಿ ಇತ್ತೀಚೆಗೆ ಇಲ್ಲಿಗೆ ಬಂದಿದ್ದರು, ನಾವು ಯಾವಾಗಲೂ ಅವರಿಗೆ ಉತ್ತಮ ಸ್ನೇಹಿತರಾಗಿದ್ದೇವೆ ಎಂದು ಶ್ವೇತಭವನದಲ್ಲಿ ಹೇಳಿದ್ದಾರೆ.**

ಕಳೆದ ಫೆಬ್ರವರಿಯಲ್ಲಿ ವಾಷಿಂಗ್ಟನ್ ಡಿಸಿಗೆ ಭೇಟಿ ನೀಡಿದ್ದ ವೇಳೆ ಟ್ರಂಪ್ ಅವರೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಿದ್ದರು.

ಟ್ರಂಪ್ ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಒಂದು ತಿಂಗಳಲ್ಲಿ ಮೋದಿ ಅಮೆರಿಕಕ್ಕೆ ಭೇಟಿ ನೀಡಿದ್ದರು.

ಭಾರತವು ಅತಿ ಹೆಚ್ಚು ಸುಂಕ ಹೊಂದಿರುವ ರಾಷ್ಟ್ರ ಎಂದು ಟ್ರಂಪ್ ಈ ಹಿಂದೆ ಹೇಳಿದ್ದರು.

ಅಮೆರಿಕದ ಸರಕುಗಳ ಮೇಲೆ ಸುಂಕ ವಿಧಿಸುವ ದೇಶಗಳ ಮೇಲೆ ಸುಂಕ ವಿಧಿಸುವ ಕ್ರಮ ಏಪ್ರಿಲ್ 2ರಿಂದ ಪ್ರಾರಂಭವಾಗುತ್ತವೆ ಎಂದು ಪುನರುಚ್ಚರಿಸಿದ್ದರು.

**ಡೊನಾಲ್ಡ್ ಟ್ರಂಪ್ ಹಸ್ತಲಾಘವ**

**ವಾಷಿಂಗ್ಟನ್‌ನಲ್ಲಿರುವ ಶ್ವೇತಭವನದ ಓವಲ್ ಕಚೇರಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಸ್ತಲಾಘವ ಮಾಡುತ್ತಿದ್ದಾರೆ. ವಾಷಿಂಗ್ಟನ್‌ನಲ್ಲಿರುವ ಶ್ವೇತಭವನದ ಓವಲ್ ಕಚೇರಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಸ್ತಲಾಘವ ಮಾಡುತ್ತಿದ್ದಾರೆ.**

# ಮಸೀದಿಯಲ್ಲಿ ಹಿಂದೂ ಅಂಗಡಿ ಮಾಲಿಕನ ಪ್ರಾರ್ಥನೆ



**ಅಲೀಘರ್:** ಅಲಿಘರ್‌ನ ಸ್ಥಳೀಯ ಮಸೀದಿಯಲ್ಲಿ ಹಿಂದೂ ಅಂಗಡಿ ಮಾಲಿಕನೋರ್ವ ಸ್ವಯಂಪ್ರೇರಿತವಾಗಿ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದು ವಿವಾದಕ್ಕೆ ಕಾರಣವಾಗಿದೆ.

ಬಲಪಂಥೀಯ ಗುಂಪುಗಳು ಔಪಚಾರಿಕ ಶುದ್ಧೀಕರಣ ಸಮಾರಂಭಕ್ಕೆ ಒತ್ತಾಯಿಸಿವೆ. ಮಿಶ್ರ ಸಮುದಾಯದ ಮಾಮೂ ಭಂಜಾ ಪ್ರದೇಶದ ಅಂಗಡಿಯವರಾದ ಸುನಿಲ್ ರಜನಿ ತಮ್ಮ ಮುಸ್ಲಿಂ ನೆರೆಹೊರೆಯವರೊಂದಿಗೆ ಪ್ರಾರ್ಥನೆಗಾಗಿ ಸೇರಿಕೊಂಡರು, ಅದರ ವಿಡಿಯೋ ವೈರಲ್ ಆಗಿತ್ತು.

**ವಿವಾದ, ಶುದ್ಧೀಕರಣಕ್ಕೆ ಒತ್ತಾಯ**

ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ನ ಸ್ಥಳೀಯ ನಾಯಕ ಮೋನು ಅಗರ್ವಾಲ್, ರಜನಿಯವರ ಕೃತ್ಯಗಳನ್ನು ಅಪರಾಧ ಎಂದು ಪರಿಗಣಿಸಲಾಗಿದೆ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು ಮತ್ತು ಸಾರ್ವಜನಿಕ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು. ಇದಲ್ಲದೆ, ರಜನಿ ದೇವಸ್ಥಾನದಲ್ಲಿ ಶುದ್ಧಿಕರಣಕ್ಕೆ ಒಳಗಾಗಬೇಕೆಂದು ಅಗರ್ವಾಲ್ ಒತ್ತಾಯಿಸಿದರು. ಮಸೀದಿಯಿಂದ ಹೊರಬಂದ ನಂತರ ಕೆಲವು ಹಿಂದೂ ಬಲಪಂಥೀಯ ಸದಸ್ಯರನ್ನು ಎದುರಿಸಿದ ರಜನಿ, ಇದು 'ಪ್ರಚೋದನೆ' ಎಂದು ಹೇಳಿಕೊಂಡರು, 'ಗಂಗಾಜಲ' ಸಿಂಪಡಿಸುವ ಮೂಲಕ ತಕ್ಷಣದ 'ಸ್ವಯಂ ಶುದ್ಧೀಕರಣ'ಕ್ಕೆ ಪ್ರಯತ್ನಿಸಿದರು. ಈ ವಿಷಯದ ಬಗ್ಗೆ ಯಾವುದೇ ಔಪಚಾರಿಕ ದೂರು ದಾಖಲಾಗಿಲ್ಲ.

# ಟ್ವಿಟ್ಟರ್ (ಎಕ್ಸ್) ಮಾರಾಟ ಮಾಡಿದ ಎಲಾನ್ ಮಸ್ಕ್

**ಸ್ಯಾನ್ ಫ್ರಾನ್ಸಿಸ್ಕೋ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹಿರಿಯ ಸಲಹೆಗಾರ ಎಲಾನ್ ಮಸ್ಕ್ ತಮ್ಮ ಕೃತಕ ಬುದ್ಧಿಮತ್ತೆಯ ಸ್ಟಾರ್ಟ್ ಅಪ್ xAI-ಗೆ ತಮ್ಮ ಸಾಮಾಜಿಕ ಜಾಲತಾಣ ವೇದಿಕೆ xನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ. ಒಂದು ಕಾಲದಲ್ಲಿ ಟ್ವಿಟರ್ ಎಂದು ಕರೆಯಲ್ಪಡುತ್ತಿದ್ದ ಕಂಪನಿಯ ಮೌಲ್ಯವನ್ನು 33 ಬಿಲಿಯನ್ ಡಾಲರ್ ಗೆ ನಿಗದಿಪಡಿಸಲಾಗಿದೆ. ಟ್ವಿಟರ್ ಹೆಸರಿನಲ್ಲಿದ್ದ ಈ ಸೋಶಿಯಲ್ ಮೀಡಿಯಾವನ್ನು ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್ 2022ರ ಎಪ್ರಿಲ್ ತಿಂಗಳಲ್ಲಿ ಖರೀದಿಸಿದ್ದರು.



ಬರೋಬ್ಬರಿ 44 ಬಿಲಿಯನ್ ಅಮೆರಿಕನ್ ಡಾಲರ್ ಅಂದರೆ 3.40 ಲಕ್ಷ ಕೋಟಿ ರೂಪಾಯಿಗೆ ಎಲಾನ್ ಮಸ್ಕ್ ಟ್ವಿಟರ್ ಖರೀದಿಸಿದ್ದರು. ನಂತರ ಅದು ಎಕ್ಸ್ ಖಾತೆ ಎಂದು ಬದಲಾಯಿತು.

ಈ ವ್ಯಾಪಾರ ಯೋಜನೆಯು xAIನ ಮುಂದುವರಿದ ಎಐ ಸಾಮರ್ಥ್ಯ, ಪರಿಣತಿಯನ್ನು ಎಕ್ಸ್ ಸೋಷಿಯಲ್ ಮೀಡಿಯಾ ದೊಂದಿಗೆ ಸಂಯೋಜಿಸುವ ಮೂಲಕ ಅಪಾರ ಸಾಮರ್ಥ್ಯವನ್ನು ತೋರಿಸುತ್ತದೆ ಎಂದು ಎಲೋನ್ ಮಸ್ಕ್ ತಿಳಿಸಿದ್ದಾರೆ.

ಇದು ಕೇವಲ ಜಗತ್ತನ್ನು ಪ್ರತಿಬಿಂಬಿಸದೆ ಮಾನವ ಪ್ರಗತಿಯನ್ನು ಸಕ್ರಿಯವಾಗಿ ವೇಗಗೊಳಿಸುವ ವೇದಿಕೆಯನ್ನು ನಿರ್ಮಿಸಲು ನಮಗೆ ಅನುವು ಮಾಡಿಕೊಡುತ್ತದೆ. xAIನ್ನು 80 ಬಿಲಿಯನ್ ಡಾಲರ್, xನ್ನು 33 ಬಿಲಿಯನ್ ಡಾಲರ್ ಗೆ ಮೌಲ್ಯೀಕರಿಸುವ ಆಲ್-ಸ್ಟಾಕ್ ಒಪ್ಪಂದದಲ್ಲಿ ಕಂಪನಿಗಳನ್ನು ಸಂಯೋಜಿಸಲಾಗುತ್ತಿದೆ. 2022ರ ಕೊನೆಯಲ್ಲಿ ಎಲೋನ್ ಮಸ್ಕ್ ಟ್ವಿಟರ್‌ನ್ನು 44 ಬಿಲಿಯನ್ ಡಾಲರ್ ಗೆ ಖರೀದಿಸಿದ್ದರು. ಅದರ ಮುಂದಿನ ವರ್ಷ xAIನ್ನು ಪ್ರಾರಂಭಿಸಿದರು, ಈ ಉದ್ಯಮಕ್ಕಾಗಿ ಶತಕೋಟಿ ಡಾಲರ್‌ಗಳನ್ನು ಉನ್ನತ-ಮಟ್ಟದ ಚಿಪ್‌ಗಳಲ್ಲಿ ವಿನಿಯೋಗಿಸಿದರು.

**ಎಕ್ಸ್ ಸೋಷಿಯಲ್ ಮೀಡಿಯಾ ವೇದಿಕೆ 600 ಮಿಲಿಯನ್‌ಗಿಂತಲೂ ಹೆಚ್ಚು ಬಳಕೆದಾರರನ್ನು ಹೊಂದಿದ್ದು, ಅದರ ಭವಿಷ್ಯವು ಎರಡು ವರ್ಷಗಳ ಹಿಂದೆ ಪ್ರಾರಂಭಿಸಲಾದ xAIನೊಂದಿಗೆ ಬೆಸೆದುಕೊಂಡಿದೆ ಎಂದು ಮಸ್ಕ್ ಹೇಳಿದ್ದಾರೆ. ನಾವು ಅಧಿಕೃತವಾಗಿ ಡೇಟಾ, ಮಾದರಿಗಳು, ಕಂಪ್ಯೂಟರ್, ವಿತರಣೆ, ಪ್ರತಿಭೆಯನ್ನು ಸಂಯೋಜಿಸಲು ಹೆಜ್ಜೆ ಇಡುತ್ತೇವೆ ಎಂದು ಮಸ್ಕ್ ಎರಡು ಕಂಪನಿಗಳನ್ನು ಸಂಯೋಜಿಸುವ ಬಗ್ಗೆ ಹೇಳಿದರು.**

# ಹಳ್ಳಿ ಜನರಿಗೆ ನೂರಾರು ಕೋಟಿ ರೂಪಾಯಿ ವಂಚನೆ

**ಉತ್ತರಪ್ರದೇಶ:** ಬಾಲಿವುಡ್ ನಟ ಶ್ರೇಯಸ್ ತಲ್ಪಡೆ ಅವರು ಕಡಿಮೆ ಸಮಯದಲ್ಲಿ ಲಾಭ ಗಳಿಸುವುದಾಗಿ ಭರವಸೆ ನೀಡಿ ಗ್ರಾಮಸ್ಥರಿಂದ ನೂರಾರು ಕೋಟಿ ರೂಪಾಯಿಗಳನ್ನು ಸುಲಿಗೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ. ಈ ಪ್ರಕರಣದಲ್ಲಿ ಈಗಾಗಲೇ ಅನೇಕ ಜನರ ವಿರುದ್ಧ ದೂರುಗಳು ದಾಖಲಾಗಿವೆ. ಪುಷ್ಪ 2ರ ಹಿಂದಿ ಆವೃತ್ತಿಯಲ್ಲಿ ಅಲ್ಲು ಅರ್ಜುನ್ ಪಾತ್ರಕ್ಕೆ ಅವರು ಡಬ್ ಮಾಡಿದ್ದಾರೆ.



ತಮ್ಮ ಸಹಜ ನಟನೆಯಿಂದ ಪ್ರೇಕ್ಷಕರನ್ನು ರಂಜಿಸಿದ್ದ ಈ ನಟ ಈಗ ಸಂಕಷ್ಟದಲ್ಲಿ ಸಿಲುಕಿದ್ದಾರೆ. ನೂರಾರು ಕೋಟಿ ರೂಪಾಯಿಗಳ ಹಗರಣದ ಆರೋಪದ ಮೇಲೆ ಶ್ರೇಯಸ್ ತಲ್ಪಡೆ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಉತ್ತರ ಪ್ರದೇಶದ ಮಹೋಬಾ ಜಿಲ್ಲೆಯ ಸಹಕಾರಿ ಸಂಘವೊಂದು ಚಿಟ್ ಫಂಡ್ ಹೆಸರಿನಲ್ಲಿ ಗ್ರಾಮಸ್ಥರಿಂದ ಭಾರಿ ಮೊತ್ತದ ಹಣವನ್ನು ಸಂಗ್ರಹಿಸಲಾಗಿದೆ. ಅದು ಸಾರ್ವಜನಿಕರಿಂದ ಹಣವನ್ನು ಪಡೆದು ಕಡಿಮೆ ಸಮಯದಲ್ಲಿ ಅದನ್ನು ದ್ವಿಗುಣಗೊಳಿಸುವುದಾಗಿ ಭರ ವಸೆ ನೀಡಿ, ನಂತರ ಕೈಬಿಟ್ಟಿತು. ಈ ವಂಚನೆ ಕಳೆದ ಒಂದು ದಶಕ ದಿಂದ ನಡೆಯುತ್ತಿದೆ. ವಂಚನೆ ಬೆಳಕಿಗೆ ಬಂದ ನಂತರ, ಸಂಬಂಧಿತ ಅಧಿಕಾರಿಗಳು ದೂರು ದಾಖಲಿಸಿದರು. ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಬಾಲಿವುಡ್ ನಟ ಶ್ರೇಯಸ್ ತಲ್ಪಡೆ, ಇತರ 14 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆದರೆ ಶ್ರೇಯಸ್ ತಲ್ಪಡೆ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. ತಮ್ಮ ವಿರುದ್ಧದ ಆರೋಪಗಳು ಆಧಾರರಹಿತ ಎಂದಿದ್ದಾರೆ.

ಸೋಶಿಯಲ್ ಮೀಡಿಯಾ ಮೂಲಕ ಅವರ ತಂಡದವರು ಸ್ಪಷ್ಟನೆ ನೀಡಿದ್ದಾರೆ. ಬೇರೆ ಎಲ್ಲಾ ಸೆಲೆಬ್ರಿಟಿಗಳ ರೀತಿ ಶ್ರೇಯಸ್ ತಲ್ಪಡೆ ಅವರಿಗೂ ಹಲವು ಕಾರ್ಯಕ್ರಮಗಳಿಗೆ ಆಹ್ವಾನ ಬರುತ್ತದೆ. ಸಾಧ್ಯವಾದಾಗ ಅವರು ಅಂತಹ ಕಾರ್ಯಕ್ರಮಗಳಿಗೆ ತೆರಳುತ್ತಾರೆ. ಅದನ್ನು ಹೊರತುಪಡಿಸಿದರೆ ಅವರಿಗೆ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟನೆ ನೀಡಲಾಗಿದೆ.

# ಛತ್ತೀಸ್‌ಗಡದಲ್ಲಿ 16 ಮಾವೋವಾದಿಗಳ ಎನ್‌ಕೌಂಟರ್

## ಪ್ರಸಕ್ತ ವರ್ಷ ಮಾವೋವಾದಿ ನಕ್ಸಲೀಯರ ಸಾವಿನ ಸಂಖ್ಯೆ 81ಕ್ಕೆ ತಲುಪಿದೆ

**ರಾಯಪುರ:** ಇಲ್ಲಿನ ಗಡಿಯಲ್ಲಿರುವ ಉಪಂಪಲ್ಲಿ ಕೇರ್ಲಾಪಾಲ್ ಪ್ರದೇಶದ ಅರಣ್ಯದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ 16 ಮಾವೋವಾದಿಗಳು ಸಾವನ್ನಪ್ಪಿ, ಇಬ್ಬರು ಜವಾನರು ಗಾಯಗೊಂಡಿರುವ ಘಟನೆ ಇಂದು ಮುಂಜಾನೆ ನಡೆದಿದೆ. ಜನವರಿ 21 ರಂದು ಗರಿಯಾಬಂದ್‌ನಲ್ಲಿ ನಡೆದ ಎನ್‌ಕೌಂಟರಲ್ಲಿ 16 ನಕ್ಸಲರನ್ನು ಹತ್ಯೆ ಮಾಡಿದ ನಂತರ ಭದ್ರತಾ ಸಿಬ್ಬಂದಿ ನಡೆಸಿದ ಅತೀ ದೊಡ್ಡ ಕಾರ್ಯಾಚಾರಣೆ ಇದಾಗಿದೆ.

ಕೇರ್ಲಾಪಾಲ್ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯದಲ್ಲಿ ಮುಂಜಾನೆ ಗುಂಡಿನ ಚಕಮಕಿ ನಡೆದಿದ್ದು, ಭದ್ರತಾ ಪಡೆಗಳ ಜಂಟಿ ತಂಡವು ನಕ್ಸಲೀಯರ ವಿರುದ್ಧ ಕಾರ್ಯಾಚರಣೆಯನ್ನು ಮುಂದುವರೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇರ್ಲಾಪಾಲ್ ಪ್ರದೇಶದಲ್ಲಿ ಮಾವೋವಾದಿಗಳು ಬೀಡು ಬಿಟ್ಟಿರುವ ಬಗ್ಗೆ ಗುಪ್ತಚರವನ್ನು ಆಧರಿಸಿ ಮೀಸಲು ಗಾರ್ಡ್ (ಡಿಆರ್‌ಜಿ), ಕೇಂದ್ರೀಯ ಮೀಸಲು ಪೊಲೀಸ್ ಪಡೆ ಸಿಬ್ಬಂದಿಯೂ ಕಾರ್ಯಾಚರಣೆ ಯನ್ನು ನಡೆಸಿತ್ತು. ಇದರಲ್ಲಿ 16 ಮಾವೋವಾದಿಗಳು ಸಾವನ್ನಪ್ಪಿದ್ದಾರೆ, ಇಬ್ಬರು ಜವಾನರು ಗಾಯಗೊಂಡಿದ್ದಾರೆ. ಹದಿನಾರು ನಕ್ಸಲೀಯರ ಶವಗಳನ್ನು ಇಲ್ಲಿಯವರೆಗೆ ಎನ್ ಕೌಂಟರ್ ನಡೆದ ಸ್ಥಳದಿಂದ ವಶಪಡಿಸಿಕೊಳ್ಳಲಾಗಿದೆ, ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ.

ಕಾರ್ಯಾಚರಣೆ ವೇಳೆ ಇಬ್ಬರು ಭದ್ರತಾ ಸಿಬ್ಬಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ.



**ಛತ್ತೀಸ್‌ಗಢದ ಬಸ್ತಾರ್ ಪ್ರದೇಶದಲ್ಲಿ ಸುಕ್ತಾ ಅತ್ಯಂತ ಹೆಚ್ಚು ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಹಿಂದೆ ಹಲವಾರು ನಕ್ಸಲ್ ದಾಳಿಗಳನ್ನು ಈ ಪ್ರದೇಶದಲ್ಲಿ ಕಂಡಿದ್ದೇವೆ. ಇನ್ನು ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರು ಇರಿಸಿದ್ದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಗೊಂಡ ಒಬ್ಬ ಸಿಬ್ಬಂದಿ ಗಾಯಗೊಂಡಿದ್ದಾರೆ.**

ಪ್ರಾಥಮಿಕ ಚಿಕಿತ್ಸೆಯ ನಂತರ, ಗಾಯಗೊಂಡ ಸೈನಿಕನ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಿದ್ದಾರೆ.

ಫೆಬ್ರವರಿಯಲ್ಲಿ, ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯ ಇಂದ್ರಾವತಿ ರಾಷ್ಟ್ರೀಯ ಉದ್ಯಾನವನದ ಕಾಡಿನಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಮೂವತ್ತೊಂದು ಮಾವೋವಾದಿಗಳು ಮತ್ತು ಇಬ್ಬರು ಭದ್ರತಾ ಸಿಬ್ಬಂದಿ ಹತರಾಗಿದ್ದರು. ಇದು ಈ ವರ್ಷ ಎಡಪಂಥೀಯ ಉಗ್ರಗಾಮಿಗಳ ಮೇಲೆ ನಡೆಸಿದ ಅತಿ ದೊಡ್ಡ ಕಾರ್ಯಾಚಾರಣೆ ಇದಾಗಿದೆ. ಪ್ರಸಕ್ತ ವರ್ಷ ಮಾವೋ ವಾದಿ ನಕ್ಸಲೀಯರ ಸಾವಿನ ಸಂಖ್ಯೆ 81 ಕ್ಕೆ ತಲುಪಿದೆ.

**ಇನ್ನು ಇದೇ ವೇಳೆ ಛತ್ತೀಸ್ ಗಢದ ಬೆಡ್ಡಕೋಟಿಯ ಬಳಿ ಇಟ್ಟಿದ್ದ ಮತ್ತೊಂದು ಐಇಡಿ ಸ್ಫೋಟಗೊಂಡು ಮತ್ತೊಂಬ ಸಿಬ್ಬಂದಿ ಗಾಯಗೊಂಡಿದ್ದಾರೆ. ಗಾಯಗೊಂಡ ಸೈನಿಕನಿಗೆ ನಾರಾಯಣಪುರದ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಗುತ್ತಿದೆ**

**-ಸುಂದರರಾಜ್ ಪಿ**
**ಬಸ್ತಾರ್ ಇನ್ಸ್‌ಪೆಕ್ಟರ್ ಜನರಲ್**

ಭದ್ರತಾ ಪಡೆಗಳು ನಡೆಸಿದ ಮಾವೋ ವಾದಿ ವಿರೋಧಿ ಕಾರ್ಯಾಚರಣೆಯನ್ನು ವಿರೋಧಿಸಿ ಮುಷ್ಕರ ನಡೆಸಲಾಗಿತ್ತು. ಬೆಳಿಗ್ಗೆ 8 ಗಂಟೆಯ ಸುಮಾರಿಗೆ ಎನ್‌ಕೌಂಟರ್‌ನಲ್ಲಿ ಅಂತ್ಯಗೊಂಡಿತು ಎಂದು ಪೊಲೀಸ್ ಮಹಾನಿರೀಕ್ಷಕ (ಬಸ್ತರ್ ರೇಂಜ್), ಸುಂದರರಾಜ್ ಪಿ. ಮಾಹಿತಿ ನೀಡಿದ್ದಾರೆ.

ಸಿಪಿಐ (ಮಾವೋವಾದಿ) ರಾಷ್ಟ್ರೀಯ ಉದ್ಯಾನವನ ಪ್ರದೇಶ ಸಮಿತಿಯಿಂದ ದಂಗೆಕೋರರ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಗುಪ್ತಚರ ನಂತರ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಭದ್ರತಾ ಪಡೆಗಳು ಪ್ರಸ್ತುತ ಎನ್‌ಕೌಂಟರ್ ಸ್ಥಳ ಮತ್ತು ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ತೀವ್ರ ಶೋಧ ನಡೆಸುತ್ತಿವೆ.

ನಡೆಯುತ್ತಿರುವ ಕಾರ್ಯಾಚರಣೆ ಪೂರ್ಣಗೊಂಡ ನಂತರ ವಿವರವಾದ ಹೇಳಿಕೆಯನ್ನು ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಮ್ಯಾನ್ಮಾರ್‌ಗೆ ಭಾರತದ 80 ಎನ್‌ಡಿಆರ್‌ಎಫ್ ಸಿಬ್ಬಂದಿ



**ಮ್ಯಾನ್ಮಾರ್:** ಭೂಕಂಪ ಪೀಡಿತ ಮ್ಯಾನ್ಮಾರ್‌ನಲ್ಲಿ ಪರಿಹಾರ, ರಕ್ಷಣಾ ಕಾರ್ಯಕ್ಕಾಗಿ 80 ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ತುಕಡಿಯನ್ನು ನಿಯೋಜಿಸಲು ಭಾರತ ನಿರ್ಧರಿಸಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ. ನೆರೆಯ ದೇಶಕ್ಕೆ ಸಹಾಯ ಮಾಡಲು ಫೆಡರಲ್ ವಿಪತ್ತು ಆಕಸ್ಮಿಕ ಪಡೆಯ ಸಿಬ್ಬಂದಿಯನ್ನು ಆಪರೇಷನ್ ಬ್ರಹ್ಮ ಅಡಿಯಲ್ಲಿ ಭೂಕಂಪ ರಕ್ಷಣಾ ಸಾಧನಗಳೊಂದಿಗೆ ನಿಯೋಜಿಸಲಾಗುತ್ತಿದೆ.

80 ಎನ್‌ಡಿಆರ್‌ಎಫ್ ಸಿಬ್ಬಂದಿಯ ತಂಡವನ್ನು ಮ್ಯಾನ್ಮಾರ್‌ಗೆ ಕಳುಹಿಸಲಾಗುತ್ತಿದೆ.

ತಂಡ ಶನಿವಾರ ಸಂಜೆಯ ವೇಳೆಗೆ ತಲುಪುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಕಮಾಂಡೆಂಟ್ ಶ್ರೇಣಿಯ ಅಧಿಕಾರಿಯೊಬ್ಬರು ತಂಡವನ್ನು ಮುನ್ನಡೆಸಲಿದ್ದಾರೆ. ಶನಿವಾರ ಭಾರತ ಮ್ಯಾನ್ಮಾರ್‌ನ ಯಾಂಗೂನ್ ನಗರಕ್ಕೆ ಭಾರತೀಯ ವಾಯುಪಡೆಯ ಅ130ಎ ಮಿಲಿಟರಿ ಸಾರಿಗೆ ವಿಮಾನದ ಮೂಲಕ ಸುಮಾರು 15 ಟನ್ ಪರಿಹಾರ ಸಾಮಗ್ರಿಗಳನ್ನು ಕಳುಹಿಸಿದೆ.

**ಮ್ಯಾನ್ಮಾರ್‌ಗೆ ಭಾರತದ ನೆರವು**

**ಮ್ಯಾನ್ಮಾರ್, ನೆರೆಯ ಥೈಲ್ಯಾಂಡ್ ತೀವ್ರ ಭೂಕಂಪದಿಂದ ನಲುಗಿಹೋಗಿದ್ದು, ಕಟ್ಟಡಗಳು, ಸೇತುವೆಗಳು ಮತ್ತು ಇತರ ಮೂಲಸೌಕರ್ಯಗಳು ನಾಶವಾಗಿವೆ. ಮ್ಯಾನ್ಮಾರ್‌ನಲ್ಲಿ ಕನಿಷ್ಠ 1,002 ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. 2015ರ ನೇಪಾಳ ಭೂಕಂಪ, 2023ರ ಟರ್ಕಿಯೆ ಭೂಕಂಪದ ಸಮಯದಲ್ಲಿಯೂ ಭಾರತ ಎನ್‌ಡಿಆರ್‌ಎಫ್‌ನ್ನು ನಿಯೋಜಿಸಿತ್ತು.**

ಪ್ರಧಾನಿ ನರೇಂದ್ರ ಮೋದಿ ವಿನಾಶಕಾರಿ ಭೂಕಂಪದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಭಾರತ ಎರಡೂ ದೇಶಗಳಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಲು ಸಿದ್ಧವಾಗಿದೆ ಎಂದು ಹೇಳಿದರು.

ಭಾರತ ಪೂರ್ವ ಭಾಗದಲ್ಲಿ ಮ್ಯಾನ್ಮಾರ್‌ನೊಂದಿಗೆ 1,643 ಕಿಮೀ ಉದ್ದದ ಗಡಿಯನ್ನು ಹಂಚಿಕೊಂಡಿದೆ.

# ಅಫ್ಘಾನಿಸ್ತಾನದಲ್ಲಿ 30 ನಿಮಿಷದ ಅಂತರದಲ್ಲಿ ಎರಡು ಭೂಕಂಪ

**ನವದೆಹಲಿ:** ಅಫ್ಘಾನಿಸ್ತಾನದಲ್ಲಿ ಒಂದೇ ದಿನ 4ಕ್ಕಿಂತ ಹೆಚ್ಚು ತೀವ್ರತೆಯ ಎರಡು ಭೂಕಂಪಗಳು ಸಂಭವಿಸಿವೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಹೇಳಿದೆ. ಭಾರತೀಯ ಕಾಲಮಾನ ಬೆಳಿಗ್ಗೆ 4.51ಕ್ಕೆ ಮೊದಲ ಭೂಕಂಪನ ಸಂಭವಿಸಿದ್ದು, ಅದರ ತೀವ್ರತೆ 4.3ರಷ್ಟಿತ್ತು. 5.16ಕ್ಕೆ ನಡೆದ ಎರಡನೇ ಭೂಕಂಪದ ತೀವ್ರತೆ 4.7ರಷ್ಟಿತ್ತು ಎಂದು ಅದು ಮಾಹಿತಿ ನೀಡಿದೆ.

ಅಫ್ಘಾನ್ ರಾಜಧಾನಿ ಕಾಬೂಲ್‌ನಿಂದ 280 ಕಿ.ಮೀ ದೂರದಲ್ಲಿ ಈ ಎರಡೂ ಭೂಕಂಪಗಳ ಕೇಂದ್ರ ಬಿಂದು ಇತ್ತು. ಭೂಕಂಪನದ ಆಳ 180 ಕಿ.ಮೀ ಇತ್ತು ಎಂದು ಅದು ಮಾಹಿತಿ ನೀಡಿದೆ.

ಮ್ಯಾನ್ಮಾರ್‌ನಲ್ಲಿ ಪ್ರಬಲವಾದ ಎರಡು ಭೂಕಂಪನಗಳು ಸಂಭವಿಸಿ, ಭಾರಿ ಹಾನಿಯಾದ ಮರುದಿನವೇ ಅಫ್ಘಾನಿಸ್ತಾನದಲ್ಲಿ ಭೂಕಂಪ ಉಂಟಾಗಿದೆ. ಬ್ಯಾಂಕಾಕ್‌ನಲ್ಲೂ ಕಂಪನ ಉಂಟಾಗಿ, ನಿರ್ಮಾಣ ಹಂತದಲ್ಲಿದ್ದ 30 ಅಂತಸ್ತಿನ ಕಟ್ಟಡ ಧರೆಗುರುಳಿತ್ತು. ಹಲವು ಕಟ್ಟಡಗಳು ನಡುಗಿದ್ದವು.



# ಶೂಟಿಂಗ್ ಸೆಟ್‌ನಲ್ಲಿ ಇರಲ್ಲ ಹೇಳಿದ ಟೈಮ್‌ಗೆ ಬರಲ್ಲ

## ಖಡಕ್ ಟಕ್ಕರ್ ಕೊಟ್ಟ ಸಲ್ಲು

ಅದ್ದೂರಿ ಬಿಡುಗಡೆಗೂ ಮುನ್ನ, ಚಿತ್ರದ ಬಗ್ಗೆ ಮಾತನಾಡಿದ್ದಾರೆ. ಸಲ್ಮಾನ್ ಅವರು ಸೆಟ್‌ಗೆ ತಡವಾಗಿ ಬರ್ತಾರೆ, ಕೆಲಸ ಬಗ್ಗೆ ಗಂಭೀರತೆ ಇಲ್ಲ ಎಂಬ ವದಂತಿ ಸಾಕಷ್ಟು ವೈರಲ್ ಆಗಿತ್ತು. ಇದೀಗ ಈ ಬಗ್ಗೆ ಸ್ವತಃ ಸಲ್ಲು ಅವರೇ ಮಾತನಾಡಿದ್ದಾರೆ. ಅದ್ದೂರಿ ಬಿಡುಗಡೆಗೂ ಮುನ್ನ, ಚಿತ್ರದ ಬಗ್ಗೆ ಮಾತನಾಡಿದ್ದಾರೆ. ಕೆಲಸ ಬಗ್ಗೆ ಗಂಭೀರತೆ ಇಲ್ಲ ಎಂಬ ವದಂತಿ ಸಾಕಷ್ಟು ವೈರಲ್ ಆಗಿತ್ತು. ನಾನು ತಡವಾಗಿ ಬರುತ್ತೇನೆ ಮತ್ತು ನನ್ನ ಕೆಲಸದ ಬಗ್ಗೆ ಗಂಭೀರವಾಗಿಲ್ಲ ಎಂಬ ಬಗ್ಗೆ ಅನೇಕ ವದಂತಿಗಳಿವೆ . ನನ್ನ ಹಿರಿಯ ನಟರನ್ನು ಹೊರತುಪಡಿಸಿ ನಾನು 100 ಕ್ಕೂ ಹೆಚ್ಚು ಚಲನಚಿತ್ರಗಳನ್ನು ಮಾಡಿದ್ದೇನೆ. ನಾನು ನಿರಂತರವಾಗಿ ತಡವಾಗಿ ಬಂದರೆ ಅಥವಾ ಬೇಗನೆ ಹೊರಟು ಹೋದರೆ ಇದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. 100 ಸಿನಿಮಾಗಳಲ್ಲೂ ಶಿಸ್ತು ಇದೆ, ಆದರೆ ನನ್ನ ಸಮಯ ಹೀಗಿದೆ. ಕೆಲವರು ಬೆಳಿಗ್ಗೆ 6 ಗಂಟೆಗೆ ಕೆಲಸ ಮಾಡಲು ಪ್ರಾರಂಭಿಸುತ್ತಾರೆ, ನಾನು ಸುಮಾರು 11:30-12 ರ ಸುಮಾರಿಗೆ ಪ್ರಾರಂಭಿಸುತ್ತೇನೆ ಏಕೆಂದರೆ ನನಗೆ ಬಹಳಷ್ಟು ಪೇಪರ್‌ಗಳಿಗೆ ಸಹಿ ಹಾಕುವುದು, ಕರೆ ಮಾಡುವುದು ಮತ್ತು ವ್ಯಾಯಾಮ ಮಾಡುವಂತಹ ಇತರ ಕೆಲಸಗಳಿವೆ.

# ಸೆಟ್ ಆಗೋಲ್ಲ ಹೋಗೆ

ಧ್ರುವ ಸರ್ಜಾ ನಟನೆಯ ಪ್ಯಾನ್ ಇಂಡಿಯಾ 'ಕೆಡಿ' ಸಿನಿಮಾದ ಸಾಂಗ್ ರಿಲೀಸ್ ಆಗಿದೆ. ರೀಷ್ಮಾ ನಾಣಯ್ಯಗೆ 'ಸೆಟ್ ಆಗೋಲ್ಲ ಹೋಗೆ ನಂಗು ನಿಂಗು' ಎನ್ನುತ್ತಾ ಧ್ರುವ ಸರ್ಜಾ ಹೆಜ್ಜೆ ಹಾಕಿದ್ದಾರೆ. ಈ ಸಾಂಗ್ ಸಖತ್ ಕ್ರೇಜಿ ಆಗಿ ಮೂಡಿ ಬಂದಿದೆ. ಇದು ಫ್ಯಾನ್ಸ್ ಸಖತ್ ಇಷ್ಟ ಆಗಿದೆ. 'ಕೆಡಿ' ಸಿನಿಮಾದಲ್ಲಿ 'ಸೆಟ್ ಆಗೋಲ್ಲ ಹೋಗೆ ನಂಗು ನಿಂಗು' ಹಾಡಿಗೆ ಧ್ರುವ ಸರ್ಜಾ ಮತ್ತು ನಾಯಕಿ ರೀಷ್ಮಾ ಮಸ್ತ್ ಆಗಿ ಹೆಜ್ಜೆ ಹಾಕಿದ್ದಾರೆ. ಸಿನಿಮಾದಲ್ಲಿನ ರಿಯಲ್ ಲುಕ್ ರಿವೀಲ್ ಮಾಡದೆ ಇಬ್ಬರೂ ಟ್ರ್ಯಾಕ್ ಸೂಟ್‌ನಲ್ಲಿ ಡ್ಯಾನ್ಸ್ ಮಾಡಿದ್ದಾರೆ. ಪ್ರೇಮ್ ಬರೆದಿರುವ ಕ್ಯಾಚಿ ಲಿರಿಕ್ಸ್‌ಗೆ ಮಿಕಾ ಸಿಂಗ್ ಸೊಗಸಾಗಿ ಹಾಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ಈಗೀನ ಜನರೇಷನ್ ಯೂತ್ಸ್‌ಗೆ ಹಾಡು ಕನೆಕ್ಟ್ ಆಗೋ ವಿಭಿನ್ನವಾಗಿ ಸಾಂಗ್ ಮಾಡಿದ್ದಾರೆ. ಪ್ರೇಮ್ ನಿರ್ದೇಶನದ ಈ ಚಿತ್ರದಲ್ಲಿ ಧ್ರುವ ಸರ್ಜಾ, ರೀಷ್ಮಾ ಜೊತೆ ಬಾಲಿವುಡ್ ನಟ ಸಂಜಯ್ ದತ್, ಶಿಲ್ಪಾ ಶೆಟ್ಟಿ ರವಿಚಂದ್ರನ್, ರಮೇಶ್ ಅರವಿಂದ್, ನೋರಾ ಫತೇಹಿ ನಟಿಸಿದ್ದಾರೆ. ಕೆವಿಎನ್ ಸಂಸ್ಥೆ ಈ ಚಿತ್ರವನ್ನು ನಿರ್ಮಾಣ ಮಾಡಿದೆ. ಸದ್ಯದಲ್ಲೇ ರಿಲೀಸ್ ಡೇಟ್ ಬಗ್ಗೆ ಚಿತ್ರತಂಡ ರಿವೀಲ್ ಮಾಡಲಿದೆ.





# ಬೆಡ್‌ರೂಮ್ ಫೋಟೋ ಹಂಚಿಕೊಂಡ ರಕುಲ್

ಕನ್ನಡದ 'ಗಿಲ್ಲಿ' ನಟಿ ರಕುಲ್ ಪ್ರೀತ್ ಸಿಂಗ್ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ಸದ್ದು ಮಾಡುತ್ತಲೇ ಇರುತ್ತಾರೆ. ಇದೀಗ ಬೆಡ್‌ರೂಮ್ ಫೋಟೋಶೂಟ್ ಹಂಚಿಕೊಂಡು ಸಖತ್ ವೈರಲ್ ಆಗ್ತಿದ್ದಾರೆ. ನಟಿಯ ಪೋಸ್ಟ್ ನೋಡಿ 'ನಿನ್ನ ಗಂಡ ಎಲ್ಲಮ್ಮ' ಎಂದು ನೆಟ್ಟಿಗರು ಕಾಲೆಳೆದಿದ್ದಾರೆ. ಪಿಂಕ್ ಡ್ರೆಸ್‌ನಲ್ಲಿ ರಕುಲ್ ಮಿಂಚಿದ್ದಾರೆ. ವಿವಿಧ ಭಂಗಿಯಲ್ಲಿ ನಟಿ ಬೋಲ್ಡ್ ಆಗಿ ಪೋಸ್ ನೀಡಿದ್ದಾರೆ. 'ನಗುವುದು ಕೂಡ ಜೀವನದ ಒಂದು ವಿಧಾನ' ಎಂದು ಹೊಸ ಪೋಸ್ಟ್‌ಗೆ ರಕುಲ್ ಅಡಿಬರಹ ನೀಡಿದ್ದಾರೆ. ಸಿನಿಮಾದಲ್ಲಿ ಚಾನ್ಸ್ ಗಿಟ್ಟಿಸಿಕೊಳ್ಳಲು ಇದು ನಿಮ್ಮ ದಾರಿ ಎಂದೆಲ್ಲಾ ನಟಿಗೆ ನೆಟ್ಟಿಗರು ಟೀಕಿಸಿದ್ದಾರೆ. ಬಗೆ ಬಗೆಯ ಕಾಮೆಂಟ್‌ಗಳು ನಟಿಯ ಪೋಸ್ಟ್‌ಗೆ ಹರಿದು ಬರುತ್ತಿವೆ. ರಕುಲ್‌ಗೆ ಈಗ ಬೇಡಿಕೆ ಕಮ್ಮಿಯಾಗಿದೆ. ಆಗೊಂದು ಈಗೊಂದು ಸಿನಿಮಾ ಮಾಡ್ತಿರುತ್ತಾರೆ. ತೆಲುಗು, ತಮಿಳು ಮತ್ತು ಬಾಲಿವುಡ್ ಸಿನಿಮಾಗಳಲ್ಲಿ ನಟಿ ಕಾಣಿಸಿಕೊಳ್ಳುತ್ತಿದ್ದಾರೆ.

ತಮಿಳಿನ 'ದಿಶಾ', ಬಾಲಿವುಡ್‌ನ 'ದೇ ದೇ ಪ್ಯಾರ್ ದೇ 2' ಸಿನಿಮಾಗಳಲ್ಲಿ ರಕುಲ್ ನಟಿಸುತ್ತಿದ್ದಾರೆ. ಸಾಲು ಸಾಲು ಸಿನಿಮಾ ಸೋಲುಗಳಿಂದ ಕಂಗಲಾಗಿರೋ ನಟಿ, ಈಗ ಯಶಸ್ಸಿಗಾಗಿ ಎದುರು ನೋಡ್ತಿದ್ದಾರೆ. 2024ರಲ್ಲಿ ನಿರ್ಮಾಪಕ ಕಮ್ ನಟ ಜಾಕಿ ಭಗ್ನಾನಿ ಜೊತೆ ರಕುಲ್ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಹಲವು ವರ್ಷಗಳ ಪ್ರೀತಿಗೆ ನಟಿ ಮದುವೆಯ ಮುದ್ರೆ ಒತ್ತಿದ್ದರು.



# ರಾಯಲ್ ಫ್ಯಾಮಿಲಿ ಚೆಲುವೆ!

ರಿಯಾ ಸೇನ್ ಬಾಲಿವುಡ್‌ನಲ್ಲಿ ಯಶಸ್ವಿ ವೃತ್ತಿಜೀವನವನ್ನು ಹೊಂದಿದ್ದರು. ಆದರೆ ಎಂಎಂಎಸ್ ಹಗರಣದ ನಂತರ ಅವರ ವೃತ್ತಿಜೀವನ ಹಾಳಾಯಿತು. ಈ ಸ್ಟಾರ್ ನಟಿಯ ಕುಟುಂಬವು ಚಲನಚಿತ್ರಗಳೊಂದಿಗೆ ಮಾತ್ರವಲ್ಲದೆ ರಾಜ ಮನೆತನದೊಂದಿಗೂ ಆಳವಾದ ಸಂಬಂಧವನ್ನು ಹೊಂದಿದೆ. ಅವರ ಸೂಪರ್ ಹಿಟ್ ಚೊಚ್ಚಲ ಚಿತ್ರದ ನಂತರ, ಜನರು ಅವರನ್ನು ದೊಡ್ಡ ತಾರೆ ಎಂದು ಪರಿಗಣಿಸಲು ಪ್ರಾರಂಭಿಸಿದರು. ಆದರೆ ಎಂಎಂಎಸ್ ಹಗರಣದ ನಂತರ, ಅವರು ಎಷ್ಟು ಕುಖ್ಯಾತರಾದರು ಎಂದರೆ ಅವರ ಅದ್ಭುತ ವೃತ್ತಿಜೀವನ ರಾತ್ರೋರಾತ್ರಿ ಹಾಳಾಗಿ ಹೋಯಿತು. ನಟಿಯ ಸಹೋದರಿ, ತಾಯಿ ಮತ್ತು ಅಜ್ಜಿ ಪ್ರಸಿದ್ಧ ನಾಯಕಿಯರು. ಅವರು ಕೂಡ ರಾಜಮನೆತನಕ್ಕೆ ಸೇರಿದವರು.

ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದ ನಂತರ, ಅವರನ್ನು ಮುಂದಿನ ಸ್ಟಾರ್ ನಟಿ ಎಂದು ಬಿಂಬಿಸಲಾಯಿತು. ಅವರು ತನ್ನ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆಂದು ಅವರು ಭಾವಿಸಿದ್ದರು. ಆದರೆ ಒಂದು ಎಂಎಂಎಸ್ ಹಗರಣ ಎಲ್ಲವನ್ನೂ ಹಾಳು ಮಾಡಿತು. ಆ ಸುಂದರ ಯುವತಿ ಹೇಗೋ ಎರಡನೇ ದರ್ಜೆಯ ನಟಿಯಾಗಿಯೇ ಉಳಿದಿದ್ದಾರೆ.




# ನಟ ವಿಜಯ್ ಇನ್ಮುಂದೆ ದಳಪತಿ ಅಲ್ಲ

## ಹೊಸ ಟೈಟಲ್ ಏನ್ ಗೊತ್ತಾ

ಕಾಲಿವುಡ್ ನಟ ದಳಪತಿ ವಿಜಯ್ ಅವರು ರಾಜಕೀಯ ಕೆಲಸಗಳಲ್ಲಿ ಬ್ಯುಸಿಯಾಗಿದ್ದಾರೆ. ಕೊನೆಯ ಸಿನಿಮಾದ ಜೊತೆ ಜೊತೆಗೆ ವಿಜಯ್ ಅವರು ರಾಜಕೀಯದಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಆದರೆ ಅವರ ಕುರಿತಾದ ಇತ್ತೀಚಿನ ಸುದ್ದಿಯೊಂದು ಈಗ ವೈರಲ್ ಆಗಿದೆ. ಟಿವಿಕೆ ಸಭೆಯಲ್ಲಿ ಆಧವ್ ಅರ್ಜುನ್ ಅವರು ವಿಜಯ್ ಅವರು ಇನ್ಮುಂದೆ ದಳಪತಿ ವಿಜಯ್ ಅಲ್ಲ, ಅವರು ವೆಟ್ರಿ ತಲೈವರ್ ವಿಜಯ್ ಎಂದು ಕರೆದಿದ್ದಾರೆ. ಈ ಮೂಲಕ ನಟನಿಗೆ ಹೊಸ ಟೈಟಲ್ ನೀಡಲಾಗಿದೆ. ವಿಜಯ್ ಅವರನ್ನು ಈವರೆಗೆ ದಳಪತಿ ವಿಜಯ್ ಎಂದೇ ಎಲ್ಲರೂ ಕರೆಯುತ್ತಿದ್ದರು. ಮುಂದಿನ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಪಕ್ಷ ಸ್ಪರ್ಧಿಸಲಿದೆ ಎನ್ನಲಾಗಿದೆ. ನಟ ತಮಿಳುನಾಡಿನ ಆಡಳಿತಾರೂಢ ಪಕ್ಷ ಡಿಎಂಕೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿಯ ಮೇಲೆ ತೀವ್ರ ದಾಳಿ ನಡೆಸಿದರು. ಟಿವಿಕೆಯ ಮೊದಲ ಸಾಮಾನ್ಯ ಮಂಡಳಿ ಸಭೆಯಲ್ಲಿ, ಅವರು ಗಡಿ ನಿರ್ಣಯ, 'ಹಿಂದಿ ಹೇರಿಕೆ', ಜಿಎಸ್‌ಟಿ ಸಂಗ್ರಹಗಳ ವಿಕೇಂದ್ರೀಕರಣದ ಬಗ್ಗೆ ಮಾತನಾಡಿದರು. ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಕೇಂದ್ರದ 'ಒಂದು ರಾಷ್ಟ್ರ, ಒಂದು ಚುನಾವಣೆ' ಯೋಜನೆಯ ಬಗ್ಗೆಯೂ ನಟ ಟೀಕೆಗಳನ್ನು ವ್ಯಕ್ತಪಡಿಸಿದರು.

## ರೋಹಿತ್ ಪಡೆಗೆ ಮತ್ತೊಂದು ಸೋಲು

# ಟೂರ್ನಿಯಲ್ಲಿ ಜಿಟಿಗೆ 2ನೇ ಗೆಲುವು



ಐಪಿಎಲ್ ಟೂರ್ನಿಯ ಒಂಬತ್ತನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ ಗೆಲುವಿನ ನಗೆ ಬೀರಿದೆ.

ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್‌ಗೆ ಇದು ಎರಡನೇ ಸೋಲಾಗಿದೆ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಹೀಗಾಗಿ ಬ್ಯಾಟ್ ಮಾಡಿದ ಗುಜರಾತ್ ಟೈಟಾನ್ಸ್ 196 ರನ್ ಗಳಿಸಿದೆ. ಕೊನೆಯ 3 ಓವರ್‌ಗಳಲ್ಲಿ ಮುಂಬೈ ತಂಡವು ಬಲಿಷ್ಠ ಆಟ ಪ್ರದರ್ಶಿಸಿ ಗುಜರಾತ್ ತಂಡವನ್ನು 200 ಕ್ಕಿಂತ ಕಡಿಮೆ ಸ್ಕೋರ್‌ಗೆ ಸೀಮಿತಗೊಳಿಸಿತು. ಟೈಟಾನ್ಸ್ ನೀಡಿದ 197 ರನ್‌ಗಳ ಗುರಿ ಬೆನ್ನಟ್ಟಿದ ಮುಂಬೈ ಇಂಡಿಯನ್ಸ್ ಆರಂಭ ಹಿನ್ನಡೆ ಅನುಭವಿಸಿತು. ರೋಹಿತ್ ಶರ್ಮಾ 8 ರನ್‌ಗಳಿಗೆ ಔಟಾದರೇ ರಯಾನ್ ರಿಕ್ಕೆಲ್ಟನ್ 6 ರನ್‌ಗೆ ಔಟಾಗಿ ಪೆವಿಲಿಯನ್ ಸೇರಿ ದರು. ತಿಲಕ್ ವರ್ಮಾ 39 ಹಾಗೂ ಸೂರ್ಯಕುಮಾರ್ ಯಾದವ್ 48 ರನ್ ಗಳಿಸಿದ್ದರು. ಆದರೆ ಪಂದ್ಯ ಗೆಲ್ಲಲು ನೆರವಾಗಲಿಲ್ಲ. ಇನ್ನುಳಿದ ಬ್ಯಾಟರ್ ಗಳು ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿದರು. ಅಂತಿಮವಾಗಿ ಮುಂಬೈ ಇಂಡಿಯನ್ಸ್ ನಿಗದಿತ ಓವರ್‌ನಲ್ಲಿ 160 ರನ್ ಗಳಿಸಲಷ್ಟೇ ಶಕ್ತವಾಯಿತು.

ಗುಜರಾತ್ ಪರ ಅತ್ಯಧಿಕ ಸ್ಕೋರ್ ಗಳಿಸಿದ್ದು ಸಾಯಿ ಸುದರ್ಶನ್ 63 ರನ್‌ಗಳ ಇನ್ನಿಂಗ್ಸ್ ಆಡಿದರು. ಪವರ್‌ಪ್ಲೇನಲ್ಲಿಯೇ ಜಿಟಿ ವಿಕೆಟ್ ಕಳೆದುಕೊಳ್ಳದೆ 66 ರನ್ ಗಳಿಸುವುದರೊಂದಿಗೆ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಮುಂಬೈ ತಂಡದ ನಿರ್ಧಾರ ತಪ್ಪು ಎಂದು ಆರಂಭದಲ್ಲಿ ಸಾಬೀತುಪಡಿಸಿದರು. 38 ರನ್ ಗಳಿಸಿದ್ದ ಗಿಲ್ ಅವರನ್ನು ಹಾರ್ದಿಕ್ ಪಾಂಡ್ಯ ಔಟ್ ಮಾಡಿದರು. ಗಿಲ್ ಜೊತೆಗೆ ಜೋಸ್ ಬಟ್ಲರ್ ಕೂಡ 24 ಎಸೆತಗಳಲ್ಲಿ 39 ರನ್ ಗಳಿಸಿ ಔಟಾದರು. 17 ಓವರ್‌ಗಳಲ್ಲಿ ಗುಜರಾತ್ ಟೈಟಾನ್ಸ್ ಸ್ಕೋರ್ 3 ವಿಕೆಟ್ ನಷ್ಟಕ್ಕೆ 170 ರನ್ ಆಗಿತ್ತು. ಆದರೆ ಆ ನಂತರ ಗುಜರಾತ್ ಬ್ಯಾಟ್ಸ್‌ಮನ್‌ಗಳು 3 ಓವರ್‌ಗಳಲ್ಲಿ ಕೇವಲ 26 ರನ್ ಗಳಿಸಲು ಸಾಧ್ಯವಾಯಿತು. ಕೊನೆಯ 18 ಎಸೆತಗಳಲ್ಲಿ ತಂಡವು ಒಟ್ಟು 5 ವಿಕೆಟ್‌ಗಳನ್ನು ಕಳೆದುಕೊಂಡಿತು. ಕೊನೆಯ 3 ಓವರ್ ಗಳಲ್ಲಿ ಗುಜರಾತ್ ತಂಡವು ಸಾಯಿ ಸುದರ್ಶನ್, ರಾಹುಲ್ ತೆವಾಟಿಯಾ, ಶೆರ್ಫಾನ್ ರುದರ್ಫೋರ್ಡ್, ರಶೀದ್ ಖಾನ್ ಮತ್ತು ಸಾಯಿ ಕಿಶೋರ್ ಅವರ ವಿಕೆಟ್‌ಗಳನ್ನು ಕಳೆದುಕೊಂಡಿತು. ಗುಜರಾತ್ ತಂಡದ ಇನ್ನಿಂಗ್ಸ್‌ನಲ್ಲಿ ಒಟ್ಟು 10 ಆಟಗಾರರು ಬ್ಯಾಟಿಂಗ್ ಮಾಡಲು ಬಂದರು. ತಂಡದ ಕೊನೆಯ ಆರು ಬ್ಯಾಟ್ಸ್‌ಮನ್‌ಗಳಲ್ಲಿ ಐವರು ಎರಡಂಕಿಯ ಗಡಿ ಮುಟ್ಟಲು ಸಹ ಸಾಧ್ಯವಾಗಲಿಲ್ಲ. ಈ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್ ತಂಡಕ್ಕೆ ಮರಳಿದ್ದಾರೆ. ಅವರ ನಾಯಕತ್ವದಲ್ಲಿ, ಮುಂಬೈ ಬೌಲಿಂಗ್ ಬಲವನ್ನು ತೋರಿಸಿದೆ. ಮುಂಬೈ ತಂಡದ ಒಟ್ಟು 6 ಆಟಗಾರರು ಬೌಲಿಂಗ್ ಮಾಡಿದರು. ಅದರಲ್ಲಿ ಐವರು ಕನಿಷ್ಠ ಒಂದು ವಿಕೆಟ್ ಪಡೆದರು. ನಾಯಕ ಹಾರ್ದಿಕ್ ಪಾಂಡ್ಯ ಗರಿಷ್ಠ 2 ವಿಕೆಟ್ ಪಡೆದರು. ಟ್ರೆಂಟ್ ಬೌಲ್ಟ್, ದೀಪಕ್ ಚಾಹರ್, ಮುಜೀಬ್ ಉರ್ ರೆಹಮಾನ್ ಮತ್ತು ರಾಜು ತಲಾ ಒಂದು ವಿಕೆಟ್ ಪಡೆದರು.

**ಸಾಯಿ ಸುದರ್ಶನ್ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲರ್‌ಗಳ ಅತ್ಯುತ್ತಮ ಪ್ರದರ್ಶನದ ಕಾರಣದಿಂದಾಗಿ ಗುಜರಾತ್ ಟೈಟಾನ್ಸ್, ಮುಂಬೈ ಇಂಡಿಯನ್ಸ್ ತಂಡವನ್ನು 36 ರನ್‌ಗಳಿಂದ ಸೋಲಿಸುವ ಮೂಲಕ ಗೆಲುವಿನ ಖಾತೆಯನ್ನು ತೆರೆಯಿತು.**















Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966